ಕರ್ನಾಟಕ ಸರ್ಕಾರ

# ಶಿಕ್ಷಣಶಾಸ್ತ್ರ

## ದ್ವಿತೀಯ ಪಿಯುಸಿ ಪಠ್ಯಪುಸ್ತಕ

**2015–16**

*ಪರಿಷ್ಕೃತ ಆವೃತ್ತಿ*

ಪದವಿ ಪೂರ್ವ ಶಿಕ್ಷಣ ಇಲಾಖೆ,

ಮಲ್ಲೇಶ್ವರಂ, ಬೆಂಗಳೂರು.

www.pue.kar.nic.in

© *Department of Pre-University Education* 2014-2015.

**All Rights Are Reserved**

No part of this publication may be reproduced, stored in a retrieval system or transmitted, in any form or by any means, electronic, mechanical, photo copying, recording or otherwise without the prior permission of the publisher.

*Revised Edition - 2015*

This book is sold subject to the condition that it shall not, by way of trade, be lent, resold, hired out or otherwise disposed of without the publisher's consent, in any form of binding or cover other than that in which it is published.

The correct price of this publication is the price printed on this page/cover page. Any revised price indicated by a rubber stamp or by a sticker or by any other means is incorrect and should be unacceptable.

*Printed on 80 GSM Maplitho paper*

The Karnataka Text Book Society ®
100 feet Ring Road, Banashankari
III Stage, BENGALURU - 560 085.

*Publisher :*
**SRI VENKATESHWARA ENTERPRISES**
#56/A, 9th Main, 1st Cross, Kaverinagar,
BSK II Stage, Banashankari Industrial Area
Bengaluru - 560 070.
Mobile : 94480 58802
Email : vinayaka1000@yahoo.com

## ಮುನ್ನುಡಿ

ಔಪಚಾರಿಕ ಶಿಕ್ಷಣ ಕ್ರಮದಲ್ಲಿ ಪದವಿಪೂರ್ವ ಶಿಕ್ಷಣ ಹಂತವು ಅತ್ಯಂತ ಮಹತ್ವದ ಹಂತವಾಗಿದ್ದು ವಿದ್ಯಾರ್ಥಿಗಳ ಜೀವನಕ್ಕೆ ಹೊಸ ತಿರುವನ್ನು ನೀಡಬಲ್ಲದು. ಈ ಪದವಿಪೂರ್ವ ಶಿಕ್ಷಣ ಹಂತವು ಎಲ್ಲ ಉದ್ಯೋಗಗಳಿಗೆ ಕನಿಷ್ಠ ವಿದ್ಯಾರ್ಹತೆಯಾಗಿದೆ. ಅಲ್ಲದೆ ಉನ್ನತ ಶಿಕ್ಷಣಕ್ಕೆ ಅಡಿಪಾಯವಾಗಿದೆ. ವ್ಯಕ್ತಿಯ ಭಾವೀ ಜೀವನಕ್ಕೆ ಬೇಕಾಗುವ ಮೂಲಾಂಶಗಳನ್ನು ಒದಗಿಸುತ್ತದೆ. ಈ ಹಂತದ ಶಿಕ್ಷಣವನ್ನು ಪೂರೈಸುವ ವಿದ್ಯಾರ್ಥಿಗಳು ಬೌದ್ಧಿಕ ಪ್ರೌಢಿಮೆ, ಸಕಾರಾತ್ಮಕ ಮನೋಭಾವಗಳು, ಉದಾತ್ತ ವಿಚಾರಗಳು, ಪರಿಸರ ಪ್ರಜ್ಞೆ, ವೈಜ್ಞಾನಿಕ ಮನೋಭಾವ, ಆದರ್ಶ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ಆಧುನಿಕ ಜ್ಞಾನ ಕೌಶಲಗಳ ಅರಿವು ಈ ಹಂತದಲ್ಲಿ ಅಗತ್ಯ.

ಮಾನವನ ಜ್ಞಾನದಾಹ ನಿರೀಕ್ಷೆಗಿಂತ ವೇಗವಾಗಿ ಹೆಚ್ಚುತ್ತಿರುವುದರಿಂದ ಸಾಮಾಜಿಕ ಹಾಗೂ ರಾಷ್ಟ್ರೀಯ ಆಶೋತ್ತರಗಳು ಬದಲಾಗುತ್ತಿರುವ ಈ ಸಂದರ್ಭದಲ್ಲಿ ಶಿಕ್ಷಣವು ಅವುಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವುದು ಪ್ರಗತಿಯ ಲಕ್ಷಣ. ಜ್ಞಾನ ಹರಡುವಿಕೆ ಹಾಗೂ ನಾಗರಿಕರಲ್ಲಿ ವಿಚಾರ ಸ್ವಾತಂತ್ರ್ಯ ಮೂಡಿಸುವ ವಿಷಯದಲ್ಲಿ ರಾಷ್ಟ್ರೀಯ ಬದ್ಧತೆ ನಮ್ಮ ಸಂವಿಧಾನದಲ್ಲಿ ಪ್ರತಿಫಲಿತವಾಗಿದೆ. ಇಂದು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪ್ರಗತಿ ಅಸಾಧಾರಣಗತಿಯಲ್ಲಿ ಮುಂದುವರಿಯುತ್ತಿರುವ ಈ ಸಂದರ್ಭದಲ್ಲಿ ಪದವಿಪೂರ್ವ ಶಿಕ್ಷಣ ಹಂತದ ಪಠ್ಯಕ್ರಮ ಹಾಗೂ ಪಠ್ಯಪುಸ್ತಕಗಳು ಆಗಾಗ ಪರಿಷ್ಕರಣೆಗೊಳ್ಳುವುದು ಅಗತ್ಯ. 2014–15ನೇ ಶೈಕ್ಷಣಿಕ ಸಾಲಿನಿಂದ ಕಲಾ, ವಾಣಿಜ್ಯ ಹಾಗೂ ಭಾಷಾ ವಿಷಯಗಳ ಒಟ್ಟು 30 ವಿಷಯಗಳ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ಎನ್.ಸಿ. ಇ.ಆರ್.ಟಿ. ಮಾದರಿಯನ್ನಾಧರಿಸಿ ರಚಿಸುವ ಕಾರ್ಯಕ್ಕೆ ಪದವಿ ಪೂರ್ವ ಶಿಕ್ಷಣ ಇಲಾಖೆ ಮುಂದಾಗಿದೆ.

ಪದವಿಪೂರ್ವ ತರಗತಿಗಳಿಗೆ ಬೋಧಿಸುತ್ತಿರುವ ಉಪನ್ಯಾಸಕರುಗಳಿಗೆ ಪಠ್ಯಕ್ರಮ ಹಾಗೂ ಪಠ್ಯಪುಸ್ತಕ ರಚನೆಯ ಜವಾಬ್ದಾರಿಯನ್ನು ನೀಡಿ ಇಲಾಖೆ ಉಪಕರಿಸಿದೆ. ಪದವಿಪೂರ್ವ ಶಿಕ್ಷಣ ಮಂಡಳಿಯ ನಿರ್ದೇಶಕರಾದ ಡಾ.ರಾಮೇಗೌಡ ರವರಿಗೆ ಕೃತಜ್ಞತೆಗಳು. ಮೊದಲ ಸಭೆಯಲ್ಲಿ ಸೂಕ್ತ ಮಾಹಿತಿಯೊಂದಿಗೆ ಮಾರ್ಗದರ್ಶನ ನೀಡಿದ ಜಂಟಿ ನಿರ್ದೇಶಕರಾದ ಶ್ರೀ ವಿ.ಕೆ.ನಾಗರಾಜ ಸಹಾಯಕ ನಿರ್ದೇಶಕ ಶ್ರೀ ಹೊನ್ನಯ್ಯ, ಸಹಾಯಕ ನಿರ್ದೇಶಕಿ ಶ್ರೀಮತಿ ಲಲಿತಾಕುಮಾರಿ ಶಾಖಾಧಿಕಾರಿಗಳಾದ ಶ್ರೀ ಗೋಪಾಲ.ಎನ್ ಹಾಗೂ ಡಾ॥ ಎಂ.ಎನ್. ಕಟ್ಟಿ ರವರಿಗೆ ಕೃತಜ್ಞತೆಗಳು.

ಪಠ್ಯಕ್ರಮ ಹಾಗೂ ಪಠ್ಯಪುಸ್ತಕ ರಚಿಸುವಾಗ ಯಶ್‌ಪಾಲ್ ಸಮಿತಿಯ ಶಿಫಾರಸ್ಸು ಹಾಗೂ ಎನ್.ಸಿ.ಎಫ್– 2005ರ ಪ್ರಮುಖ ಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯಕ್ರಮ ರಚಿಸಲಾಗಿದೆ. ಭಾರತೀಯ ಸಂವಿಧಾನದಲ್ಲಿ ಅಡಕವಾಗಿರುವ ಮೌಲ್ಯಗಳನ್ನು ಎತ್ತಿಹಿಡಿಯುವುದು, ಕಾಲೇಜಿನ ಹೊರಗಿನ ಬದುಕಿನ ಜ್ಞಾನ ಸಂಯೋಜನೆ, ದೇಶದ ಪ್ರಜಾಸತ್ತಾತ್ಮಕ ಆಯಕಟ್ಟಿನಲ್ಲಿಸಮಸ್ಯೆಗಳ ಪರಿಹಾರ, ಪ್ರಸ್ತುತ ಹಾಗೂ ಮುಂಬರುವ ದಿನಗಳಲ್ಲಿನ ಸವಾಲುಗಳಿಗೆ ಶಿಕ್ಷಣವನ್ನು ರೂಪಿಸುವುದಕ್ಕೆ ಒತ್ತು ನೀಡಲಾಗಿದೆ.

ನಮಗೆ ಪಠ್ಯಕ್ರಮ ಮತ್ತು ಪಠ್ಯ ಪುಸ್ತಕ ರಚನೆಗೆ ಮಾರ್ಗದರ್ಶನ ನೀಡಿದ ಹಾಗೂ ಪ್ರರಾಮರ್ಶನ ಗ್ರಂಥಗಳನ್ನು ಪೂರೈಸಿದ ದಾವಣಗೆರೆಯ ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎಚ್.ವಿ. ವಾಮದೇವಪ್ಪನವರು ಅಭಿನಂದನಾರ್ಹರು. ಪ್ರತಿಯೊಂದು ಅಧ್ಯಾಯವನ್ನು ವಿವರವಾಗಿ ಓದಿ ತಪ್ಪುಗಳನ್ನು ತಿದ್ದಿ ಸಹಕರಿಸಿದ ಶ್ರೀ ಭರತ್ ಭೂಷಣ್ ಬಿ, ಎಸ್.ಬಿ.ಎಸ್.ಸಿ ಪದವಿ ಕಾಲೇಜ್ ಹರಪನಹಳ್ಳಿ, ಶ್ರೀ ಎ.ಎಂ. ಬಗಲಿ ಪ್ರಾಚಾರ್ಯರು, ಸಿಕ್ಯಾಬ್ ಪದವಿಪೂರ್ವ ಕಾಲೇಜು ಬಿಜಾಪೂರ, ಪ್ರೊ. ಎಚ್.ಡಿ. ಗುರುಬಸಪ್ಪ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ ತುಮಕೂರು, ಶ್ರೀ ಸಿ.ಡಿ. ಶಿವಕುಮಾರ, ಶ್ರೀ ಎಸ್.ಜಿ. ಲಕ್ಕುಂಡಿಮಠ, ಡಾ.ನಾಗರಾಜ.ಬ.ಮರೆಣ್ಣವರ, ಸ.ಪ.ಪೂ.ಕಾಲೇಜ,ಸುರೇಬಾನ–ಮನಿಹಾಳ, ಶ್ರೀ ಎ.ಆರ್. ಹೆಗ್ಗನದೊಡ್ಡಿ, ಶ್ರೀಮತಿ ರಶ್ಮಿ ಸ.ಪ.ಪೂ. ಕಾಲೇಜ್ ಕೋಟೆ, ಬೆಂಗಳೂರು. ಮತ್ತು ಶ್ರೀಮತಿ ಸಲೀಮುನ್ನೀಸಾ, ಬಿ.ಬಿ. ರೋಜಾ ಮಹಿಳಾ ಪದವಿಪೂರ್ವ ಮಹಾವಿದ್ಯಾಲಯ ಗುಲ್ಬರ್ಗಾ–ಈ ಎಲ್ಲ ಸದಸ್ಯರುಗಳನ್ನು ಸ್ಮರಿಸುವೆವು.

ಸಂಚಾಲಕರು
**ಸಂಗಮೇಶ ಎ. ಮೇಟಿ**
ಪಠ್ಯಪುಸ್ತಕ ರಚನಾ ಸಮಿತಿ

ಅಧ್ಯಕ್ಷರು
**ಎಂ.ಎಸ್.ಹೊಟ್ಟಿನ್**
ಪಠ್ಯಪುಸ್ತಕ ರಚನಾ ಸಮಿತಿ

## ಶಿಕ್ಷಣಶಾಸ್ತ್ರ (52) ದ್ವಿತೀಯ ಪಿಯುಸಿ ಪಠ್ಯಕ್ರಮ ಮತ್ತು ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು :**

**ಎಂ ಎಸ್ ಹೊಟ್ಟಿನ್**
ಶಿಕ್ಷಣಶಾಸ್ತ್ರ ಉಪನ್ಯಾಸಕರು,
ಶ್ರೀ ಸಿದ್ಧೇಶ್ವರ ಸಂಯುಕ್ತ ಪದವಿಪೂರ್ವ
ಮಹಾವಿದ್ಯಾಲಯ, ಅಳವಂಡಿ, ಕೊಪ್ಪಳ ಜಿಲ್ಲೆ.

**ಸಂಚಾಲಕರು :**

**ಸಂಗಮೇಶ್ ಎ ಮೇಟಿ**
ಶ್ರೀ ರೇವಣಸಿದ್ದೇಶ್ವರ ಪದವಿಪೂರ್ವ,
ಮಹಾವಿದ್ಯಾಲಯ, ಹೊರ್ತಿ, ಇಂಡಿ ತಾ॥
ಬಿಜಾಪುರ ಜಿಲ್ಲೆ.

### ಸದಸ್ಯರುಗಳು

**ಭರತ್‌ಭೂಷಣ್ ಬಿ**
ಪ್ರಾಂಶುಪಾಲರು,
ಎಸ್.ಬಿ.ಎಸ್.ಸಿ. ಪದವಿ ಮಹಾವಿದ್ಯಾಲಯ,
ಹರಪನಹಳ್ಳಿ, ದಾವಣಗೆರೆ ಜಿಲ್ಲೆ.

**ಬಗಲಿ ಎ ಎಂ**
ಪ್ರಾಂಶುಪಾಲರು,
ಸಿಕ್ಯಾಬ್ ಬಾಲಕಿಯರ ಪದವಿಪೂರ್ವ
ಮಹಾವಿದ್ಯಾಲಯ, ಬಿಜಾಪುರ.

**ಎಸ್ ಜಿ ಲಕ್ಕುಂಡಿಮಠ**
ಶಿಕ್ಷಣ ಶಾಸ್ತ್ರ ಉಪನ್ಯಾಸಕರು,
ಶ್ರೀ ಬಸವಂತರಾಯ ಪದವಿಪೂರ್ವ
ಮಹಾವಿದ್ಯಾಲಯ, ಹೊನವಾಡ, ಬಿಜಾಪುರ ಜಿಲ್ಲೆ.

**ಶಿವಕುಮಾರ ಸಿ ಡಿ**
ಶಿಕ್ಷಣ ಶಾಸ್ತ್ರ ಉಪನ್ಯಾಸಕರು,
ಕಾಳಿದಾಸ ಪದವಿಪೂರ್ವ
ಮಹಾವಿದ್ಯಾಲಯ, ತುಮಕೂರು

**ಎ ಆರ್ ಹೆಗ್ಗನದೊಡ್ಡಿ**
ಶಿಕ್ಷಣ ಶಾಸ್ತ್ರ ಉಪನ್ಯಾಸಕರು,
ಹೆಚ್.ಜಿ. ಪದವಿಪೂರ್ವ ಮಹಾವಿದ್ಯಾಲಯ,
ಸಿಂಧಗಿ,
ಬಿಜಾಪುರ ಜಿಲ್ಲೆ.

**ಡಾ॥ ನಾಗರಾಜ್ ಬ.ಮರೆಣ್ಣವರ**
ಶಿಕ್ಷಣ ಶಾಸ್ತ್ರ ಉಪನ್ಯಾಸಕರು,
ಸರ್ಕಾರಿ ಪದವಿಪೂರ್ವ ಮಹಾವಿದ್ಯಾಲಯ,
ಸುರೇಬಾನ್–ಮನಿಹಾಳ್
ರಾಮದುರ್ಗ ತಾ॥ ಬೆಳಗಾಂ ಜಿಲ್ಲೆ.

**ಶ್ರೀಮತಿ ಸಲೀಮುನ್ನೀಸಾ**
ಶಿಕ್ಷಣ ಶಾಸ್ತ್ರ ಉಪನ್ಯಾಸಕರು,
ಬಿಬಿರೋಜಾ ಮಹಿಳಾ ಪದವಿಪೂರ್ವ
ಮಹಾವಿದ್ಯಾಲಯ,
ಬಿಜಾಪುರ ಜಿಲ್ಲೆ.

**ಶ್ರೀಮತಿ ರಶ್ಮಿ**
ಶಿಕ್ಷಣ ಶಾಸ್ತ್ರ ಉಪನ್ಯಾಸಕರು,
ಸರ್ಕಾರಿ ಬಾಲಕಿಯರ ಪದವಿಪೂರ್ವ
ಮಹಾವಿದ್ಯಾಲಯ, ವಾಣಿವಿಲಾಸ,
ಬೆಂಗಳೂರು.

### ಪರಿಶೀಲನಾ ಸಮಿತಿ

**ಡಾ॥ ವಾಮದೇವಪ್ಪ ಹೆಚ್.ವಿ**
ಪ್ರಾಂಶುಪಾಲರು,
ಎಂಎಂ ಶಿಕ್ಷಣ ಮಹಾವಿದ್ಯಾಲಯ,
ದಾವಣಗೆರೆ.

**ಡಾ॥ ಕೆ ಎನ್ ಬೈಲಕೇರಿ**
ವಿಶ್ರಾಂತ ಪ್ರಾಂಶುಪಾಲರು,
ಕಮಲಾ ಬಾಳಿಗ ಶಿಕ್ಷಣ ಮಹಾವಿದ್ಯಾಲಯ,
ಕುಮುಟ.

**ಡಾ॥ ಜಗದೀಶ್ ಬಿ**
ಪ್ರಾಂಶುಪಾಲರು,
ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ, ಬಿಜಾಪುರ.

## ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು.

## ದ್ವಿತೀಯ ಪಿ.ಯು.ಸಿ. ಪಠ್ಯಕ್ರಮ –2014–15


| ಘಟಕಗಳ ಸಂಖ್ಯೆ | ಪುಟಗಳು |
|---|---|
| **ಘಟಕ –1 ಭಾವರೂಪಣ ಮತ್ತು ಚಿಂತನೆ**<br>1.1 ಸಂವೇದನೆ – ಪರಿಕಲ್ಪನೆ ಮತ್ತು ಲಕ್ಷಣಗಳು<br>1.2 ಪ್ರತ್ಯಕ್ಷಾನುಭವ – ಪರಿಕಲ್ಪನೆ, ಲಕ್ಷಣಗಳು ಹಾಗೂ ಸಂವೇದನೆ ಮತ್ತು ಪ್ರತ್ಯಕ್ಷಾನುಭವಗಳ ನಡುವಿನ ವ್ಯತ್ಯಾಸ<br>1.3 ಪ್ರತ್ಯಕ್ಷಾನುಭವದ ನಿರ್ಧಾರಕಗಳು<br>1.4 ಭಾವರೂಪಣ – ಅರ್ಥ ಮತ್ತು ಪ್ರಕ್ರಿಯೆ<br>1.5 ಚಿಂತನೆ – ಪರಿಕಲ್ಪನೆ ಹಾಗೂ ಪ್ರಕಾರಗಳು – ಸಮಸ್ಯಾ ಪರಿಹಾರ, ವಿವೇಚನೆ, ತೀರ್ಮಾನ ಕೈಗೊಳ್ಳುವಿಕೆ, ಸೃಜನಾತ್ಮಕ ಚಿಂತನೆ | 1-14 |
| **ಘಟಕ–2 ವೈಯಕ್ತಿಕ ಭಿನ್ನತೆಗಳು**<br>2.1 ವೈಯಕ್ತಿಕ ಭಿನ್ನತೆಗಳು – ಪರಿಕಲ್ಪನೆ ಮತ್ತು ಕ್ಷೇತ್ರಗಳು<br>2.2 ಬುದ್ಧಿಶಕ್ತಿ<br>2.2.1 ಬುದ್ಧಿಶಕ್ತಿಯ ಪರಿಕಲ್ಪನೆ<br>2.2.2 ಮಾನಸಿಕ ವಯಸ್ಸು ಮತ್ತು ಬುದ್ಧಿಸೂಚ್ಯಾಂಕ– ಪರಿಕಲ್ಪನೆ –ಬುದ್ಧಿಶಕ್ತಿಯ ವರ್ಗೀಕರಣ ಹಾಗೂ ವಿತರಣೆ<br>2.2.3 ಬುದ್ದಿಶಕ್ತಿ ಪರೀಕ್ಷಣಗಳು – ವಿಧಗಳು – ವೈಯಕ್ತಿಕ ಮತ್ತು ಸಾಮೂಹಿಕ – ಶಾಬ್ದಿಕ –ಅಶಾಬ್ದಿಕ –ಕಾರ್ಯನಿರ್ವಹಣಾ ಪರೀಕ್ಷಣಗಳು – ಬುದ್ದಿಶಕ್ತಿ ಪರೀಕ್ಷಣಗಳ ಉಪಯೋಗಗಳು<br>2.3 ಸಂವೇಗಾತ್ಮಕ ಬುದ್ಧಿಶಕ್ತಿ – ಪರಿಕಲ್ಪನೆ – ಘಟಕಾಂಶಗಳು ಮತ್ತು ಪ್ರಾಮುಖ್ಯತೆ<br>– ಸಂವೇಗಾತ್ಮಕ ಬುದ್ದಿಲಬ್ಧ(EQ)<br>– ಸಂವೇಗಾತ್ಮಕ ಬುದ್ಧಿಶಕ್ತಿ ಸಂವರ್ಧನೆಯ ಕ್ರಮಗಳು<br>2.4 ಸೃಜನಶೀಲತೆ<br>2.4.1 ಸೃಜನಶೀಲತೆ–ಪರಿಕಲ್ಪನೆ–ಪ್ರಭಾವ ಬೀರುವ ಅಂಶಗಳು<br>2.4.2 ಸೃಜನಶೀಲ ವ್ಯಕ್ತಿಯ ಲಕ್ಷಣಗಳು<br>2.4.3 ಸೃಜನಶೀಲತೆ ಪೋಷಿಸುವ ಕ್ರಮಗಳು<br>2.5 ಅಭಿಕ್ಷಮತೆ – ಪರಿಕಲ್ಪನೆ – ವಿಧಗಳು ಮತ್ತು ಪ್ರಾಮುಖ್ಯತೆ<br>2.6 ಮನೋಭಾವ – ಪರಿಕಲ್ಪನೆ ಮತ್ತು ಪ್ರಾಮುಖ್ಯತೆ<br>2.7 ಆಸಕ್ತಿ – ಪರಿಕಲ್ಪನೆ ಮತ್ತು ಪ್ರಾಮುಖ್ಯತೆ | 15-33 |

| | |
|---|---|
| **ಘಟಕ 3 ವ್ಯಕ್ತಿತ್ವ ಮತ್ತು ಸಮಾಯೋಜನೆ**<br>**3.1 ವ್ಯಕ್ತಿತ್ವ**<br>**3.1.1 ವ್ಯಕ್ತಿತ್ವ – ಪರಿಕಲ್ಪನೆ** ಹಾಗೂ ಆಯಾಮಗಳು<br>**3.1.2 ವ್ಯಕ್ತಿತ್ವದ ನಿರ್ಧಾರಕಗಳು**<br>ಜೈವಿಕ ನಿರ್ಧಾರಕಗಳು–ಅನುವಂಶೀಯತೆ, ದೈಹಿಕ ರಚನೆ, ನರಮಂಡಲ ವ್ಯವಸ್ಥೆ ಹಾಗೂ ನಿರ್ನಾಳ ಗ್ರಂಥಿಗಳು ಪರಿಸರಾತ್ಮಕ ನಿರ್ಧಾರಕಗಳು –ಕುಟುಂಬ, ಶಾಲೆ, ಸಮಾಜ ಹಾಗೂ ಸಮೂಹಮಾಧ್ಯಮ<br>**3.1.3. ವ್ಯಕ್ತಿತ್ವದ ಮೌಲ್ಯ ನಿರ್ಧಾರ**–ವ್ಯಕ್ತಿತ್ವ ಪರೀಕ್ಷೆಯ ಪ್ರಕಾರಗಳು – ವ್ಯಕ್ತಿನಿಷ್ಠ ಹಾಗೂ ವಸ್ತುನಿಷ್ಠ ಪದ್ಧತಿಗಳು– ಪ್ರಕ್ಷೇಪಣ ತಂತ್ರಗಳು<br>**3.2 ಸಮಾಯೋಜನೆ**<br>**3.2.1 ಸಮಾಯೋಜನೆ**–ಪರಿಕಲ್ಪನೆ – ಸಮಾಯೋಜಿತ ವ್ಯಕ್ತಿತ್ವದ ಲಕ್ಷಣಗಳು.<br>**3.2.2 ಸಮಾಯೋಜನೆಗೆ ಅಡೆತಡೆಗಳು** –ಉದ್ವೇಗ, ಆಶಾಭಂಗ, ಮಾನಸಿಕ ಘರ್ಷಣೆ ಹಾಗೂ ಒತ್ತಡ.<br>**3.2.3 ಅಸಮಾಯೋಜನೆ** –ಪರಿಕಲ್ಪನೆ – ಕಾರಣಗಳು ಮತ್ತು ಪರಿಹಾರಗಳು.<br>**3.2.4 ರಕ್ಷಣಾತಂತ್ರಗಳು**–ಪರಿಕಲ್ಪನೆ, ಪ್ರಕಾರಗಳು–ಆಕ್ರಮಣಕಾರಿ, ಪಲಾಯನ ಮತ್ತು ಹೊಂದಾಣಿಕೆ ತಂತ್ರಗಳು. | 34-60 |
| **ಘಟಕ 4. ಸಂಯೋಜನಾ ಶಿಕ್ಷಣ**<br>**4.1 ಸಂಯೋಜನಾ ಶಿಕ್ಷಣ**– ಪರಿಕಲ್ಪನೆ–ಮಹತ್ವ.<br>**4.2 ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ಸಮನ್ವಯ ಶಿಕ್ಷಣ**–ಅವುಗಳ ಪರಿಕಲ್ಪನೆ–ಗುಣಲಕ್ಷಣಗಳು –ಶೈಕ್ಷಣಿಕ ಕ್ರಮಗಳು.<br>4.2.1 ಮೂಳೆ ಕೀಲುಗಳಿಗೆ ಸಂಬಂಧಿಸಿದ ಸವಾಲುಗಳುಳ್ಳ ಮಕ್ಕಳು<br>4.2.2 ದೃಷ್ಟಿ ಸವಾಲುಗಳುಳ್ಳ ಮಕ್ಕಳು<br>4.2.3 ಶ್ರವಣ ಸವಾಲುಗಳುಳ್ಳ ಮಕ್ಕಳು<br>4.2.4 ಮಾನಸಿಕ ಸವಾಲುಗಳುಳ್ಳ ಮಕ್ಕಳು<br>4.2.5 ಕಲಿಕಾ ಸವಾಲುಗಳುಳ್ಳ ಮಕ್ಕಳು | 61-76 |
| **ಘಟಕ–5 ಶಿಕ್ಷಣದಲ್ಲಿ ಪ್ರಚಲಿತ ಒಲವುಗಳು**<br>**5.1 ಮಾನವ ಹಕ್ಕುಗಳ ಶಿಕ್ಷಣ**<br>**5.1.1 ಮಾನವ ಹಕ್ಕುಗಳು**– ಪರಿಕಲ್ಪನೆ– ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ(UDHR).<br>**5.1.2 ಮಾನವ ಹಕ್ಕುಗಳ ಶಿಕ್ಷಣ**– ಪರಿಕಲ್ಪನೆ–ಮಹತ್ವ– ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ(NHRC).<br>**5.2 ಮಕ್ಕಳ ಹಕ್ಕುಗಳು**– ಪರಿಕಲ್ಪನೆ– ಮಕ್ಕಳ ಹಕ್ಕುಗಳ ಒಡಂಬಡಿಕೆ–ಪ್ರಮುಖ ಹಕ್ಕುಗಳು –ಮಹತ್ವ–ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ(NCPCR).<br>**5.3 ಶಿಕ್ಷಣ ಹಕ್ಕು ಕಾಯ್ದೆ (RTE)–2009** – ಪರಿಕಲ್ಪನೆ–ಮುಖ್ಯಾಂಶಗಳು. | 77-107 |

| | | |
|---|---|---|
| 5.4. | **ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF–2005)**–ಐತಿಹಾಸಿಕ ಹಿನ್ನೆಲೆ, ಮಾರ್ಗದರ್ಶಿ ತತ್ವಗಳು–ಮುಖ್ಯ ಲಕ್ಷಣಗಳು ಹಾಗೂ ಪ್ರಮುಖ ಶಿಫಾರಸ್ಸುಗಳು. | |
| 5.5 | **ಮಹಿಳಾ ಸಬಲೀಕರಣ**– ಪರಿಕಲ್ಪನೆ– ಅವಶ್ಯಕತೆ– ಕಾರ್ಯತಂತ್ರಗಳು– ರಾಷ್ಟ್ರೀಯ ಮಹಿಳಾ ಆಯೋಗ (NWC). | |
| 5.6 | **ಉದಾರೀಕರಣ, ಖಾಸಗೀಕರಣ, ಜಾಗತೀಕರಣ (LPG)**-ಪರಿಕಲ್ಪನೆ–ಶಿಕ್ಷಣದ ಮೇಲೆ ಜಾಗತೀಕರಣದ ಪ್ರಭಾವ. | |
| 5.7 | **ಜೀವನ ಕೌಶಲಗಳು**–ಪರಿಕಲ್ಪನೆ ಮತ್ತು ಮಹತ್ವ–WHO-1997 ಸೂಚಿಸಿದ ಜೀವನ ಕೌಶಲಗಳು. | |
| **ಘಟಕ –6.** | **ಶಿಕ್ಷಣದಲ್ಲಿ ನಿರ್ವಹಣೆ ಮತ್ತು ಗುಣಮಟ್ಟ** | **108-133** |
| **6.1** | **ಶಿಕ್ಷಣದಲ್ಲಿ ನಿರ್ವಹಣೆ** | |
| 6.1.1 | ನಿರ್ವಹಣೆಯ ಪರಿಕಲ್ಪನೆ, ಪ್ರಕ್ರಿಯೆ ಮತ್ತು ಗುಣಲಕ್ಷಣಗಳು | |
| 6.1.2 | ಶಿಕ್ಷಣದಲ್ಲಿ ನಿರ್ವಹಣೆಯ ಪ್ರಾಮುಖ್ಯತೆ | |
| 6.1.3 | ಶಿಕ್ಷಣದಲ್ಲಿ ನಿರ್ವಹಣೆಯ ಕಾರ್ಯಗಳು | |
| 6.1.4 | ನಿರ್ವಹಣಾ ಕೌಶಲಗಳು | |
| **6.2** | **ಶಿಕ್ಷಣದಲ್ಲಿ ಗುಣಮಟ್ಟ** | |
| 6.2.1 | ಗುಣಮಟ್ಟದ ಪರಿಕಲ್ಪನೆ, ಆಯಾಮಗಳು ಮತ್ತು ಶಿಕ್ಷಣದಲ್ಲಿ ಗುಣಮಟ್ಟದ ಪ್ರಾಮುಖ್ಯತೆ | |
| 6.2.2 | ಸಂಪೂರ್ಣ ಗುಣಮಟ್ಟ ನಿರ್ವಹಣೆಯ ಪರಿಕಲ್ಪನೆ ಮತ್ತು ಪ್ರಕ್ರಿಯೆ | |
| 6.2.3 | ಶಿಕ್ಷಣದಲ್ಲಿ ಸಂಪೂರ್ಣ ಗುಣಮಟ್ಟ ನಿರ್ವಹಣೆಯ ಪ್ರಾಮುಖ್ಯತೆ | |
| 6.2.4 | ಶಿಕ್ಷಣದ ಗುಣಮಟ್ಟ ಮೌಲ್ಯೀಕರಿಸುವ ಮತ್ತು ನಿಯಂತ್ರಿಸುವ ನಿಯೋಗಗಳು –NAAC, NCTE, AICTE, MCI | |
| **ಘಟಕ – 7** | **ಸಂವಹನ** | **134-147** |
| 7.1 | ಸಂವಹನ – ಪರಿಕಲ್ಪನೆ ಮತ್ತು ಪ್ರಕ್ರಿಯೆ. | |
| 7.2 | ಸಂವಹನದ ಲಕ್ಷಣಗಳು. | |
| 7.3 | ತರಗತಿ ಸಂವಹನ | |
| 7.4 | ಸಂವಹನದ ಪ್ರಕಾರಗಳು. | |
| 7.5 | ಪರಿಣಾಮಕಾರಿ ಸಂವಹನಕ್ಕೆ ಅಡೆತಡೆಗಳು ಮತ್ತು ನಿವಾರಣಾ ಕ್ರಮಗಳು. | |
| 7.6 | ಸಂವಹನ ಕೌಶಲಗಳು. | |
| **ಘಟಕ –8** | **ಗಣಕಯಂತ್ರ ಶಿಕ್ಷಣ** | **148-168** |
| **8.1** | **ಗಣಕಯಂತ್ರ**–ಪರಿಕಲ್ಪನೆ–ವಿಧಗಳು–ಶಿಕ್ಷಣದಲ್ಲಿ ಪ್ರಾಮುಖ್ಯತೆ. | |
| **8.2** | **ಗಣಕಯಂತ್ರದ ಭಾಗಗಳು–ಕೇಂದ್ರ ಸಂಸ್ಕರಣ ಘಟಕ(CPU)** – ಆಗಮನಾಂಗ ಸಾಧನಗಳು–ನಿರ್ಗಮನಾಂಗ ಸಾಧನಗಳು –ಶೇಖರಣಾ ಸಾಧನಗಳು. | |
| **8.3** | **ಅಂತರ್ಜಾಲ**–ಪರಿಕಲ್ಪನೆ–ಪ್ರಾಮುಖ್ಯತೆ–ವೆಬ್ ಬ್ರೌಸರ–ವಿಶ್ವವ್ಯಾಪಿ ಜಾಲ–(www) –ಜಾಲತಾಣ–ಶೈಕ್ಷಣಿಕ ಜಾಲತಾಣಗಳು–ವಿದ್ಯುನ್ಮಾನ ಚಿತ್ರ | |
| **8.4** | **ಸ್ಮಾರ್ಟ ಕ್ಲಾಸ್ (Smart Class)** –ಪರಿಕಲ್ಪನೆ–ಪ್ರಾಮುಖ್ಯತೆ–ಸಾಧನಗಳು. | |

| | |
|---|---|
| **ಘಟಕ –9 ಶಿಕ್ಷಣದಲ್ಲಿ ಸಂಶೋಧನೆ**<br>**9.1 ಸಂಶೋಧನೆ – ಪರಿಕಲ್ಪನೆ** ಮತ್ತು ಗುಣಲಕ್ಷಣಗಳು<br>9.1.1 ಶೈಕ್ಷಣಿಕ ಸಂಶೋಧನೆ – ಪರಿಕಲ್ಪನೆ<br>9.1.2 ಶಿಕ್ಷಣದಲ್ಲಿ ಸಂಶೋಧನೆಯ ಪ್ರಾಮುಖ್ಯತೆ<br>**9.2. ಸಂಶೋಧನೆಯ ವಿಧಗಳು**<br>1. ಮೂಲಭೂತ ಸಂಶೋಧನೆ<br>2. ಅನ್ವಯಿಕ ಸಂಶೋಧನೆ ಮತ್ತು<br>3. ಕ್ರಿಯಾಸಂಶೋಧನೆ<br>**9.3 ಕ್ರಿಯಾಸಂಶೋಧನೆ – ಪರಿಕಲ್ಪನೆ** ಮತ್ತು ಪ್ರಾಮುಖ್ಯತೆ<br>9.3.1 ಕ್ರಿಯಾಸಂಶೋಧನೆಯ ಹಂತಗಳು | **169-176** |
| **ಘಟಕ–10 ಶಿಕ್ಷಣದಲ್ಲಿ ಸಂಖ್ಯಾಶಾಸ್ತ್ರ**<br>**10.1 ಸಂಖ್ಯಾಶಾಸ್ತ್ರ–** ಪರಿಕಲ್ಪನೆ ಮತ್ತು ಪ್ರಾಮುಖ್ಯತೆ<br>10.1.1 **ಶಿಕ್ಷಣದಲ್ಲಿ ಸಂಖ್ಯಾಶಾಸ್ತ್ರ –** ಪರಿಕಲ್ಪನೆ ಮತ್ತು ಪ್ರಾಮುಖ್ಯತೆ.<br>**10.2 ದತ್ತಾಂಶಗಳ ವರ್ಗೀಕರಣ** ಮತ್ತು ತಾಲಿಕಾಕರಣ<br>**10.3 ದತ್ತಾಂಶಗಳ ಆಲೇಖ ನಿರೂಪಣೆ**–ಕಂಬನಕ್ಷೆ–ಆವೃತ್ತ್ಯಾಕೃತಿ–ಆವೃತ್ತಿ ಬಹುಭುಜಾಕೃತಿ.<br>10.4 **ಕೇಂದ್ರೀಯ ಪ್ರವೃತ್ತಿ ಮಾಪನಗಳು–**ಸರಾಸರಿ–ಮಧ್ಯಾಂಕ–ಬಹುಲಕ–ಪರಿಕಲ್ಪನೆ ಮತ್ತು ಲೆಕ್ಕಿಸುವಿಕೆ. | **177-210** |

# ಭಾವರೂಪಣ ಮತ್ತು ಚಿಂತನೆ
# Concept formation and Thinking

**1.1 ಸಂವೇದನೆ** – ಪರಿಕಲ್ಪನೆ ಮತ್ತು ಲಕ್ಷಣಗಳು

**1.2 ಪ್ರತ್ಯಕ್ಷಾನುಭವ** – ಪರಿಕಲ್ಪನೆ, ಲಕ್ಷಣಗಳು ಹಾಗೂ ಸಂವೇದನೆ ಮತ್ತು ಪ್ರತ್ಯಕ್ಷಾನುಭವಗಳ ನಡುವಿನ ವ್ಯತ್ಯಾಸ

**1.3 ಪ್ರತ್ಯಕ್ಷಾನುಭವದ ನಿರ್ಧಾರಕಗಳು**


**1.4 ಭಾವರೂಪಣ** – ಅರ್ಥ ಮತ್ತು ಪ್ರಕ್ರಿಯೆ

**1.5 ಚಿಂತನೆ** – ಪರಿಕಲ್ಪನೆ ಹಾಗೂ ಪ್ರಕಾರಗಳು – ಸಮಸ್ಯಾ ಪರಿಹಾರ, ವಿವೇಚನೆ, ತೀರ್ಮಾನ ಕೈಗೊಳ್ಳುವಿಕೆ, ಸೃಜನಾತ್ಮಕ ಚಿಂತನೆ

## ಉದ್ದೇಶಗಳು :

ಈ ಘಟಕದ ಬೋಧನೆಯ ನಂತರ ವಿದ್ಯಾರ್ಥಿಗಳು,

* ಸಂವೇದನೆ, ಪ್ರತ್ಯಕ್ಷಾನುಭವ ಮತ್ತು ಭಾವರೂಪಣದ ಪರಿಕಲ್ಪನೆಯನ್ನು ಸ್ಮರಿಸುವರು
* ಸಂವೇದನೆ ಮತ್ತು ಪ್ರತ್ಯಕ್ಷಾನುಭವಗಳ ನಡುವಿನ ವ್ಯತ್ಯಾಸ ತಿಳಿಸುವರು
* ಭಾವರೂಪಣದ ಮತ್ತು ಚಿಂತನೆಯ ಪ್ರಕ್ರಿಯೆಯನ್ನು ವಿವರಿಸುವರು
* ಸಂವೇದನೆಯ ಮತ್ತು ಪ್ರತ್ಯಕ್ಷಾನುಭವಗಳ ಲಕ್ಷಣಗಳನ್ನು ವಿವರಿಸುವರು
* ಪ್ರತ್ಯಕ್ಷಾನುಭವದ ನಿರ್ಧಾರಕಗಳನ್ನು ವಿಶ್ಲೇಷಿಸುವರು
* ಸಮಸ್ಯಾ ಪರಿಹಾರ ಸಾಮರ್ಥ್ಯ ಬೆಳೆಸಿಕೊಳ್ಳುವರು
* ತಾರ್ಕಿಕವಾಗಿ ನಿರ್ಧಾರ ಕೈಗೊಳ್ಳುವ ಕೌಶಲ ರೂಢಿಸಿಕೊಳ್ಳುವರು
* ಸೃಜನಾತ್ಮಕ ಚಿಂತನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವರು





ಭಾವರೂಪಣ ಮತ್ತು ಚಿಂತನೆ

ಘಟಕ 1

# ಭಾವರೂಪಣ ಮತ್ತು ಚಿಂತನೆ
# Concept Formation and Thinking

**"ಪಂಚೇಂದ್ರಿಯಗಳು ಜ್ಞಾನದ ಹೆಬ್ಬಾಗಿಲುಗಳಿದ್ದಂತೆ"**. ಮನುಷ್ಯನ ಎಲ್ಲಾ ಅನುಭವಗಳು ಪಂಚೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ತ್ವಚೆಗಳ ಮೂಲಕ ಉಂಟಾಗುತ್ತವೆ. ಈ ಅನುಭವ ಕಾರ್ಯ ಜ್ಞಾನೇಂದ್ರಿಗಳಲ್ಲಿರುವ ಗ್ರಾಹಕಜೀವಕೋಶಗಳು ಬಾಹ್ಯ ಪ್ರಪಂಚದೊಂದಿಗೆ ಪ್ರಚೋದನೆಗೊಳ್ಳುವ ಮೂಲಕ ಪ್ರಾರಂಭವಾಗುತ್ತದೆ. ನಂತರ ನರವಾಹಿನಿಗಳು ಈ ಸಂದೇಶವನ್ನು ಮೆದುಳಿಗೆ ತಲುಪಿಸುತ್ತವೆ. ಇದರಿಂದ ಜ್ಞಾನ ಸಂಪಾದನೆ ಸಾಧ್ಯವಾಗುತ್ತದೆ. ಮಾನವನ ಚಿಂತನೆಯೂ ಸಹ ಭಾವರೂಪಣವನ್ನು ಆಧರಿಸಿದೆ. ಚಿಂತನೆಯು ವ್ಯಕ್ತಿಯ ಮೇಲ್ಮಟ್ಟದ ಮಾನಸಿಕ ಕ್ರಿಯೆಯಾಗಿದ್ದು, ಅದು ವ್ಯಕ್ತಿ ಮತ್ತು ಸಮಾಜದ ಪ್ರಗತಿಗೆ ಅತ್ಯವಶ್ಯಕವಾಗಿದೆ. ನಮ್ಮ ಚಿಂತನೆಗಳೇ ಭವಿಷ್ಯತ್ತಿನ ಬುನಾದಿಯಾಗಿವೆ. ನಾವು ಹೇಗೆ ಯೋಚನೆ ಮಾಡುತ್ತೇವೆಯೋ ಹಾಗೆ ನಮ್ಮ ವ್ಯಕ್ತಿತ್ವ ರೂಪಗೊಳ್ಳುತ್ತದೆ. ವ್ಯಕ್ತಿ ಮಾಡುವ ಪ್ರತಿಯೊಂದು ಕಾರ್ಯಚಟುವಟಿಕೆಯು ಚಿಂತನೆಯ ಪ್ರಭಾವಕ್ಕೆ ಒಳಗಾಗಿರುತ್ತದೆ. ಸಕಾರಾತ್ಮಕ ಚಿಂತನೆ ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗಿದೆ.




## 1.1 ಸಂವೇದನೆಯ ಪರಿಕಲ್ಪನೆ (Concept of Sensation)

ಸಂವೇದನೆಗಳು ಮಾನಸಿಕ ಕ್ರಿಯೆಯ **'ಮೂಲವಸ್ತು'**ಗಳಾಗಿವೆ. ಸಂವೇದನೆ ಉಂಟಾಗಬೇಕಾದರೆ ಪ್ರಚೋದನೆ, ವ್ಯಕ್ತಿ, ಜ್ಞಾನವಾಹಿ ನರಗಳು ಅತ್ಯವಶ್ಯಕವಾಗಿದೆ. ಪರಿಸರ ಮತ್ತು ವ್ಯಕ್ತಿಯ ನಡುವೆ ಸಮರ್ಪಕವಾದ ಸಂಬಂಧ ಮತ್ತು ಮಾಹಿತಿಗಳನ್ನು ಗ್ರಹಿಸುವಲ್ಲಿ ಸಂವೇದನೆಗಳು ಪ್ರಮುಖ ಪಾತ್ರವಹಿಸುತ್ತವೆ. ಅರಿಸ್ಟಾಟಲ್‌ರು **"ಆತ್ಮದ(ಮನಸ್ಸಿನ) ಹೆಬ್ಬಾಗಿಲೇ ಸಂವೇದನೆ"** ಎಂದಿದ್ದಾರೆ. ಜರ್ಮನಿಯ ಮನೋವಿಜ್ಞಾನಿ **ಟಿಚನರ್** ಅವರು **"ಜ್ಞಾನದ ಮೂಲಗಳೆಲ್ಲವೂ ಸಂವೇದನೆ ಗಳಿಂದಲೇ ಜನಿಸುತ್ತವೆ"** ಎಂದಿದ್ದಾರೆ. ಸಂವೇದನೆಗಳ (ಜ್ಞಾನೇಂದ್ರಿಯಗಳ) ಕಾರ್ಯ ಉತ್ತಮವಾಗಿದ್ದರೆ, ನಮ್ಮ ಮಾನಸಿಕ ಕ್ರಿಯೆಯಲ್ಲಿಯೂ ಸಹ ಸ್ಥಿರತೆಯನ್ನು ಕಾಣಬಹುದಾಗಿದೆ. ಪರಿಸರದಿಂದ ಬರುವ ಪ್ರಚೋದನೆಗಳನ್ನು ಪಡೆದು ಅವುಗಳನ್ನು ಮೆದುಳಿಗೆ ಕಳುಹಿಸುವ ಕಾರ್ಯ ಜ್ಞಾನೇಂದ್ರಿಯಗಳದ್ದಾಗಿದೆ. ಅಂತೆಯೇ ಜ್ಞಾನೇಂದ್ರಿಯಗಳನ್ನು ನಮ್ಮ ಶರೀರದ ಕಿಟಕಿಗಳೆಂದು ಕರೆಯುತ್ತಾರೆ. ಕಣ್ಣಿನಿಂದ ನೋಡಿ, ಕಿವಿಯಿಂದ ಕೇಳಿ, ಮೂಗಿನಿಂದ ಘ್ರಾಣಿಸಿ, ನಾಲಿಗೆಯಿಂದ ರುಚಿಸಿ, ತ್ವಚೆಯಿಂದ ಸ್ಪರ್ಶಿಸುವ ಮೂಲಕ ಐದು ಸಂವೇದನಾ ಕ್ರಿಯೆಗಳು ನಡೆಯುತ್ತವೆ. ಇದರಿಂದ ನಮಗೆ ಜ್ಞಾನ ಮತ್ತು ಅನುಭವಗಳು ಉಂಟಾಗುತ್ತವೆ ಎಂದು ಶರೀರಶಾಸ್ತ್ರವು ಹೇಳುತ್ತದೆ.

ಸಂವೇದನೆ ಎಂಬುದು ಬಾಹ್ಯ ಪ್ರಚೋದನೆಗಳನ್ನು ಮೆದುಳಿಗೆ ತಲುಪಿಸುವ ಪ್ರಕ್ರಿಯೆಯಾಗಿದೆ.

### ವ್ಯಾಖ್ಯೆಗಳು: (Definitions)

**"ಪರಿಸರದ ಪ್ರಚೋದಕವನ್ನು ಗುರ್ತಿಸಿ ಅದರ ಇರುವಿಕೆಯನ್ನು ಅನುಭವಿಸುವ ಪ್ರಕ್ರಿಯೆಯೇ ಸಂವೇದನೆ"**

– ಲಿವೈನ್ ಮತ್ತು ಶಫೈನರ್(1981)

**"ಹೊರ ಜಗತ್ತಿನ ಮಾಹಿತಿಯನ್ನು ದೇಹ ಮತ್ತು ಮೆದುಳಿಗೆ ತಲುಪಿಸುವ ಅಮೂರ್ತ ಪ್ರಕ್ರಿಯೆಯೇ ಸಂವೇದನೆ"**

– ಶಿಫ್‌ಮನ್(1982)

ಬಾಹ್ಯ ಪ್ರಪಂಚದ ಯಾವುದೇ ವಸ್ತು ಘಟನೆಯ ಜ್ಞಾನ ಪಡೆಯುವ ಮೊದಲ ಹೆಜ್ಜೆ ಸಂವೇದನೆ. ಇಲ್ಲಿ ಆ ವಸ್ತು ಘಟನೆಯ ಯಥಾ ಸ್ಥಿತಿ ಮೆದುಳನ್ನು ತಲುಪುತ್ತದೆ. ಸಂವೇದನೆಗಳ ಮೂಲಕವೇ ನಮ್ಮ ಕಲಿಕೆ ಅವಧಾನ, ಆಲೋಚನೆ, ನಿರ್ಣಯಿಸುವಿಕೆ ಸಮಸ್ಯಾ ಪರಿಹಾರ ಬುದ್ಧಿಶಕ್ತಿ, ಸ್ಮೃತಿ ಇತ್ಯಾದಿ ಜ್ಞಾನಾತ್ಮಕ ಕಾರ್ಯಗಳು, ನಗು, ಅಳು, ಸಿಟ್ಟು, ಖುಷಿ ಇತ್ಯಾದಿ ಭಾವನಾತ್ಮಕ ಕಾರ್ಯಗಳು ಹಾಗೂ ಓಡುವ ಕುಣಿಯುವ ಈಜುವ ಇತ್ಯಾದಿ ದೈಹಿಕ ಕ್ರಿಯೆಗಳು ನಡೆಯುತ್ತವೆ. ಸಂವೇದನೆಗಳ ಕಾರ್ಯಚಟುವಟಿಕೆಗಳು ನಮ್ಮ ವರ್ತನೆಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

## ಸಂವೇದನೆಯ ಲಕ್ಷಣಗಳು (Characteristics of Sensation)

ಪ್ರತಿಯೊಂದು ಸಂವೇದನೆಯು ತನ್ನದೇ ಆದ ವಿಶಿಷ್ಟ ಲಕ್ಷಣಗಳನ್ನು ಹೊಂದಿದೆ.ಅವುಗಳಲ್ಲಿ ಪ್ರಮುಖವಾದವುಗಳೆಂದರೆ,

1) **ತೀವ್ರತೆ:** ಉದ್ದೀಪನದ ತೀವ್ರತೆಗನುಗುಣವಾಗಿ ವ್ಯಕ್ತಿಯ ಸಂವೇದನೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಯಾವುದೇ ಸಂವೇದನೆ ಉಂಟಾಗಬೇಕಾದರೆ ಉದ್ದೀಪನದಲ್ಲಿ ತೀರ್ವತೆ ಇರುವುದು ಅಗತ್ಯವಾಗಿದೆ. ಒಂದು ದುರ್ಬಲ ಬೆಳಕು, ವಾಸನೆ, ಧ್ವನಿ ನಮ್ಮ ಮೇಲೆ ಯಾವೂದೇ ಪರಿಣಾಮ ಬೀರುವೂದಿಲ್ಲ. ಯಾವುದೇ ಒಂದು ಉದ್ದೀಪನ ಗರಿಷ್ಠ ಮಿತಿಯನ್ನು ಮೀರಿದರೆ ಅದು ನೋವನ್ನುಂಟು ಮಾಡುತ್ತದೆ. ಹಾಗೂ ಕನಿಷ್ಟ ಮಿತಿಗಿಂತ ಕಡಿಮೆಯಾದರೆ ಸಂವೇದನೆ ಉಂಟಾಗಲಾರದು. ಉದಾ: ಪ್ರಕಾಶ ಮಾನವಾದ ಬೆಳಕು ಅಥವಾ ಸಿಡಿಲಿನ ಶಬ್ದ ಕೇಳಿದಾಗ ಭಯ, ಆತಂಕ ಉಂಟಾಗುತ್ತದೆ.


2) **ಸುಸೂಪ್ತಾವಧಿ :** ಸಂವೇದನೆಯ ಮತ್ತೊಂದು ಲಕ್ಷಣವೇ ಸುಸೂಪ್ತಾವಧಿ. ಪ್ರಚೋದನೆ ಮತ್ತು ಸಂವೇದನೆಯು ಏಕಕಾಲದಲ್ಲಿ ನಡೆದರೂ ಎರಡರ ನಡುವೆ ಕಾಲಾವಧಿ ಬೇಕಾಗುತ್ತದೆ. ಪ್ರಚೋದನೆಯಾದಾಗ ನರವ್ಯೂಹವು ಮೆದುಳಿಗೆ ಮಾಹಿತಿ ರವಾನಿಸುತ್ತದೆ. ಮೆದುಳು ಪ್ರಚೋದನೆಗೆ ಪ್ರತಿಕ್ರಿಯಿಸಲು ನರಮಂಡಲದ ಮೂಲಕ ಕಾಲಾವಕಾಶ ತೆಗೆದುಕೊಳ್ಳುತ್ತದೆ. ಒಂದು ಅಂದಾಜಿನ ಪ್ರಕಾರ ಈ ಅವಧಿ 0.05 ಸೆಕೆಂಡಗಳಿಂದ 0.1 ಸೆಕೆಂಡಗಳಷ್ಟು ಸಮಯ ಬೇಕಾಗುತ್ತದೆ. ಉದಾ: ಶಿಕ್ಷಕರು ವಿದ್ಯಾರ್ಥಿಗೆ ಪ್ರಶ್ನೆ ಕೇಳಿದಾಕ್ಷಣ ಅದಕ್ಕೆ ಉತ್ತರಿಸಲು ವಿದ್ಯಾರ್ಥಿ ಸ್ವಲ್ಪ ಸಮಯ ತೆಗೆದುಕೊಳ್ಳುತ್ತಾನೆ.

3) **ಕಾಲಾವಧಿ:** ಸಂವೇದನೆಗೆ ಕಾಲಾವಧಿ ಇರುತ್ತದೆ. ಒಂದು ಪ್ರಚೋದನೆ ಸಂವೇದನೆಯಾಗಬೇಕಾದರೆ ಆ ಪ್ರಚೋದನೆ ಸ್ವಲ್ಪಕಾಲ ಮುಂದುವರರಿಯಬೇಕು ಅಂದರೆ ಪ್ರಚೋದನೆ ಸಂಬಂಧಪಟ್ಟ ಇಂದ್ರಿಯದ ಮೇಲೆ ಸಾಕಷ್ಟು ಪರಿಣಾಮ ಬೀರಬೇಕು. ಅಲ್ಪಾವಧಿಯ ಪ್ರಚೋನೆ ಸಂವೇದನೆ ಉಂಟು ಮಾಡಲಾರದು.

4) **ವಿಸ್ತೃತತೆ:** ಸಂವೇದನೆಗಳಿಗೆ ವಿಸ್ತೃತತೆ ಹೊಂದುವ ಗುಣವಿದೆ. ಅದರಲ್ಲೂ ಸ್ಪರ್ಶ ಮತ್ತು ದೃಷ್ಟಿಗೆ ಸಂಬಂಧಿಸಿದ ಸಂವೇದನೆಗಳಿಗೆ ಈ ವಿಸ್ತೃತತೆಯ ಅಗತ್ಯವಿದೆ. ಉದಾ: ಕಾರ್ಯಕ್ರಮದಲ್ಲಿ ಧ್ವನಿ ಹೆಚ್ಚಿಸಲು ಧ್ವನಿವರ್ಧಕವನ್ನುಬಳಸುತ್ತಾರೆ.

5) **ಗುಣಮಟ್ಟ:** ಸಂವೇದನೆಗಳು ಜೀವಿಗಳಲ್ಲಿ ಬಾಹ್ಯ ಪರಿಸರದ ಮತ್ತು ದೇಹದ ಆಂತರಿಕ ಅನುಭವ ಉಂಟಾಗುವಲ್ಲಿ ನೆರವಾಗುತ್ತವೆ. ಸಂವೇದನೆಗಳು ಬೆಳಕಿನ ಕಿರಣ ತರಂಗಗಳ ರೂಪದಲ್ಲಿ ಇರುತ್ತವೆ.

## 1.2 ಪ್ರತ್ಯಕ್ಷಾನುಭವದ ಪರಿಕಲ್ಪನೆ (Concept of Perception)




ಪ್ರತ್ಯಕ್ಷಾನುಭವವು ಒಂದು ಪ್ರಮುಖ ಮಾನಸಿಕ ಕ್ರಿಯೆಯಾಗಿದ್ದು, ಪರಿಸರದಲ್ಲಿ ಉಂಟಾಗುವ ಮಾರ್ಪಾಡು, ವ್ಯಕ್ತಿ, ವಸ್ತುಗಳನ್ನು ಗುರ್ತಿಸುವಲ್ಲಿ ಸಹಾಯಕವಾಗಿದೆ. ಯಾವುದೇ ವಸ್ತುವನ್ನು ನೋಡಿ ಅದನ್ನು ಸರಿಯಾಗಿ ಸೂಚಿಸಿದರೆ ಅದು ಪ್ರತ್ಯಕ್ಷಾನುಭವವಾಗುತ್ತದೆ. **ಜ್ಞಾನೇಂದ್ರಿಯಗಳು ಗ್ರಹಿಸಿದ ಸಂವೇದನೆಗಳ ವಿಶ್ಲೇಷಣೆ, ಸಂಶ್ಲೇಷಣೆ ಮತ್ತು ಅರ್ಥ ವಿವರಣೆಯನ್ನು 'ಪ್ರತ್ಯಕ್ಷಾನುಭವ'** ಎನ್ನುವರು. ಸಂವೇದನೆ ಪ್ರತ್ಯಕ್ಷಾನುಭವಕ್ಕೆ ಪೂರಕವಾಗಿದೆ. ಇದು ಪ್ರತ್ಯಕ್ಷಾನುಭವಕ್ಕೆ ಅಗತ್ಯವಾದರೆ, ಪ್ರತ್ಯಕ್ಷಾನುಭವವು ಸಂವೇದನೆಗೆ ಸ್ಪಷ್ಟರೂಪ ಕೊಡುತ್ತದೆ. ಉದಾಹರಣೆ : ಒಂದು ಹೂವನ್ನು ನೋಡುವುದು ಸಂವೇದನೆಯಾದರೆ, ಆ ಹೂವು ಯಾವುದು ಎಂದು ಗುರ್ತಿಸುವುದು ಪ್ರತ್ಯಕ್ಷಾನುಭವವಾಗುತ್ತದೆ. ಸಂವೇದನೆ ಪ್ರತ್ಯಕ್ಷಾನುಭವಕ್ಕೆ ದಾರಿಮಾಡಿಕೊಡುತ್ತದೆ. ಸಂವೇದನೆಗಳು ಅವಧಾನದಿಂದ ಬಲಗೊಂಡು ಪೂರ್ವಾನುಭವದ ಸಹಾಯದಿಂದ ಪ್ರತ್ಯಕ್ಷಾನುಭವ ಉಂಟಾಗುತ್ತದೆ. ಸಂವೇದನೆಯಾಗದ ಹೊರತು ಪ್ರತ್ಯಕ್ಷಾನುಭವವಾಗಲಾರದು. ವ್ಯಕ್ತಿಯು ಯಾವುದೇ ವಸ್ತುವನ್ನು ಸಂವೇದಿಸಲಾರದೇ ಪ್ರತ್ಯಕ್ಷಾನುಭವನ್ನು ಹೊಂದಲಾರನು. ವ್ಯಕ್ತಿ ವಸ್ತುವಿನ ಇರುವಿಕೆಯನ್ನು ಸಂವೇದಿಸುವುದರೊಂದಿಗೆ ಅದರ ಗಾತ್ರ, ಆಕಾರ, ಹೊಳಪು, ಬಣ್ಣ ಮುಂತಾದ ಲಕ್ಷಣಗಳ ವ್ಯತ್ಯಾಸಗಳನ್ನು ಗುರ್ತಿಸುವ ಸಾಮರ್ಥ್ಯ ಪಡೆಯುತ್ತಾನೆ. ಹಾಗಾಗಿ ಸಂವೇದನಾ ವ್ಯತ್ಯಾಸಗಳನ್ನು ಗುರ್ತಿಸುವುದು ಪ್ರತ್ಯಕ್ಷಾನುಭವದ ಮೊದಲ ಹೆಜ್ಜೆಯಾಗಿದೆ.

**ಸಂವೇದನೆಯ ಮೂಲಕ ಪ್ರಚೋದನೆಗಳಲ್ಲಿನ ವ್ಯತ್ಯಾಸಗಳನ್ನು ಗುರ್ತಿಸಿ ಅವುಗಳನ್ನು ಅರ್ಥೈಸುವ ಕ್ರಿಯೆಯೇ ಪ್ರತ್ಯಕ್ಷಾನುಭವವಾಗಿದೆ.** ಸಂವೇದನೆ ಮತ್ತು ವರ್ತನೆಯ ನಡುವಿನ ಕ್ರಿಯೆಯೇ ಪ್ರತ್ಯಕ್ಷಾನುಭವವಾಗಿರುವುದಿಂದ ಅದನ್ನು ನೇರವಾಗಿ ಗಮನಿಸುವುದು ಅಸಾಧ್ಯ ಜ್ಞಾನೇಂದ್ರಿಯಗಳನ್ನು ಪ್ರಚೋದಿಸಿ ವಸ್ತುಗಳ ಗುಣಗಳ ಘಟನೆಗಳ ಅರಿವನ್ನು ಪಡೆಯುವ ಕ್ರಿಯೆಯೇ ಪ್ರತ್ಯಕ್ಷಾನುಭವವಾಗಿದೆ.

| ಸಂವೇದನೆ | + | ಅರ್ಥಗ್ರಹಿಕೆ | = | ಪ್ರತ್ಯಕ್ಷಾನುಭವ |
|---|---|---|---|---|

ಪ್ರತ್ಯಕ್ಷಾನುಭವಕ್ಕೆ **'ಗ್ರಹಿಕೆ'** ಅಥವಾ **'ಗೋಚರಾನುಭವ'** ಎಂತಲೂ ಕರೆಯುತ್ತಾರೆ. ಸಂವೇದನೆಯ ಮೂಲಕ ಹೊರ ಜಗತ್ತಿನ ವಸ್ತು ವಿಷಯ ಹಾಗೂ ಮಾಹಿತಿಗಳನ್ನು ಸಂಸ್ಕರಿಸುವ ಮಾನಸಿಕ ಕ್ರಿಯೆಯೇ ಪ್ರತ್ಯಕ್ಷಾನುಭವಾಗಿದೆ. **ಸಂವೇದನೆಗೆ ನಿಲುಕುವ ವಸ್ತುವಿನ ಆಯ್ಕೆ, ಸಂಘಟನೆ ಮತ್ತು ವಿವರಣೆಯನ್ನು ಪ್ರತ್ಯಕ್ಷಾನುಭವ ಎನ್ನುವರು.**

ಪರಿಸರದಲ್ಲಿನ ವಸ್ತು, ವಿಷಯ, ಮತ್ತು ಘಟನೆಗಳಿಗೆ ಸಂಬಂಧಿಸಿದಂತೆ ಸಂವೇದನಾ ಪ್ರಚೋದನೆಗಳ ಮೂಲಕ ಮೆದುಳು ನೀಡುವ ಅರ್ಥವಿವರಣೆಗಳನ್ನು ಪ್ರತ್ಯಕ್ಷಾನುಭವ ಎನ್ನುತ್ತಾರೆ. ಸಂವೇದನೆ ಮತ್ತು ಹಿಂದಿನ ಅನುಭವಗಳನ್ನು ಅರ್ಥಪೂರ್ಣವಾಗಿಸುವ ಸಕ್ರಿಯಾತ್ಮಕ ಪ್ರಕ್ರಿಯೆಯೇ ಪ್ರತ್ಯಕ್ಷಾನುಭವ. ಪ್ರತ್ಯಕ್ಷಾನುಭವವು ಒಂದು ವೈಯಕ್ತಿಕ ಕ್ರಿಯೆಯಾಗಿದ್ದು, ಪರಿಸರ, ವಸ್ತು, ಸನ್ನಿವೇಶ ಮತ್ತು ವ್ಯಕ್ತಿಗಳೊಂದಿಗೆ ಸುಲಲಿತ ಸಂಪರ್ಕವನ್ನುಂಟುಮಾಡುವ ಮಾನಸಿಕ ಕ್ರಿಯೆಯಾಗಿದೆ. ಪ್ರತ್ಯಕ್ಷಾನುಭವವು ಕೇವಲ ಹೊರಗಿನಿಂದ ಬರುವ ಪ್ರಚೋದನೆಗಳನ್ನು ಗ್ರಹಿಸುವುದಷ್ಟೇ ಅಲ್ಲದೆ, ಪ್ರಚೋದನೆಗಳಿಗೆ ಅರ್ಥವನ್ನು ಸಹ ಕೊಡುವಂತಹ ಮಾನಸಿಕ ಪ್ರಕ್ರಿಯೆಯಾಗಿದೆ. ಅನೇಕ ಮನೋವಿಜ್ಞಾನಿಗಳು ಪ್ರತ್ಯಕ್ಷಾನುಭವವನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಿದ್ದಾರೆ

## ವ್ಯಾಖ್ಯೆಗಳು (Definitions)

**"ಖಚಿತವಾದ ಮತ್ತು ಊಹೆಗೆ ನಿಲುಕುವಂತಹ ಮನೋಸ್ಥಿತಿಯೇ ಪ್ರತ್ಯಕ್ಷಾನುಭವ"** – ವಿಲಿಯಂ ಜೇಮ್ಸ್

**"ನಮ್ಮ ಸಂವೇದನೆಗಳು ಮತ್ತು ಮೆದುಳಿನ ಕ್ರಿಯೆಗೆ ಸಂಬಂಧಿಸಿದಂತೆ ಪ್ರಚೋದನೆಯ ವಿಂಗಡಣೆ ಅರ್ಥೈಸುವಿಕೆ, ವಿಶ್ಲೇಷಣೆ ಮತ್ತು ಸಂಘಟನೆಯೇ ಪ್ರತ್ಯಕ್ಷಾನುಭವ"** – ಆರ್.ಎಸ್.ಫೆಲ್ಡ್‌ಮನ್.

**"ಪ್ರತ್ಯಕ್ಷಾನುಭವವು ಸಂಘಟಿತ ಕ್ರಿಯೆಯಾಗಿದ್ದು, ಸಂವೇದನಾ ಪ್ರಚೋದನೆಗಳ ಅರ್ಥ ವಿವರಣೆಯನ್ನು ನೀಡುವುದೇ ಪ್ರತ್ಯಕ್ಷಾನುಭವವಾಗಿದೆ"** – ಎಡ್ಮಂಡ್ ಪಾಂಟಿನೋ ಮತ್ತು ಜಿ.ಎಸ್. ರೇನಾಲ್ಡ್ಸ್.

ಪ್ರತ್ಯಕ್ಷಾನುಭವದ ಅರ್ಥ ಮತ್ತು ವ್ಯಾಖ್ಯೆಗಳನ್ನು ಗಮನಿಸಿದಾಗ ಅದು ಯಾವುದೇ ವಸ್ತುವಿನ ಅರ್ಥವಿವರಣೆಯನ್ನು ನೀಡುವ ಮೂಲಕ ಕಲಿಕೆ, ಸ್ಮೃತಿ, ಆಲೋಚನೆ, ವಿವೇಚನೆ ಮತ್ತು ಸಂವೇಗಗಳಂತಹ ಕ್ರಿಯೆಗಳ ಮೇಲೆ ಪ್ರಭಾವ ಬೀರುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಪ್ರತ್ಯಕ್ಷಾನುಭವವು ನಮ್ಮ ಜ್ಞಾನೇಂದ್ರಿಯಗಳ ಮೂಲಕವೇ ಉಂಟಾಗುತ್ತದೆ. ಜ್ಞಾನೇಂದ್ರಿಯಗಳ ಸಹಾಯವಿಲ್ಲದೆ ಪ್ರತ್ಯಕ್ಷಾನುಭವ ಉಂಟಾಗಲಾರದು. ಪ್ರತ್ಯಕ್ಷಾನುಭವ ಎಂಬುದು ಒಂದು ಮಾನಸಿಕ ಕ್ರಿಯೆಯಾಗಿದ್ದು, ಪರಿಸರದಲ್ಲಿನ ವಸ್ತುಗಳನ್ನು ಮತ್ತು ಘಟನೆಗಳನ್ನು ಸಂವೇದನಾ ಕ್ರಿಯೆಗಳು ಮತ್ತು ಪೂರ್ವಾನುಭವಗಳ ಮೂಲಕ ಗುರ್ತಿಸುವುದಾಗಿದೆ.

## ಪ್ರತ್ಯಕ್ಷಾನುಭವದ ಲಕ್ಷಣಗಳು (Characteristics of Perception)

ಪ್ರತ್ಯಕ್ಷಾನುಭವವು ಈ ಕೆಳಕಾಣಿಸಿದ ಪ್ರಮುಖ ಲಕ್ಷಣಗಳನ್ನು ಹೊಂದಿದೆ

1) **ಪ್ರತ್ಯಕ್ಷಾನುಭವವು ಒಂದು ಪ್ರಕ್ರಿಯೆಯಾಗಿದೆ:** ಪ್ರತ್ಯಕ್ಷಾನುಭವವು ಒಂದು ಉತ್ಪನ್ನವಾಗಿರದೆ, ಅದೊಂದು ಪ್ರಕ್ರಿಯೆಯಾಗಿದೆ. ಇದನ್ನು ಒಂದು ವ್ಯವಸ್ಥಾಮಾರ್ಗಕ್ಕೆ ಹೋಲಿಸಿದರೆ ನಮ್ಮ ಪಂಚೇಂದ್ರಿಯಗಳು ಸಂವೇದನೆಗಳಿಂದ ಪ್ರಭಾವಿತವಾಗುವದು ಕಚ್ಚಾ ಪದಾರ್ಥವಾದರೆ ಪೂರ್ವಾನುಭವಗಳ ಆಧಾರದ ಮೇಲೆ ವಸ್ತು ವಿಷಯ ಮತ್ತು ವ್ಯಕ್ತಿಗಳನ್ನು ಅರ್ಥೈಯಿಸುವಿಕೆ ಪ್ರಕ್ರಿಯೆಯಾಗುತ್ತದೆ. ಕಚ್ಚಾ ಪದಾರ್ಥಗಳನ್ನು ಅನುಭವಿಕ, ಸಂಘಟಿತ ರೂಪದಲ್ಲಿ ಪಕ್ಕಾ ವಸ್ತುವಾಗಿ ಮಾರ್ಪಡಿಸಲು ಈ ಪ್ರಕ್ರಿಯೆ ಅತ್ಯವಶ್ಯಕವಾಗಿದೆ.

2) **ಪ್ರತ್ಯಕ್ಷಾನುಭವವು ಮಾಹಿತಿ ಸಂಗ್ರಹಿಸುತ್ತದೆ:** ಜ್ಞಾನೇಂದ್ರಿಯಗಳು ನಿರಂತರವಾಗಿ ಪರಿಸರದ ವೈವಿಧ್ಯಮಯ ಪ್ರಚೋದನೆಯಿಂದ ಮಾಹಿತಿ ಸಂಗ್ರಹಿಸುತ್ತವೆ. ಆದರೆ ಪ್ರತಿಯೊಂದು ಪ್ರಚೋದನೆಗೆ ಪ್ರತಿಕ್ರಿಯಿಸುವುದು ಕಷ್ಟಕರವಾಗುತ್ತದೆ. ಆಯ್ಕೆಪ್ರಕ್ರಿಯೆಯು ಪ್ರತ್ಯಕ್ಷಾನುಭವದಲ್ಲಿ ಅತ್ಯಂತ ಅವಶ್ಯಕ ಕಾರ್ಯವಾಗಿದೆ. ಬಹಳಷ್ಟು ಸಂವೇದನೆಗಳಲ್ಲಿ ಉಪಯುಕ್ತ ಮಾಹಿತಿಯನ್ನು ಸಂಗ್ರಹಿಸಿ ಅರ್ಥಪೂರ್ಣ ರೀತಿಯಲ್ಲಿ ಮಾರ್ಪಡಿಸುತ್ತದೆ.

3) **ಪ್ರತ್ಯಕ್ಷಾನುಭವವು ಪ್ರತಿಕ್ರಿಯೆಯ ಸಿದ್ಧತೆಯಾಗಿದೆ:** ಪ್ರತ್ಯಕ್ಷಾನುಭವವು ಕ್ರಿಯಾಶೀಲವರ್ತನೆಯ ಮೊದಲ ಹೆಜ್ಜೆ ಯಾಗಿದೆ. ಇದೊಂದು ಪ್ರತಿಕ್ರಿಯೆಗೆ ಪೂರ್ವಸಿದ್ಧತಾ ಹಂತವಾಗಿದೆ. ಜ್ಞಾನೇಂದ್ರಿಯಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಪ್ರತ್ಯಕ್ಷಾನುಭವವು ಅರ್ಥಪೂರ್ಣವಾಗಿ ರೂಪಾಂತರಿಸುವ ನರಮಂಡಲ ಕೇಂದ್ರವಾಗಿದೆ. ಕೇಂದ್ರನರಮಂಡಲವು ನಾವು ಹೇಗೆ ಪ್ರತಿಕ್ರಿಯಿಸಬೇಕು ಎಂಬುದಕ್ಕೆ ನಿರ್ದೇಶನ ನೀಡುತ್ತದೆ.

4) **ಪ್ರತ್ಯಕ್ಷಾನುಭವವು ಸಂವೇದನೆಗಳನ್ನು ಒಳಗೊಂಡಿದೆ:** ಸರಳ ಹಾಗೂ ಸ್ಪಷ್ಟವಾಗಿ ಹೇಳುವುದಾದರೆ ಸಂವೇದನೆಯಿಂದಲೇ ಪ್ರತ್ಯಕ್ಷಾನುಭವವು ಉಂಟಾಗುತ್ತದೆ. ಸಂವೇದನೆಗಳು ಪ್ರತ್ಯಕ್ಷಾನುಭವಗಳೊಂದಿಗೆ ಅನ್ಯೋನ್ಯ ಸಂಬಂಧನ್ನು ಹೊಂದಿವೆ. ಸಂವೇದನೆ ಮಾಹಿತಿ ಪಡೆದರೆ ಪ್ರತ್ಯಕ್ಷಾನುಭವವು ಅರ್ಥಪೂರ್ಣ ವಿವರಣೆ ನೀಡುತ್ತದೆ.

5) **ಪ್ರತ್ಯಕ್ಷಾನುಭವವು ಸಂಘಟನೆಗೆ ಅವಕಾಶ ಕಲ್ಪಿಸುತ್ತದೆ :** ಸಂವೇದನೆಯು ಮಾಹಿತಿ ಸಂಗ್ರಹಣೆಯ ಭಾಗವಾದರೆ ಪ್ರತ್ಯಕ್ಷಾನುಭವವು ಮಾಹಿತಿಯನ್ನು ಸುವ್ಯವಸ್ಥಿತವಾಗಿ ಸಂಘಟಿಸುತ್ತದೆ. ಸನ್ನಿವೇಶದ ಭಾಗಗಳನ್ನು ಬಿಡಿಬಿಡಿಯಾಗಿ ಗ್ರಹಿಸದೆ ಇಡಿಯಾಗಿ ಗ್ರಹಿಸುತ್ತದೆ.

6) **ಪ್ರತ್ಯಕ್ಷಾನುಭವವು ಸಂಪೂರ್ಣ ವ್ಯಕ್ತಿಗತವಾಗಿದೆ:** ಪ್ರತ್ಯಕ್ಷಾನುಭವವು ಸಂಪೂರ್ಣವಾಗಿ ವ್ಯಕ್ತಿಗತ ಅಂಶವಾಗಿದೆ. ವಿಭಿನ್ನ ವ್ಯಕ್ತಿಗಳು ಒಂದೇ ವಸ್ತುಗಳ ಬಗೆಗೆ ವಿಭಿನ್ನರೀತಿಯಲ್ಲಿ ಪ್ರತ್ಯಕ್ಷಾನುಭವ ಪಡೆಯುತ್ತಾರೆ. ಒಂದೇ ಘಟನೆ ಅಥವಾ ಸನ್ನಿವೇಶಗಳನ್ನು ಒಬ್ಬೊಬ್ಬರು ಒಂದೊಂದು ರೀತಿಯಾಗಿ ಅರ್ಥೈಸಿಕೊಳ್ಳುತ್ತಾರೆ. ಏಕೆಂದರೆ ವ್ಯಕ್ತಿಯಿಂದ ವ್ಯಕ್ತಿಗೆ ಆಸಕ್ತಿ, ಅವಧಾನ, ಪ್ರೇರಣೆ ಮತ್ತು ಪೂರ್ವಾನುಭವಗಳು ಭಿನ್ನವಾಗಿರುತ್ತವೆ.

## ಸಂವೇದನೆ ಮತ್ತು ಪ್ರತ್ಯಕ್ಷಾನುಭವಗಳ ನಡುವಿನ ವ್ಯತ್ಯಾಸ

## (Difference between sensation and perception)

| ಸಂವೇದನೆ | ಪ್ರತ್ಯಕ್ಷಾನುಭವ |
|---|---|
| 1. ನಮ್ಮ ಇಂದ್ರಿಯಗಳ ಮೂಲಕ ಬಾಹ್ಯ ಪ್ರಚೋದನೆಗಳನ್ನು ಮೆದುಳಿಗೆ ತಲುಪಿಸುವ ಪ್ರಕ್ರಿಯೆಯೇ ಸಂವೇದನೆ. | 1. ಜ್ಞಾನೇಂದ್ರಿಯಗಳು ಗ್ರಹಿಸಿದ ಸಂವೇದನೆಗಳನ್ನು ಅರ್ಥೈಸುವದೇ ಪತ್ಯಕ್ಷಾನುಭವ. |
| 2. ಸಂವೇದನೆಗೆ ಜ್ಞಾನೇಂದ್ರಿಯಗಳು ಸಹಾಯಕವಾಗಿವೆ. | 2. ಪ್ರತ್ಯಕ್ಷಾನುಭವಕ್ಕೆ ಸಂವೇದನೆ ಮತ್ತು ಪೂರ್ವಾನುಭವ ಸಹಾಯಕವಾಗಿವೆ. |
| 3. ಸಂವೇದನೆಗೆ ಪ್ರಚೋದನೆ ಅವಶ್ಯಕವಾಗಿದೆ. | 3. ಪ್ರತ್ಯಕ್ಷಾನುಭವಕ್ಕೆ ಸಂವೇದನೆ ಅವಶ್ಯಕವಾಗಿದೆ. |
| 4. ಜ್ಞಾನೇಂದ್ರಿಯಗಳು ಸಂವೇದನೆಯನ್ನುಂಟು ಮಾಡುತ್ತವೆ. | 4. ಸಂವೇದನೆಗಳು ಪ್ರತ್ಯಕ್ಷಾನುಭವವನ್ನುಂಟು ಮಾಡುತ್ತವೆ. |
| 5. ಸಂವೇದನೆಯು ಇಂದ್ರಿಯಜನ್ಯ ಕ್ರಿಯೆಯಾಗಿದೆ. | 5. ಪ್ರತ್ಯಕ್ಷಾನುಭವವು ಮನೋಜನ್ಯ ಕ್ರಿಯೆಯಾಗಿದೆ. |
| 6. ಇಂದ್ರಿಯಗಳಲ್ಲಿ ದೋಷವಿದ್ದರೆ ಸಂವೇದನೆಗಳಲ್ಲಿ ದೋಷವಿರುತ್ತದೆ. | 6. ಸಂವೇದನೆಗಳಲ್ಲಿನ ದೋಷಗಳನ್ನು ಸರಿಪಡಿಸಿಕೊಂಡು ವಾಸ್ತವ ಚಿತ್ರ ಮೂಡಿಸುತ್ತದೆ. |
| 7. ಇದು ಸರಳ ಮತ್ತು ಸಾಮಾನ್ಯ ಮಾನಸಿಕ ಕ್ರಿಯೆಯಾಗಿದೆ. | 7. ಇದು ಸಂಕೀರ್ಣ ಮತ್ತು ಉನ್ನತ ಮಾನಸಿಕ ಕ್ರಿಯೆಯಾಗಿದೆ. |
| 8. ಸಂವೇದನೆಯಿಂದ ವಸ್ತುವಿನ ಸಂಪರ್ಕ ಮಾತ್ರ ಉಂಟಾಗುತ್ತದೆ. | 8. ಪ್ರತ್ಯಕ್ಷಾನುಭವದಿಂದ ವಸ್ತುವಿನ ಅರ್ಥಸ್ಥಿತಿಯ ಪರಿಜ್ಞಾನ ಉಂಟಾಗುತ್ತದೆ. |
| 9. ಸಂವೇದನೆಯು ಆಧಾರರಹಿತ ಅವಿಶ್ಲೇಷಿತ ಸಂಜ್ಞಾರೂಪವಾಗಿದೆ. | 9. ಪ್ರತ್ಯಕ್ಷಾನುಭವವು ಸ್ಪಷ್ಟ ಅರ್ಥ ವಿಶ್ಲೇಷಣೆಗೆ ಸಹಾಯಕವಾಗಿದೆ. |
| 10. ಸಂವೇದನೆಯು ಪೂರ್ವಾನುಭವಗಳನ್ನು ಆಧರಿಸಿಲ್ಲ | 10. ಪ್ರತ್ಯಕ್ಷಾನುಭವವು ಪೂರ್ವಾನುಭವಗಳನ್ನು ಆಧರಿಸಿದೆ. |

## 1.3 ಪ್ರತ್ಯಕ್ಷಾನುಭವದ ನಿರ್ಧಾರಕಗಳು (Determinants of perception)

ಪ್ರತ್ಯಕ್ಷಾನುಭವದ ಮೇಲೆ ಪ್ರಭಾವ ಬೀರುವ ಅನೇಕ ಅಂಶಗಳಿಗೆ ಪ್ರತ್ಯಕ್ಷಾನುಭವದ ನಿರ್ಧಾರಕಗಳೆನ್ನುತ್ತಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ.

### 1. ಜ್ಞಾನೇಂದ್ರಿಯಗಳ ಸ್ಥಿತಿಗತಿ ( Condition of sense organs)

ಪ್ರತ್ಯಕ್ಷಾನುಭವದ ನಿರ್ಧಾರಕ ಅಂಶಗಳಲ್ಲಿ ಜ್ಞಾನೇಂದ್ರಿಯಗಳು ಪ್ರಮುಖವಾಗಿವೆ. ಪಂಚೇಂದ್ರಿಯಗಳಿಗೆ (ಕಣ್ಣು, ಕಿವಿ. ಮೂಗು, ನಾಲಿಗೆ ತ್ವಚೆ) ಜ್ಞಾನೇಂದ್ರಿಯಗಳೆನ್ನುತ್ತಾರೆ. ಇವು ಅನುಭವಗಳ ಹೆಬ್ಬಾಗಿಲುಗಳಿದ್ದಂತೆ. ಜ್ಞಾನೇಂದ್ರಿಯಗಳೇ ಪ್ರತ್ಯಕ್ಷಾನುಭವದ ಸಾಧನಗಳಾಗಿವೆ. ಜ್ಞಾನೇಂದ್ರಿಯಗಳಲ್ಲಿರುವ ನರಗ್ರಾಹಿಗಳು ಸಂವೇದನೆಗಳನ್ನು ಗ್ರಹಿಸಿ ಮೆದುಳಿಗೆ ವರ್ಗಾಯಿಸುತ್ತವೆ. ಇವು ಸುಸ್ಥಿತಿಯಲ್ಲಿದ್ದಾಗ ಮಾತ್ರ ನಾವು ಗ್ರಹಿಸುವ ಸಂವೇದನೆಗಳು ಪ್ರತ್ಯಕ್ಷಾನುಭವಗಳಾಗಿ ಮಾರ್ಪಡುತ್ತವೆ. ಜ್ಞಾನೇಂದ್ರಿಯಗಳಲ್ಲಿ ಏನಾದರೂ ದೋಷವಿದ್ದರೆ ಅದು ಗ್ರಹಿಸುವ ಸಂವೇದನೆಯ ಮೇಲೆ ದುಷ್ಪರಿಣಾಮಬೀರುತ್ತದೆ.

### 2. ಮೆದುಳು ಮತ್ತು ನರವ್ಯೂಹ (Brain and nervous system)

ಜ್ಞಾನೇಂದ್ರಿಯಗಳ ಮೂಲಕ ಸಂವೇದನೆ ಉಂಟಾಗಿ ಮೆದುಳು ಪ್ರಚೋದನೆಗಳನ್ನು ಪಡೆದು ಸೂಕ್ತ ಅರ್ಥವಿವರಣೆ ಮಾಡಿದಾಗ ಮಾತ್ರ ಪ್ರತ್ಯಕ್ಷಾನುಭವ ಉಂಟಾಗುತ್ತದೆ. ಒಂದು ವೇಳೆ ಮೆದುಳು ಮತ್ತು ನರವ್ಯೂಹ ಕ್ರಿಯೆಯಲ್ಲಿ ಏನಾದರೂ ದೋಷವಿದ್ದರೆ, ಪ್ರತ್ಯಕ್ಷಾನುಭವ ಸಮರ್ಪಕವಾಗಿ ಆಗಲಾರದು. ಹಾಗಾಗಿ ಪ್ರತ್ಯಕ್ಷಾನುಭವವಾಗಲು ಮೆದುಳು ಹಾಗೂ ನರವ್ಯೂಹ ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು.

### 3. ಪ್ರೇರಕಗಳು (Motives)

ಪ್ರತ್ಯಕ್ಷಾನುಭವವನ್ನು ನಿರ್ಧರಿಸುವ ಅಂಶಗಳಲ್ಲಿ ಪ್ರೇರಕಗಳ ಪಾತ್ರವೂ ಪ್ರಮುಖವಾಗಿದೆ. ಯಾವುದೇ ವ್ಯಕ್ತಿಯ ಪ್ರತ್ಯಕ್ಷಾನುಭವವು ಆತನ ಬೇಡಿಕೆಗಳನ್ನಾಧರಿಸಿದೆ. ಅವನು ತನ್ನ ಅಗತ್ಯತೆಗಳ ತೃಪ್ತಿಗಾಗಿ ಆಲೋಚಿಸುತ್ತಾನೆ. ಉದಾಹರಣೆಗೆ ಹಸಿದವನಿಗೆ ಒಂದು ಅಸ್ಪಷ್ಟ ಚಿತ್ರ ತೋರಿಸಿ ಅದರ ವಿವರಣೆ ಕೇಳಿದರೆ ಆ ಚಿತ್ರವು ಆಹಾರದಂತೆ ಕಾಣುತ್ತದೆ ಎಂದು ತಿಳಿಸುತ್ತಾನೆ. ಹೀಗೆ ಮಾನವನ ಮೂಲ ಪ್ರೇರಣೆಗಳಾದ ಹಸಿವು, ತೃಷೆಗಳು ಪ್ರತ್ಯಕ್ಷಾನುಭವದ ಮೂಲಾಂಶಗಳಾಗಿವೆ.

### 4. ಪೂರ್ವಾನುಭವಗಳು (Past experiences)

ಪೂರ್ವಾನುಭವವು ಪ್ರತ್ಯಕ್ಷಾನುಭವಕ್ಕೆ ಅವಶ್ಯವಾಗಿದೆ. ಅಂದರೆ ಪ್ರಚೋದನೆಯಬಗ್ಗೆ ಮೊದಲೇ ತಿಳಿದಿದ್ದರೆ ಮಾತ್ರ ಅದನ್ನು ಪುನಃ ನೋಡಿದಾಗ ನಮಗೆ ಪ್ರತ್ಯಕ್ಷಾನುಭವವಾಗುತ್ತದೆ.

ಒಮ್ಮೆ ಪ್ರಚೋದನೆಯ ಅರಿವಾದರೆ ಅದರ ಮಾಹಿತಿ ಮೆದುಳಿನಲ್ಲಿ ಸಂಶ್ಲೇಷಿಸಲ್ಪಟ್ಟಿರುತ್ತದೆ. ಪುನಃ ಪ್ರಚೋದನೆಯಾದಾಗ ಸಂಶ್ಲೇಷಿಸಲ್ಪಟ್ಟ ಮಾಹಿತಿ ಆ ಪ್ರಚೋದನೆಯ ಮಾಹಿತಿ ಅರಿವನ್ನುಂಟುಮಾಡುತ್ತದೆ. ಹಾಗಾಗಿ ಪ್ರತ್ಯಕ್ಷಾನುಭವವಾಗಲು ಪೂರ್ವಾನುಭವಗಳು ಅತ್ಯವಶ್ಯಕವಾಗಿವೆ.

ಉದಾಹರಣೆಗೆ ಮಗು ಬೆಟ್ಟವನ್ನು ಪ್ರತ್ಯಕ್ಷವಾಗಿ ಅಥವಾ ಚಿತ್ರದಲ್ಲಿ ನೋಡಿದ್ದರೆ ಮಾತ್ರ ಮತ್ತೆ ಅದನ್ನು ಕಂಡಾಗ ಬೆಟ್ಟ ಎಂದು ಗುರ್ತಿಸಬಲ್ಲದು. ಆ ಮಗು ಹಿಂದೆ ಬೆಟ್ಟವನ್ನೇ ನೋಡಿರದಿದ್ದರೆ ಆಗ ಅದು ಬೆಟ್ಟವೆಂದು ಹೇಳಲಾರದು. ಅಂದರೆ ಪೂರ್ವಾನುಭವವಿಲ್ಲದಿದ್ದರೆ ಅದರ ಪ್ರತ್ಯಕ್ಷಾನುಭವ ಆಗಲಾರದು.

### 5. ನಿರೀಕ್ಷೆಗಳು (Expectations)

ನಿರೀಕ್ಷೆಗಳು ಸಹ ಪ್ರತ್ಯಕ್ಷಾನುಭವದ ಮೂಲಾಂಶಗಳಾಗಿವೆ. ನಿರೀಕ್ಷೆಗಳು ಪ್ರತ್ಯಕ್ಷಾನುಭವವನ್ನುಂಟು ಮಾಡುತ್ತವೆ. ಉದಾಹರಣೆಗೆ–ನಿಮ್ಮ ತಂದೆಯವರು ಊರಿನಿಂದ 4 ಗಂಟೆಗೆ ಬರುತ್ತೇನೆ ಎಂದು ಹೇಳಿದ್ದರೆ ನೀವು ನಿಮ್ಮ ಮನೆಯಲ್ಲಿ ಅವರಿಗಾಗಿ ಕಾಯುತ್ತಿರುವಾಗ 4 ಗಂಟೆಗೆ ಯಾರಾದರೂ ನಿಮ್ಮ ಬಾಗಿಲನ್ನು ತಟ್ಟಿದಾಗ ನಿಮ್ಮ ಪ್ರತ್ಯಕ್ಷಾನುಭವದ ನಿರೀಕ್ಷೆಯಿಂದ ನಿಮ್ಮ ತಂದೆ ಬಂದರು ಎಂದು ತಿಳಿದುಕೊಳ್ಳುತ್ತೀರಿ. ಹೀಗೆ ನಮ್ಮ ನಿರೀಕ್ಷೆಗಳು ಪ್ರತ್ಯಕ್ಷಾನುಭವವನ್ನುಂಟು ಮಾಡುತ್ತವೆ.

### 6. ಅವಧಾನ (Attention)

ಪ್ರತ್ಯಕ್ಷಾನುಭವದ ನಿರ್ಧಾರಕಗಳಲ್ಲಿ ಅವಧಾನವು ಪ್ರಮುಖವಾಗಿದೆ. ಅವಧಾನವಿಲ್ಲದೆ ಪ್ರತ್ಯಕ್ಷಾನುಭವ ಅಸಾಧ್ಯ. ಮನಸ್ಸಿನ ಏಕಾಗ್ರತೆಯೇ ಅವಧಾನವಾಗಿದೆ. ಇದು ವಸ್ತು ವಿಷಯಗಳನ್ನು ಅರ್ಥೈಸಿಕೊಳ್ಳಲು ನೆರವಾಗುತ್ತದೆ. ಅವಧಾನವು ನಮ್ಮ ಅನುಭವ ಕ್ಷೇತ್ರವನ್ನು ಪ್ರಮುಖ ಮತ್ತು ಪ್ರಮುಖವಲ್ಲದವುಗಳೆಂದು ವಿಂಗಡಿಸಿ ಪ್ರಮುಖವಾದವುಗಳ ಬಗ್ಗೆ ಅವಧಾನ ಕೇಂದ್ರೀಕರಿಸುವುದರ ಮೂಲಕ ಪ್ರತ್ಯಕ್ಷಾನುಭವಕ್ಕೆ ದಾರಿಮಾಡಿ ಕೊಡುತ್ತದೆ.

### 7. ನಂಬಿಕೆ ಮತ್ತು ಮೌಲ್ಯಗಳು ( Beliefs and values )

ಪ್ರತ್ಯಕ್ಷಾನುಭವವನ್ನು ನಿರ್ಧರಿಸುವಲ್ಲಿ ನಂಬಿಕೆ ಮತ್ತು ಮೌಲ್ಯಗಳು ಸಹ ಪ್ರಮುಖವಾಗಿವೆ. ನಂಬಿಕೆ ಮತ್ತು ಮೌಲ್ಯಗಳು ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರದ ಅಂಶಗಳಾಗಿದ್ದು, ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಾಗುತ್ತವೆ.

### 8. ಮನೋಭಾವ (Attitude)

ಒಂದು ಪ್ರಚೋದನೆಯು ಪ್ರತ್ಯಕ್ಷಾನುಭವವಾಗಲು ವ್ಯಕ್ತಿ ಧನಾತ್ಮಕ ಮನೋಭಾವ ಹೊಂದಿರಬೇಕು. ಅಂದರೆ ಪ್ರಚೋದನೆ ಗ್ರಹಿಸಲು ಉತ್ತಮ ಮನೋಭಾವ ಅಗತ್ಯವಾಗಿದೆ. ಮನೋಭಾವಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುವುದರ ಮೂಲಕ ಪ್ರತ್ಯಕ್ಷಾನುಭವವನ್ನು ನಿರ್ಧರಿಸುತ್ತವೆ. ಅಶಾಂತಿಯಿಂದ ಕೂಡಿದ ಮನಸ್ಸು ಪ್ರಚೋದನೆಯನ್ನು ಸರಿಯಾಗಿ ಗ್ರಹಿಸಲಾರದು. ಉದಾಹರಣೆಗೆ– ಪೂರ್ವಾಗ್ರಹಪೀಡಿತ ಮನಸ್ಸು ಒಂದು ಪ್ರಚೋದನೆಯನ್ನು ತಪ್ಪಾಗಿ ಗ್ರಹಿಸುತ್ತದೆ. ಹಾಗಾಗಿ ಪ್ರತ್ಯಕ್ಷಾನುಭವ ಸೂಕ್ತವಾಗಲು ಪ್ರಚೋದನೆಯನ್ನು ಗ್ರಹಿಸುವ ಸೂಕ್ತ ಮನಸ್ಥಿತಿ ಅಗತ್ಯವಾಗಿದೆ.

## 1.4 ಭಾವರೂಪಣ (Concept Formation)

ಮಾನವನ ಆಲೋಚನೆಯ ಮೂಲಭೂತ ಘಟಕವೇ ಭಾವರೂಪಣವಾಗಿದೆ. ಪರಿಕಲ್ಪನೆಗಳು ಪ್ರತ್ಯಕ್ಷಾನುಭವಗಳಿಂದ ಉಂಟಾಗುತ್ತವೆ. ಆಲೋಚನೆಯಲ್ಲಿ ಬಳಸುವ ಪರಿಕಲ್ಪನೆಗಳನ್ನು ಅರ್ಥಪೂರ್ಣ ಶಾಬ್ದಿಕ ಸಂಕೇತಗಳೆನ್ನಬಹುದು. ಈ ಪರಿಕಲ್ಪನೆಗಳು ವಸ್ತು, ವಿಷಯ ಮತ್ತು ಮೌಲ್ಯಗಳನ್ನು ಪ್ರತಿನಿಧಿಸುತ್ತವೆ. ಮಗು ಅನೇಕ ವಸ್ತುಗಳನ್ನು ಜ್ಞಾನೇಂದ್ರಿಯಗಳಿಂದ ಗ್ರಹಿಸಿ ಜ್ಞಾಪಕದಲ್ಲಿಟ್ಟುಕೊಂಡು, ಅವುಗಳ ನಡುವಿನ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಅಮೂರ್ತಗೊಳಿಸುವ ಕ್ರಿಯೆಯ ಮೂಲಕ ಪರಿಕಲ್ಪನೆಗಳು ರೂಪುಗೊಳ್ಳುತ್ತವೆ. ಪರಿಕಲ್ಪನಾ ರಚನೆ ಕಲಿಕೆಗೆ ನೆರವಾಗುವುದರ ಮೂಲಕ ಮಾನಸಿಕ ವಿಕಾಸವನ್ನುಂಟು ಮಾಡುತ್ತದೆ. ಇದರಿಂದಾಗಿ ಮಕ್ಕಳಿಗೆ ಮೂರ್ತ(ವಾಸ್ತವಿಕ) ಜ್ಞಾನ ನೀಡುವುದರ ಮೂಲಕ ಅಮೂರ್ತ ಆಲೋಚನೆಗೆ ಅಣಿಗೊಳಿಸಬಹುದಾಗಿದೆ.

### ಭಾವರೂಪಣದ ಅರ್ಥ (Meaning of Concept Formation)

ಪರಿಕಲ್ಪನಾ ರಚನೆಗೆ **'ಬಿಂಬಕಲ್ಪನೆ' 'ಭಾವರೂಪಣ' 'ಭಾವಕಲ್ಪನೆ'** ಗಳೆಂತಲೂ ಕರೆಯುತ್ತಾರೆ. ಆಲೋಚನೆಗೆ ಪ್ರತ್ಯಕ್ಷ ಜ್ಞಾನ ಪ್ರಥಮ ಹೆಜ್ಜೆಯಾದರೆ, ಎರಡನೆಯ ಹೆಜ್ಜೆಯೇ ಭಾವರೂಪಣವಾಗಿದೆ.

### ವ್ಯಾಖ್ಯೆಗಳು (Definitions)

**ಒಮ್ಮೆ ಪ್ರತ್ಯಕ್ಷಾನುಭವದಿಂದ ಪಡೆದ ದೃಶ್ಯವನ್ನು ಪುನಃ ಮನಸ್ಸಿನಲ್ಲಿ ಮೂಡಿಸಿಕೊಳ್ಳುವುದೇ ಭಾವರೂಪಣ**

**ಸಂವೇದನೆ + ಅರ್ಥೈಸುವಿಕೆ = ಪ್ರತ್ಯಕ್ಷಾನುಭವ + ಸಾಮಾನ್ಯೀಕರಣ = ಭಾವರೂಪಣ**


**"ನಮ್ಮ ವಾಸ್ತವಿಕ ಅಥವಾ ಕಾಲ್ಪನಿಕ ಯೋಜನೆಯ ವಿಷಯಗಳನ್ನು ಅರ್ಥೈಸಲು ಅರ್ಹತೆಯನ್ನು ಒದಗಿಸುವ ಮಾದರಿ ಯೋಜನೆ ಹಾಗೂ ಮಾನಸಿಕ ಭಾವನೆಗಳೇ ಭಾವರೂಪಣ"** – ಜೇಮ್ಸ್ ರಾಸ್

**"ಅನೇಕ ವಸ್ತುಗಳು ಅಥವಾ ಘಟನೆಗಳನ್ನು ಹೊಂದಿರುವ ಸಾಮಾನ್ಯ ಗುಣಲಕ್ಷಣಗಳನ್ನು ಪ್ರತಿನಿಧಿಸುವ ಸಾಂಕೇತಿಕ ರಚನೆಯೇ ಪರಿಕಲ್ಪನೆ."** –ಮೊರ್ಗಾನ್

**"ಸಾಮಾನ್ಯ ಗುಣಲಕ್ಷಣಗಳನ್ನು ಹೊಂದಿರುವ ಜನರು, ಘಟನೆಗಳು ಅಥವಾ ವಸ್ತುಗಳನ್ನು ಒಗ್ಗೂಡಿಸುವಿಕೆಯೇ ಪರಿಕಲ್ಪನೆ."** –ಫೆಲ್ಡ್‌ಮನ್

ಭಾವರೂಪಣದ ಅರ್ಥ ಮತ್ತು ವ್ಯಾಖ್ಯೆಗಳನ್ನು ಗಮನಿಸಿದಾಗ ಪ್ರತ್ಯಕ್ಷಾನುಭವದ ಫಲವಾಗಿ ನಮ್ಮ ಮನಸ್ಸಿನಲ್ಲಿ ಮೂಡುವ ಆ ವಸ್ತು, ವಿಷಯ, ವ್ಯಕ್ತಿಗಳ ಅಮೂರ್ತ ಚಿತ್ರಣವೇ ಭಾವರೂಪಣ ಎಂಬುದು ಸ್ಪಷ್ಟವಾಗುತ್ತದೆ. ನಾವು ಪಂಚೇಂದ್ರಿಯಗಳ ಮೂಲಕ ಪ್ರತ್ಯಕ್ಷವಾಗಿ ಪಡೆದ ವಿಷಯ, ವಸ್ತು ಮತ್ತು ಚಿತ್ರಣಗಳನ್ನು ಬೇಕೆಂದಾಗ ಸ್ಮೃತಿ ಪಟಲದ ಮೇಲೆ ತಂದುಕೊಳ್ಳುವ ಕ್ರಿಯೆಯೇ ಭಾವರೂಪಣವಾಗಿದೆ.

## ಭಾವರೂಪಣದ ಪ್ರಕ್ರಿಯೆ (Process of concept formation)




1) **ಅನುಭವ(Experience):** ಅನುಭವವು ಕ್ರಿಯೆಯಲ್ಲಿ ನೇರವಾಗಿ ಭಾಗವಹಿಸುವ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆಯಲ್ಲಿ ಪಂಚೇಂದ್ರಿಯಗಳು ಪಾಲ್ಗೊಂಡು ಜ್ಞಾನದ ಅನುಭವಗಳನ್ನು ಪಡೆಯುತ್ತವೆ. ವೀಕ್ಷಣೆಯು ಅನುಭವಕ್ಕೆ ಅವಕಾಶ ನೀಡುತ್ತದೆ.

2) **ಸಾರಾಂಶೀಕರಣ (Abstraction):** ಸಾರಾಂಶೀಕರಣ ವಿಶ್ಲೇಷಣಾ ಪ್ರಕ್ರಿಯೆಯಾಗಿದೆ. ಇದರಲ್ಲಿ ಅವಶ್ಯಕ ಗುಣಧರ್ಮಗಳನ್ನು ಪರಿಗಣಿಸಿ ಅನವಶ್ಯಕ ಮತ್ತು ನಿರುಪಯುಕ್ತ ಗುಣಗಳನ್ನು ಕೈಬಿಡಲಾಗುವುದು. ಬಹಳಷ್ಟು ಸನ್ನಿವೇಶದಲ್ಲಿ ಅನುಭವಿಸಿ ಸಾಮಾನ್ಯ ಅಂಶಗಳನ್ನು ಶೋಧಿಸುವ ಪ್ರಕ್ರಿಯೆ ಇದಾಗಿದೆ.

3) **ಸಾಮಾನ್ಯೀಕರಣ(Genaralization):** ಸಾಮಾನ್ಯೀಕರಣವು ಭಾವರೂಪದಲ್ಲಿನ ಮತ್ತೊಂದು ಪ್ರಮುಖ ಅಂಶವಾಗಿದೆ. ಸಾಮಾನ್ಯೀಕರಣ ಪ್ರಕ್ರಿಯೆಯು ನಾವು ಈ ಹಿಂದೆ ಪಡೆದಿರುವಂತಹ ವಸ್ತುಗಳಲ್ಲಿಯ ಸಾಮಾನ್ಯ ಅಂಶಗಳನ್ನು ಗುರುತಿಸಿ ವಿಸ್ತೃತಗೊಳಿಸುವ ಪರಿಕಲ್ಪನೆಯಾಗಿದೆ. ಅಮೂರ್ತಜ್ಞಾನವು ಅಸಂಖ್ಯಾತ ಸನ್ನಿವೇಶ ಮತ್ತು ವಸ್ತುಗಳೊಂದಿಗೆ ಪರೀಕ್ಷಿಸಿ ಭಾವರೂಪಣವನ್ನು ಸ್ಪಷ್ಟೀಕರಣಗೊಳಿಸಿ ಅದನ್ನು ಸಾಮಾನ್ಯೀಕರಣಗೊಳಿಸುವುದು.

4) **ವಿಶ್ಲೇಷಣೆ(Analysis):** ಇದೊಂದು ವ್ಯವಸ್ಥಿತ ವಿಧಾನವಾಗಿದೆ. ಇಲ್ಲಿ ತಂತ್ರಗಳನ್ನು ಬಳಸಿಕೊಂಡು ಶೈಕ್ಷಣಿಕ ವಿಷಯ ವಸ್ತುವನ್ನು ವಿಶ್ಲೇಷಿಸುವ ಒಂದು ಕ್ರಮಬದ್ಧವಾದ ವಿಧಾನವಾಗಿದೆ. ಜ್ಞಾನವನ್ನು ಪಡೆದು ಅದನ್ನು ಸರಿಯಾಗಿ ಅರ್ಥೈಯಿಸಿಕೊಂಡು ವಿಶ್ಲೇಷಿಸಿ ಜೀವನದಲ್ಲಿ ಅಳವಡಸಿಕೊಳ್ಳುವುದಾಗಿದೆ.

## 1.5 ಚಿಂತನೆ (ಆಲೋಚನೆ) (Thinking)



ಚಿಂತನೆ ಮನುಷ್ಯನ ಉನ್ನತ ಮಾನಸಿಕ ಕ್ರಿಯೆಯಾಗಿದ್ದು, ಅದು ವ್ಯಕ್ತಿ ಪ್ರಗತಿ ಹೊಂದಲು ಸಹಾಯಕವಾಗಿದೆ. ಚಿಂತನೆಗಳೇ ನಮ್ಮ ಭವಿಷ್ಯತ್ತಿನ ಅಡಿಪಾಯಗಳಾಗಿವೆ. ನಾವು ಹೇಗೆ ಯೋಚನೆ ಮಾಡುತ್ತೇವೆಯೋ ಹಾಗೇ ನಮ್ಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಏನನ್ನಾದರೂ ಮಾಡಬೇಕೆಂದರೆ ಮೊದಲು **ಯೋಚನೆ** ನಂತರ **ಯೋಜನೆ,** ಅನಂತರ **ಕಾರ್ಯಾಚರಣೆ** ಮಾಡಬೇಕಾಗುತ್ತದೆ. ವ್ಯಕ್ತಿ ಮಾಡುವ ಪ್ರತಿಯೊಂದು ಚಟುವಟಿಕೆಯು ಚಿಂತನೆಯ ಪ್ರಭಾವಕ್ಕೆ ಒಳಗಾಗಿರುತ್ತದೆ. ಸಕಾರಾತ್ಮಕ ಚಿಂತನೆಗಳು ವ್ಯಕ್ತಿ ಮತ್ತು ಸಮಷ್ಠಿಯ ಏಳಿಗೆಗೆ ಪೂರಕವಾಗಿವೆ. ಮಾನವನ ಇಂದಿನ ಏನೆಲ್ಲಾ ಸಾಧನೆಗೆ ಆತನ ಚಿಂತನೆಗಳೇ ಕಾರಣವಾಗಿವೆ. ಹಾಗಾಗಿ ಮನುಷ್ಯನ ಚಿಂತನೆಗಳು ಅದ್ವಿತೀಯವಾಗಿವೆ.

## ಚಿಂತನೆಯ ಪರಿಕಲ್ಪನೆ (Concept of Thinking)

'ಚಿಂತನೆಗೆ ಇಂಗ್ಲೀಷಿನಲ್ಲಿ 'Thinking 'ಎನ್ನುವರು' Thinking ಎಂದರೆ **ಯೋಚನೆ, ಆಲೋಚನೆ, ಚಿಂತನೆ, ವಿಚಾರಿಸುವುದು** ಎಂದು ಅರ್ಥವಾಗುತ್ತದೆ.

**"ವ್ಯಕ್ತಿ ವ್ಯವಸ್ಥಿತವಾಗಿ ತಾರ್ಕಿಕವಾಗಿ ಆಲೋಚಿಸುವ ಮಾನಸಿಕ ಕ್ರಿಯೆಯೇ ಚಿಂತನೆ."**

ಚಿಂತನೆಗಳು ನಮ್ಮ ಜ್ಞಾನಾತ್ಮಕ ಪ್ರಕ್ರಿಯೆಗಳಾಗಿದ್ದು, ಯಾವುದೇ ವಿಚಾರಗಳಿಗೆ ಸಂಬಂಧಿಸಿದಂತೆ ಮಾನಸಿಕವಾಗಿ ಉಂಟಾಗುವ ಮಾರ್ಪಾಡುಗಳನ್ನು ಚಿಂತನೆ ಎನ್ನುವರು.

ಒಂದು ನಿರ್ದಿಷ್ಟ ವಿಷಯವನ್ನು ವಿವಿಧ ದೃಷ್ಟಿಕೋನದಿಂದ ಪರಿಶೀಲಿಸಿ, ನಿರ್ಣಯಿಸುವ ಮಾನಸಿಕ ಸಾಮರ್ಥ್ಯಕ್ಕೆ ಚಿಂತನೆ ಎನ್ನುತ್ತಾರೆ. ಚಿಂತನೆಯು ನಮ್ಮ ಮನಸ್ಸಿನ ಆಂತರಿಕ ಪ್ರಕ್ರಿಯೆಯಾಗಿದ್ದು ಅದು ವ್ಯಕ್ತಿಯ ಕ್ರಿಯೆ ಅಥವಾ ವರ್ತನೆಯಿಂದ ಮಾತ್ರ ವ್ಯಕ್ತವಾಗುತ್ತದೆ.

### ವ್ಯಾಖ್ಯೆಗಳು: (Definitions)

**"ಸಂಜ್ಞಾನಾತ್ಮಕ ವಿಷಯದ ಒಂದು ಬೌದ್ಧಿಕ ಪ್ರಕ್ರಿಯೆಯೇ ಆಲೋಚನೆ"** – ರಾಸ್

**"ಆಲೋಚನೆಗಳು ಸಮಸ್ಯಾಪರಿಹಾರದ ಪ್ರಕ್ರಿಯೆಗಳಾಗಿದ್ದು, ಸ್ಪಷ್ಟವಾದ ಕಲ್ಪನೆ ಮತ್ತು ಸಂಕೇತಗಳನ್ನು ಒಳಗೊಂಡಿದೆ"** –ಗಿಲ್ಮರ್

**"ಸಮಸ್ಯಾ ಪರಿಹಾರದ ವರ್ತನೆಯನ್ನು ಒಳಗೊಂಡಿರುವುದೇ ಚಿಂತನೆ."** –ಮೋಸಿನ್

ಚಿಂತನೆಯ ಬಗೆಗಿನ ಪರಿಕಲ್ಪನೆಯನ್ನು ಗಮನಿಸಿದಾಗ ಇದೊಂದು ಸಂಕೀರ್ಣ ಬೌದ್ಧಿಕ ಪ್ರಕ್ರಿಯೆಯಾಗಿದ್ದು, ಸಮಸ್ಯೆಗೆ ಪರಿಹಾರ ನೀಡುವ ಮಾನಸಿಕ ಮಾರ್ಪಾಡನ್ನುಂಟು ಮಾಡುವ ಉನ್ನತ ಜೀವಿಗಳಲ್ಲಿ ಕಾಣಿಸಿಕೊಳ್ಳುವ ಮಾನಸಿಕ ಪ್ರಕ್ರಿಯೆಯೇ ಆಲೋಚನೆ ಎಂಬುದು ಸ್ಪಷ್ಟವಾಗುತ್ತದೆ. ಯೋಚನೆಗಳೇ ಯಶಸ್ಸಿನ ಸಾಧನಗಳಾಗಿವೆ. ಒಳ್ಳೆಯ ಯೋಚನೆಯೊಂದಿಗೆ ದೃಢ ಸಂಕಲ್ಪ ಗುರಿಸಾಧಿಸುವ ಛಲ ಬೆರೆತಾಗ ಹಾಗೂ ಯೋಚನೆಗಳನ್ನೇ ಸಂಪತ್ತಾಗಿ ಪರಿವರ್ತಿಸಿದಾಗ ನೀವು ಯಶಸ್ವಿ ವ್ಯಕ್ತಿಗಳಾಬಲ್ಲಿರಿ ಅಥವಾ ಮಹಾನ್ ಸಾಧಕರಾಗಬಲ್ಲಿರಿ

## ಚಿಂತನೆಯ ಪ್ರಕಾರಗಳು (Types of Thinking)

ಚಿಂತನೆಯು ವ್ಯಕ್ತಿಯ ಮನಸ್ಸಿನ ಅಂತರಾಳದಲ್ಲಿ ನಡೆಯುವ ಮಾನಸಿಕ ಕ್ರಿಯೆಯಾಗಿದೆ. ಚಿಂತನೆಯ ಪ್ರಕ್ರಿಯೆಯು ಸಮಸ್ಯಾಪರಿಹಾರ, ವಿವೇಚನೆ, ತೀರ್ಮಾನ ಕೈಗೊಳ್ಳುವಿಕೆ ಮತ್ತು ಸೃಜನಾತ್ಮಕ ಚಿಂತನೆಗಳೆಂಬ ನಾಲ್ಕು ವಿಧಗಳನ್ನು ಹೊಂದಿದೆ.

### I. ಸಮಸ್ಯಾಪರಿಹಾರ (Problem solving)

ವ್ಯಕ್ತಿಯ ದೈನಂದಿನ ಕಾರ್ಯಚಟುವಟಿಕೆಯಲ್ಲಿ ಸಮಸ್ಯಾಪರಿಹಾರ ಪ್ರಮುಖವಾಗಿದೆ. ಸಮಸ್ಯಾ ಪರಿಹಾರವು ಒಂದು ರೀತಿಯ ಅಲೋಚನಾ ಪ್ರಕ್ರಿಯೆಯಾಗಿದ್ದು ಗುರಿಸಾಧನೆಯೆಡೆಗೆ ಪ್ರಯತ್ನಿಸುವಂತೆ ಮಾಡುತ್ತದೆ. ಪ್ರತಿಯೊಂದು ಸಮಸ್ಯೆಗೆ ಪರಿಹಾರ ನಮ್ಮ ಮನಸ್ಸಿನಲ್ಲಿಯೇ ಇರುತ್ತದೆ. ಸಮಸ್ಯೆಯ ಗಂಭೀರತೆಯನ್ನು ಅರ್ಥೈಸಿಕೊಂಡು ಆಲೋಚನೆಯ ಮೂಲಕ ಸೂಕ್ತ ಪರಿಹಾರ ಕಂಡುಕೊಳ್ಳಬಹುದಾಗಿದೆ. ಸಮಸ್ಯೆಗೆ ಪರಿಹಾರ ಹುಡುಕುವಲ್ಲಿ ವ್ಯಕ್ತಿಭಿನ್ನತೆಯನ್ನು ಕಾಣುತ್ತೇವೆ.

**ವ್ಯಕ್ತಿ ತನ್ನ ಆಲೋಚನೆಯ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದಕ್ಕೆ ಸಮಸ್ಯಾಪರಿಹಾರ ಎನ್ನುವರು. ವ್ಯಕ್ತಿ ಕಾರ್ಯನಿರತನಾದಾಗ ಉಂಟಾಗುವ ಅಡತಡೆಗೆ ಸಮಸ್ಯೆ ಎನ್ನುವರು. ತನ್ನ ಆಲೋಚನೆಯ ಮೂಲಕ ಅಡೆತಡೆಯನ್ನು ನಿವಾರಿಸಿಕೊಂಡು ಗುರಿಯೆಡೆಗೆ ತಲುಪುವ ಮಾನಸಿಕ ಪ್ರಕ್ರಿಯೆಗೆ ಸಮಸ್ಯಾಪರಿಹಾರ ಎನ್ನುತ್ತಾರೆ.**

ಸಮಸ್ಯಾಪರಿಹಾರಕ್ಕೆ ಪ್ರತಿಯೊಬ್ಬ ವ್ಯಕ್ತಿ ತನ್ನದೇ ಆದ ವಿಶಿಷ್ಟ ವಿಧಾನವನ್ನು ಬಳಸಿಕೊಳ್ಳುತ್ತಾನೆ. ಸಮಸ್ಯಾಪರಿಹಾರವು ಒಂದು ಉದ್ದೇಶಿತ ಕಾರ್ಯಚಟುವಟಿಕೆಯಾಗಿದ್ದು, ಆ ಉದ್ದೇಶ ಸಾಧನೆಯತ್ತ ಪ್ರಯತ್ನಿಸಲು ಹಚ್ಚುತ್ತದೆ. ಸಮಸ್ಯಾ ಪರಿಹಾರದಲ್ಲಿ ಪ್ರಾರಂಭದ ಹಂತ(ಸಮಸ್ಯೆ) ಮತ್ತು ಕೊನೆಯ ಹಂತ( ಗುರಿಸಾಧನೆ) ಎಂಬ ದ್ವಿಮುಖಗಳನ್ನು ಕಾಣುತ್ತೇವೆ. ಈ ಎರಡು ತುದಿಗಳ ನಡುವೆ ಮಾನಸಿಕ ಸಿದ್ದತೆಯ ಅನೇಕ ಹಂತಗಳನ್ನು ಕಾಣುತ್ತೇವೆ.

## ಸಮಸ್ಯಾಪರಿಹಾರದ ಹಂತಗಳು (Stages of problem solving)

1. ಸಮಸ್ಯೆಯನ್ನು ಗುರ್ತಿಸುವುದು.
2. ಸಮಸ್ಯೆಯನ್ನು ಪ್ರತಿನಿಧಿಸುವುದು.
3. ಪರಿಹಾರೋಪಾಯಗಳನ್ನು ರೂಪಿಸುವುದು ಮತ್ತು ಉಪಗುರಿಗಳನ್ನು ನಿರ್ಧರಿಸುವುದು.
4. ಎಲ್ಲಾ ಪರಿಹಾರಾಂಶಗಳನ್ನು ಪರಿಶೀಲಿಸುವುದು.
5. ಪರಿಹಾರಾಂಶಗಳನ್ನು ಹುಡುಕಿ ಕಾರ್ಯಗತಗೊಳಿಸುವುದು.
6. ಪರಿಹಾರವನ್ನು ಪುನರ್ ನಿರೂಪಿಸುವುದು.

## ಸಮಸ್ಯಾ ಪರಿಹಾರದ ಮೇಲೆ ಪ್ರಭಾವ ಬೀರುವ ಅಂಶಗಳು (Factors influencing problem solving)

### 1) ಪರಿಣಿತಿ (Expertise)

ಸಮಸ್ಯೆ ಪರಿಹರಿಸುವ ಪರಿಣಿತಿ ವ್ಯಕ್ತಿಗೆ ಇರಬೇಕು. ಕೆಲವರಿಗೆ ಈ ಪರಿಣಿತಿ ಕರಗತವಾಗಿರುತ್ತದೆ. ಸಮಸ್ಯೆ ಪರಿಹರಿಸುವ ಪರಿಣಿತಿ ಹೊಂದಿರುವವರ ಕೆಲವು ಲಕ್ಷಣಗಳು ಈ ಕೆಳಕಂಡಂತೆ ಇವೆ.

- ಸಮಸ್ಯೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡಿರುತ್ತಾರೆ.
- ಸಮಸ್ಯೆಯ ಎಲ್ಲಾ ಅಂಶಗಳು ಅವರಿಗೆ ನೆನಪಿರುತ್ತವೆ.
- ಸಮಸ್ಯೆ ಪರಿಹಾರದ ಪೂರ್ಣ ಮಾನಸಿಕ ಚಿತ್ರಣ ಅವರಿಗೆ ಇರುತ್ತದೆ.
- ಸಮಸ್ಯೆ ಪರಿಹಾರಕ್ಕೆ ಪರಿಣಾಮಕಾರಿ ವಿಧಾನವನ್ನು ಅನುಸರಿಸುವರು.

ಮೇಲಿನ ಅಂಶಗಳು ಪರಸ್ಪರ ಸಮ್ಮಿಳಿತವಾಗಿರುತ್ತವೆ. ಸಮಸ್ಯೆ ಪರಿಹರಿಸುವ ಪರಿಣಿತರು ಸಮಸ್ಯೆಯ ವಿವಿಧ ಅಂಶಗಳ ಬಗ್ಗೆ ಏಕಕಾಲದಲ್ಲಿ ಗಮನ ಹರಿಸಬಲ್ಲರು.

### 2) ಮನಸ್ಥಿತಿ(Mental status)

ಹಳೆಯ ಸಮಸ್ಯೆ ಪರಿಹಾರದ ವಿಧಾನವನ್ನು ಅನುಸರಿಸಿ ಅದೇ ರೀತಿಯ ಮತ್ತೊಂದು ಸಮಸ್ಯೆಯನ್ನು ಪರಿಹರಿಸುವ ವಿಧಾನವನ್ನು ಮನಃಸ್ಥಿತಿ ಎನ್ನುವರು. ಮನಃಸ್ಥಿತಿ ನಮ್ಮ ಕೆಲಸವನ್ನು ಸರಳಗೊಳಿಸುತ್ತದೆ.

### 3) ಅಂತರದೃಷ್ಟಿ (Insight)

ಸಮಗ್ರ **(Gestalt)**ಮನೋವಿಜ್ಞಾನದಲ್ಲಿ ಒಂದು ಸಮಸ್ಯೆಯ ವಿವಿಧ ಅಂಶಗಳ ಸಂಬಂಧಗಳನ್ನು ತತ್‌ಕ್ಷಣ ಗ್ರಹಿಸುವುದಕ್ಕೆ ಅಂತರ್‌ದೃಷ್ಟಿ ಎನ್ನುತ್ತೇವೆ. ಒಂದು ಸಮಸ್ಯೆಯನ್ನು ಅಳವಾಗಿ, ದೀರ್ಘವಾಗಿ ಮತ್ತು ಸಮಗ್ರವಾಗಿ ಪರಿಶೀಲಿಸಿದಾಗ ಅದಕ್ಕೆ ಪರಿಹಾರ ಬಲ್ಬ್ ಬೆಳಗಿದಂತೆ ತತ್‌ಕ್ಷಣ ಹೊಳೆಯುತ್ತದೆ. ಇದನ್ನು ಸಮಗ್ರ **(Gestalt)**ಮನೋವಿಜ್ಞಾನಿಗಳು ಆಹಾ! ಅನುಭವ ಎಂದು ಹೇಳಿದ್ದಾರೆ.

### 4) ಸುಪ್ತತೆ (Incubation)

ಸಮಸ್ಯೆ ಪರಿಹಾರದಲ್ಲಿ ಇದೊಂದು ಕಲ್ಪಿತ ಹಂತ. ದೀರ್ಘ ಪರಿಶ್ರಮದ ನಂತರ ಸಮಸ್ಯೆಗೆ ಪರಿಹಾರವಿಲ್ಲ ಎಂದು ಹತಾಶರಾಗಿ ಹಿಂದೆ ಸರಿದಾಗ ಉಂಟಾಗುವ ಸ್ಥಿತಯನ್ನು ಸುಪ್ತತೆ ಎನ್ನುವರು. ನಂತರದಲ್ಲಿ ತಕ್ಷಣವೇ ಪರಿಹಾರ ' ಹೊಳೆಯುವುದಕ್ಕೆ ಉದ್ಭವನ ಸ್ಥಿತಿ ಎನ್ನುವರು.

### 5) ಕಾರ್ಯಸ್ಥಿರತೆ (Functional fixedness)

ಸಮಸ್ಯೆ ಪರಿಹಾರಕ್ಕೆ ಕಾರ್ಯಸ್ಥಿರತೆ ತಡೆಯೊಡ್ಡಬಹುದು. ಕಾರ್ಯಸ್ಥಿರತೆ ಎಂದರೆ ಒಂದು ವಸ್ತುವಿನ ಹೆಸರು ಅಥವಾ ಪರಿಚಿತ ಕಾರ್ಯವನ್ನು ಕುರಿತು ಚಿಂತಿಸುವುದು ಎಂದು ಅರ್ಥ. ಇದು ಒಂದು ರೀತಿಯಲ್ಲಿ ಮನಃಸ್ಥಿತಿಯನ್ನು ಹೋಲುತ್ತದೆ. ಈ ಮಾನಸಿಕ ಸ್ಥಿರತೆಯಿಂದಾಗಿ ಒಂದು ಸಮಸ್ಯೆಗೆ ವಿನೂತನ ರೀತಿಯಲ್ಲಿ ಪರಿಹಾರ ಕಂಡುಹಿಡಿಯುವುದು ಕಷ್ಟವಾಗುತ್ತದೆ.

## II. ವಿವೇಚನೆ (Reasoning)

ವಿವೇಚನೆಯು ಆಲೋಚನೆಯ ಪ್ರಕ್ರಿಯೆಯಲ್ಲಿನ ಮತ್ತೊಂದು ಪ್ರಮುಖ ಅಂಶವಾಗಿದೆ. ವಿವೇಚನೆಯು ಒಂದು ಸಂಜ್ಞಾನಾತ್ಮಕ ಕ್ರಿಯೆಯಾಗಿದ್ದು, ತೀರ್ಮಾನಿಸುವಲ್ಲಿ ಮತ್ತು ಸಮಸ್ಯೆ ಪರಿಹರಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

- **ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲು ಮಾಹಿತಿಯನ್ನು ಸೂಕ್ತವಾಗಿ ಮಾರ್ಪಡಿಸುವಂತ ಬೌದ್ಧಿಕ ಚಟುವಟಿಕೆಯೇ ವಿವೇಚನೆಯಾಗಿದೆ.**
- **ತರ್ಕಬದ್ದವಾದ ಅಥವಾ ಕ್ರಮಬದ್ಧವಾದ ಆಲೋಚನೆಯ ವಿಧಾನಕ್ಕೆ ವಿವೇಚನೆ ಎನ್ನುವರು.**

**ವಿವೇಚನೆಯ ವಿಧಗಳು** (Types of Reasoning )

- ದೈನಂದಿನ ವಿವೇಚನೆ
- ಔಪಚಾರಿಕ ವಿವೇಚನೆ
  - ಅನುಗಮನ ವಿವೇಚನೆ
  - ನಿಗಮನ ವಿವೇಚನೆ
  - ಹೋಲಿಕೆ

### 1. ದೈನಂದಿನ ವಿವೇಚನೆ (Everyday Reasoning)

ದೈನಂದಿನ ವಿವೇಚನೆ ಹೆಸರೇ ಸೂಚಿಸುವಂತೆ ಪ್ರತಿನಿತ್ಯ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳುವ ಆಲೋಚನೆಯಾಗಿದೆ. ದೈನಂದಿನ ವಿವೇಚನೆಯಲ್ಲಿ ಯೋಜನೆ ರೂಪಿಸುವುದು, ಚರ್ಚೆಗಳ ಪರಿಶೀಲನೆ ಇತ್ಯಾದಿ ಅಂಶಗಳಿರುತ್ತವೆ. ಇಲ್ಲಿ ಸಮಸ್ಯಾ ಪರಿಹಾರಕ್ಕೆ ಯಾವುದೇ ಮಾಹಿತಿ ನೀಡುವುದಿಲ್ಲ. ದೈನಂದಿನ ವಿವೇಚನೆಯಲ್ಲಿ ಸಮಸ್ಯೆಗೆ ಹಲವಾರು ಪರ್ಯಾಯ ಉತ್ತರಗಳಿದ್ದು ಸಮಸ್ಯಾ ಪರಿಹಾರ ತುಂಬಾ ಸಂಕೀರ್ಣವಾಗಿರುತ್ತದೆ.

### 2. ಔಪಚಾರಿಕ ವಿವೇಚನೆ (Formal Reasoning)

ಸಮಸ್ಯಾಪರಿಹಾರಕ್ಕೆ ಅಗತ್ಯವಾದ ಎಲ್ಲಾ ಮಾಹಿತಿಗಳನ್ನು ನೇರವಾಗಿ ಒದಗಿಸಿ ನೇರವಿಧಾನವನ್ನು ಅನುಸರಿಸುವ ವಿಧಾನಕ್ಕೆ ಔಪಚಾರಿಕ ವಿವೇಚನೆ ಎನ್ನುತ್ತಾರೆ. ಔಪಚಾರಿಕ ವಿವೇಚನೆಯಲ್ಲಿ ಸಮಸ್ಯೆಗೆ ಒಂದೇ ಉತ್ತರ ಇರುತ್ತದೆ. ಹಾಗಾಗಿ ಔಪಚಾರಿಕ ವಿವೇಚನೆಯಲ್ಲಿ ಸಮಸ್ಯಾಪರಿಹಾರ ಸುಲಭವಾಗಿದೆ. ಔಪಚಾರಿಕ ವಿವೇಚನೆಯು ಅನುಗಮನ, ನಿಗಮನ ಮತ್ತು ಹೋಲಿಕೆಗಳೆಂಬ ಮೂರು ವಿಧಗಳನ್ನು ಹೊಂದಿದೆ.

#### ಅ) ಅನುಗಮನ ವಿವೇಚನೆ (Inductive Reasoning)

ನಿರ್ದಿಷ್ಟ ಉದಾಹರಣೆಗಳಿಂದ ಸಾಮಾನ್ನೀಕರಣದತ್ತಸಾಗುವ ಆಲೋಚನಾ ವಿಧಾನಕ್ಕೆ ಅನುಗಮನ ವಿವೇಚನೆ ಎನ್ನುತ್ತಾರೆ. ಇದು ಮೂರ್ತದಿಂದ ಅಮೂರ್ತದೆಡೆಗೆ, ನಿದಿಷ್ಟದಿಂದ ಸಾಮಾನ್ಯದೆಡೆಗೆ, ಗೊತ್ತಿರುವದರಿಂದ ಗೊತ್ತಿಲ್ಲದೆಡೆಗೆ, ಸುಲಭದಿಂದ ಕಠಿಣದೆಡೆಗೆ ಎಂಬ ಮುಂತಾದ ತತ್ವಗಳನ್ನಾಧರಿಸಿದೆ. ಅನುಗಮನ ವಿವೇಚನೆಯು ಸೂಕ್ತ ನಿರ್ಣಯಗಳನ್ನು ಕೈಗೊಳ್ಳಲು ಅವಕಾಶ ನೀಡುವುದಿಲ್ಲ. ಆದರೂ ಅನುಗಮನ ವಿವೇಚನೆಯನ್ನು ಯಾವಾಗಲೂ ಅನುಸರಿಸುತ್ತೇವೆ.

#### ಬ) ನಿಗಮನ ವಿವೇಚನೆ (Deductive Reasoning)

ಸಾಮಾನ್ಯನಿಯಮ, ಸೂತ್ರ ಅಥವಾ ವ್ಯಾಖ್ಯೆ ಹೇಳಿ ನಂತರ ಉದಾಹರಣೆಗಳ ಮೂಲಕ ನಿಯಮ ಸಾಧಿಸುವುದಕ್ಕೆ ನಿಗಮನ ವಿವೇಚನೆ ಎನ್ನುವರು. ಇದು ಅನುಗಮನ ವಿವೇಚನೆಯ ವಿರುದ್ಧವಾದ ವಿವೇಚನೆಯಾಗಿದೆ. ಮೂಲಾಧಾರ ಸರಿಯಾಗಿದ್ದರೆ ತೀರ್ಮಾನವೂ ಸರಿಯಾಗಿರುತ್ತದೆ ಎಂಬುದು ನಿಗಮನ ವಿವೇಚನೆಯ ತಿರುಳಾಗಿದೆ. ಮೂಲಾಧಾರವು ನಾವು ಕೈಗೊಳ್ಳುವ ತೀರ್ಮಾನದ ಮೇಲೆ ಪ್ರಭಾವ ಬೀರುತ್ತದೆ. ಹಾಗಾಗಿ ನಮ್ಮ ನಿರ್ಣಯಗಳಿಗೆ ಒಂದು ಆಧಾರ ಇದ್ದೇ ಇರುತ್ತದೆ. ಎಂಬುದು ನಿಗಮನ ವಿವೇಚನೆಯ ಪ್ರತಿಪಾದನೆಯಾಗಿದೆ. ಉದಾ: ಹುಟ್ಟಿದವರು ಸಾಯಲೇಬೇಕೆಂಬ ನಿಯಮವಿರುವುದರಿಂದ ಪ್ರತಿಯೊಬ್ಬನೂ ಒಂದು ದಿನ ಸಾಯಲೇಬೇಕು.

### ಕ) ತುಲನೆ ಅಥವಾ ಹೋಲಿಕೆ (Analogy)

ತುಲನೆ ಅಥವಾ ಹೋಲಿಕೆಯು ವಿವೇಚನೆಯ ಮತ್ತೊಂದು ವಿಧವಾಗಿದೆ. ವಿಭಿನ್ನ ಆಲೋಚನೆಗಳ ನಡುವೆ ಹೋಲಿಕೆ ಇರುವುದು ಒಂದು ಸಮಸ್ಯೆಯ ಪರಿಹಾರವನ್ನಾಧರಿಸಿ ಮತ್ತೊಂದು ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದಕ್ಕೆ ತುಲನೆ ಅಥವಾ ಹೋಲಿಕೆ ಎನ್ನುತ್ತಾರೆ. ಉದಾಹರಣೆ: ವಿಮಾನ: ಆಕಾಶ :: ಬಸ್ಸು: ?. (ರಸ್ತೆ) ಇಲ್ಲಿ ವಿಮಾನಕ್ಕೆ ಆಕಾಶ ಸಂಬಂಧವಿರುವಂತೆ ಬಸ್ಸಿಗೆ ರಸ್ತೆ ಸಂಬಂಧಿಸಿದೆ. ಹೋಲಿಕೆಯು ಒಂದು ವಿಷಯದ ಅಥವಾ ವಸ್ತುವಿನ ಮುಖ್ಯ ಅಂಶಗಳನ್ನು ಗುರ್ತಿಸಿ ಗ್ರಹಿಸುವಲ್ಲಿ ಸಹಾಯಕವಾಗಿದೆ. ಹೋಲಿಕೆಯು ಸಮಸ್ಯೆ ಪರಿಹರಿಸುವಲ್ಲಿ ನೆರವಾಗುತ್ತದೆ.

## III. ತೀರ್ಮಾನ ಕೈಗೊಳ್ಳುವಿಕೆ (Decision making)

ವ್ಯಕ್ತಿಗೆ ಸಮಸ್ಯೆ ಎದುರಾದಾಗ ಹಲವಾರು ದೃಷ್ಟಿಕೋನಗಳಿಂದ ವಿಚಾರಿಸಿ ಸೂಕ್ತವಾದ ಅಂಶಗಳನ್ನು ಆಯ್ಕೆ ಮಾಡುವದೇ ತೀರ್ಮಾನ ಕೈಗೊಳ್ಳುವಿಕೆ.

ಸಮಸ್ಯೆ ಪರಿಹಾರದಲ್ಲಿ ಅನುಸರಿಸುವ ಮತ್ತೊಂದು ವಿಧಾನ ಎಂದರೆ ತೀರ್ಮಾನ ಕೈಗೊಳ್ಳುವಿಕೆ. ಇಲ್ಲಿ ಹಲವು ಪರ್ಯಾಯ ಉತ್ತರಗಳಲ್ಲಿ ಸೂಕ್ತ ಉತ್ತರವನ್ನು ಆಯ್ಕೆ ಮಾಡಿಕೊಳ್ಳಬೇಕು. ಕೆಲವು ವೇಳೆ ತೀರ್ಮಾನ ತೆಗೆದುಕೊಳ್ಳುವುದು ತುಂಬಾ ಕಷ್ಟ ಎನಿಸುತ್ತದೆ. ಏಕೆಂದರೆ ತೆಗೆದುಕೊಳ್ಳುವ ತೀರ್ಮಾನದ ಪರಿಣಾಮ ಏನು ಎಂಬುದು ತಿಳಿದಿರುವುದಿಲ್ಲ.

### ತೀರ್ಮಾನ ಕೈಗೊಳ್ಳುವಿಕೆ ಮೇಲೆ ಪ್ರಭಾವ ಬೀರುವ ಅಂಶಗಳು

ತೀರ್ಮಾನ ಕೈಗೊಳ್ಳುವಿಕೆ ಮೇಲೆ ಅನೇಕ ಅಂಶಗಳು ಪ್ರಭಾವ ಬೀರುತ್ತವೆ. ಅವುಗಳೆಂದರೆ,

### ಅ) ನವ್ಯ ಚಿಂತನೆ (Novel thinking)

ಪರಿಣಾಮಕಾರಿ ಹಾಗೂ ದೃಢ ನಿರ್ಧಾರ ಕೈಗೊಳ್ಳುವಲ್ಲಿ ನವ್ಯಚಿಂತನೆ ಸಹಕಾರಿಯಾಗಿದೆ. ನಮ್ಮ ಹಿಂದಿನ ಅನುಭವದ ಆಧಾರದ ಮೇಲೆ ನವ್ಯಚಿಂತನೆ ರೂಪಗೊಂಡಿರುತ್ತದೆ. ಅದು ನಮಗೆ ಸುಲಭ ಮಾರ್ಗಸೂಚಿಯಂತೆ ಕಾರ್ಯನಿರ್ವಹಿಸುತ್ತದೆ.

### ಬ) ತೀರ್ಮಾನ ಕೈಗೊಳ್ಳುವಿಕೆಯ ಚೌಕಟ್ಟು (Framing of decision making)

ಒಂದು ವಿಷಯದ ಲಾಭ ಅಥವಾ ನಷ್ಟಕ್ಕೆ ಸಂಬಂಧಿಸಿದಂತೆ ತೆಗೆದುಕೊಳ್ಳುವ ತೀರ್ಮಾನ ಭಿನ್ನವಾಗಿರುತ್ತದೆ. ವ್ಯಕ್ತಿ ಲಾಭಕ್ಕೆ ಆದ್ಯತೆ ನೀಡಿದಾಗ ಯಾವುದೇ ಅಪಾಯ ಎದುರಿಸಲು ಸಿದ್ಧನಿರುವುದಿಲ್ಲ. ಆದರೆ ನಷ್ಟದಲ್ಲಿ ವ್ಯಕ್ತಿ ಅಪಾಯ ಎದುರಿಸಲು ಸಿದ್ದನಿರುತ್ತಾನೆ.

### ಕ) ಬದ್ಧತೆಯ ಹೆಚ್ಚಳ (Escalation of commitment)

ಬದ್ಧತೆಯ ವ್ಯಕ್ತಿಯು ವ್ಯವಹಾರದಲ್ಲಿ ನಷ್ಟವಾದರೂ ಸಹ ತನ್ನ ತೀರ್ಮಾನಗಳಿಗೆ ಬದ್ಧನಾಗಿರುತ್ತಾನೆ. ಸಾಮಾಜಿಕ ಬದ್ಧತೆ ಹಿನ್ನಲೆಯಲ್ಲಿ ತನ್ನ ತೀರ್ಮಾನದಿಂದ ಹಿಂದೆ ಸರಿಯುವುದಿಲ್ಲ. ಉದಾಹರಣೆಗೆ: ಕೆಲವು ಖಾಸಗಿ ವಿಮಾನಯಾನ ಕಂಪನಿಗಳು ನಿರಂತರವಾಗಿ ನಷ್ಟವನ್ನು ಅನುಭವಿಸುತ್ತಿದ್ದರೂ ವಿಮಾನ ಹಾರಾಟವನ್ನು ನಿಲ್ಲಿಸಲಿಲ್ಲ. ಕಾರಣ ಘನತೆ, ಗೌರವದ ಪ್ರಶ್ನೆ ಮತ್ತು ಬದ್ಧತೆಯ ಪ್ರಶ್ನೆ. ಅದೇ ರೀತಿ ಕೆಲವರು ಚುನಾವಣೆಯಲ್ಲಿ ನಿರಂತರವಾಗಿ ಸೋಲುತ್ತಿದ್ದರೂ ಮತ್ತೆ ಚುನಾವಣೆಗೆ ಸ್ಪರ್ಧಿಸುವುದನ್ನು ಬಿಡುವುದಿಲ್ಲ.

## IV. ಸೃಜನಾತ್ಮಕ ಚಿಂತನೆ (Creative thinking)

ಸಾಮಾನ್ಯವಾಗಿ ಹೊಸತನವಾಗಿ ಆಲೋಚನೆ ಮಾಡುವದನ್ನು, ವಸ್ತುಗಳ ಅಥವಾ ವಿಚಾರಗಳ ನಡುವೆ ಹೊಸ ಸಂಬಂಧ ಕಾಣುವದನ್ನು ಸೃಜನಾತ್ಮಕ ಚಿಂತನೆ ಎನ್ನುವರು. ವಿನೂತನ ರೀತಿಯಲ್ಲಿ ಸಮಸ್ಯೆಯನ್ನು ಬಗೆಹರಿಸುವುದು. ತೀರ್ಮಾನ ಕೈಗೊಳ್ಳುವುದು, ಹೊಸತನ್ನು ಕಂಡು ಹಿಡಿಯುವುದು ಅಥವಾ ಸೃಷ್ಟಿಸುವುದು ಮುಂತಾದವುಗಳನ್ನು ಸೃಜನಾತ್ಮಕ ಚಿಂತನೆಯ ಫಲ ಎಂದು ಹೇಳಬಹುದು. ಅಂದರೆ ಉಪಯುಕ್ತವಾದ ಮತ್ತು ರಚನಾತ್ಮಕವಾದ ಆಲೋಚನೆಯೇ ಸೃಜನಾತ್ಮಕ ಚಿಂತನೆ. ಸೃಜನಾತ್ಮಕ ಚಿಂತಕನು ಕಲೆ, ವಿಜ್ಞಾನ, ಸಾಹಿತ್ಯ, ಸಂಗೀತ, ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಏನಾದರೂ ಹೊಸತನ್ನು ನೀಡುತ್ತಾನೆ. ಸೃಜನಾತ್ಮಕ ಚಿಂತನೆ ಇರುವ ವ್ಯಕ್ತಿಗಳು ಎಲ್ಲ ಧರ್ಮ, ಜಾತಿ, ಜನಾಂಗ ಸಂಸ್ಕೃತಿ ಹಾಗೂ ದೇಶಗಳಲ್ಲಿ ಕಂಡು ಬರುತ್ತಾರೆ. ಸೃಜನಾತ್ಮಕ ಚಿಂತನೆಯಲ್ಲಿ ವೈಶಿಷ್ಟ್ಯತೆ ಮತ್ತು ಹೊಸತನ **(Originality)** ಗುಣವನ್ನು ಕಾಣುತ್ತೇವೆ.

### ಸೃಜನಾತ್ಮಕ ಚಿಂತನೆಯ ವ್ಯಾಖ್ಯೆಗಳು

**"ಮುಖ್ಯವಾಗಿ ಹೊಸದಾಗಿರುವ ಮತ್ತು ಸೃಷ್ಟಿಕರ್ತನಿಗೆ ಈ ಮೊದಲೇ ಅರಿವಿಲ್ಲದ ಯಾವುದೇ ರೀತಿಯ ಸಂಯೋಜನೆ, ಉತ್ಪನ್ನ ಅಥವಾ ವಿಚಾರಗಳನ್ನು ಸೃಷ್ಟಿಸುವ ವ್ಯಕ್ತಿಯ ಸಾಮರ್ಥ್ಯವೇ ಸೃಜನಾತ್ಮಕ ಚಿಂತನೆ".** –ಡ್ರೇವ್ಡ ಹಾಲ್.

**"ಹೊಸ ಕ್ಷೇತ್ರವನ್ನು ಅನ್ವೇಷಿಸುವ, ಹೊಸ ವೀಕ್ಷಣೆ ಮಾಡುವ, ಹೊಸ ಊಹೆ ಮಾಡುವ ಮತ್ತು ಹೊಸ ತೀರ್ಮಾನಗಳನ್ನು ಕೈಗೊಳ್ಳುವ ವ್ಯಕ್ತಿಯ ಸಾಮರ್ಥ್ಯವೇ ಸೃಜನಾತ್ಮಕ ಚಿಂತನೆ".** –ಸ್ಕಿನ್ನರ್

ಸೃಜನಾತ್ಮಕ ಚಿಂತನೆಯ ಮತ್ತೊಂದು ಗುಣ ಎಂದರೆ ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ಅದರ ಉಪಯುಕ್ತತೆ. ಯಾವುದೇ ನಿರ್ದಿಷ್ಟ ಉದ್ದೇಶವಿಲ್ಲದೇ ಆಲೋಚಿಸುವುದು, ಹಗಲುಗನಸು ಕಾಣುವುದು, ಇತ್ಯಾದಿಗಳು ಸೃಜನಾತ್ಮಕ ಚಿಂತನೆಗಳಲ್ಲ. ಸಂಶೋಧಕರ ಪ್ರಕಾರ ಯಾವ ಆಲೋಚನೆ ವಿನೂತನ, ವಾಸ್ತವಿಕ, ಉಪಯುಕ್ತ, ರಚನಾತ್ಮಕ ಮತ್ತು ಸಾಮಾಜಿಕ ಉಪಯುಕ್ತ ಗುಣವನ್ನು ಹೊಂದಿರುತ್ತದೋ ಅದು ಸೃಜನಾತ್ಮಕ ಆಲೋಚನೆ ಎನಿಸುತ್ತದೆ.

### ಸೃಜನಾತ್ಮಕ ಚಿಂತನೆಯ ಹಂತಗಳು (Stages of creative thinking)

ಪ್ರತಿಯೊಬ್ಬ ಸೃಜನಾತ್ಮಕ ಚಿಂತಕನೂ ತನ್ನದೇ ಆದ ವೈಶಿಷ್ಟ್ಯತೆ ಹೊಂದಿದ್ದರೂ, ಸೃಜನಾತ್ಮಕ ಚಿಂತನೆ ಎಲ್ಲ ಚಿಂತಕರಲ್ಲೂ ಕೆಲವು ಪ್ರಮುಖ ಹಂತಗಳ ಮೂಲಕ ಹಾದುಹೋಗುವುದನ್ನು ಕಾಣಬಹುದಾಗಿದೆ. ಅವುಗಳೆಂದರೆ,

### 1. ಸಿದ್ಧತಾ ಹಂತ (Preparation)

ಸೃಜನಾತ್ಮಕ ಚಿಂತನೆ ಮೊದಲಹಂತ ಇದಾಗಿದೆ. ಸಮಸ್ಯೆ ಪರಿಹಾರಕ್ಕೆ ಅಗತ್ಯವಿರುವ ಮಾಹಿತಿಯನ್ನು ಅಥವಾ ದತ್ತಾಂಶಗಳನ್ನು ಸಂಗ್ರಹಿಸುವದಕ್ಕೆ ಸಿದ್ಧತಾಹಂತ ಎನ್ನುವರು. ಇದು ಪೂರ್ವಸಿದ್ಧತೆಯ ಹಂತವಾಗಿದೆ. ಅನೇಕ ವೈಜ್ಞಾನಿಕ ಸಂಶೋಧನೆಗಳು ಅಥವಾ ಸೃಜನಶೀಲ ಸೃಷ್ಟಿಗಳು ಹಲವಾರು ವರ್ಷಗಳ ನಿರಂತರ ಪೂರ್ವ ಸಿದ್ಧತೆಯ ಫಲವಾಗಿವೆ.

### 2. ಸುಪ್ತತೆಯ ಹಂತ (Incubation)

ಸಮಸ್ಯೆ ಪರಿಹಾರದ ಪ್ರಯತ್ನ ಕೈಬಿಟ್ಟು ವಿರಮಿಸುತ್ತಿರುವಾಗ ಸುಪ್ತ ಮನಸ್ಸು ಜಾಗೃತಗೊಂಡು ಸಮಸ್ಯಾ ಪರಿಹಾರಕ್ಕೆ ನೆರವಾಗುವುದೇ ಸುಪ್ತತೆಯ ಹಂತವಾಗಿದೆ. ವಿಚಾರಗಳು ಸುಪ್ತಾವಸ್ಥೆಯಲ್ಲಿ ಸ್ವಯಂ ವ್ಯವಸ್ಥಿತಗೊಂಡು ಸಮಸ್ಯಾ ಪರಿಹಾರ ಉದ್ಭವಿಸುವದಕ್ಕೆ ಸಿದ್ಧವಾಗುತ್ತವೆ.

### 3. ಅಂತಃಸ್ಫುರಣೆಯ ಹಂತ (Illumination)

ಈ ಹಂತದಲ್ಲಿ ಸಮಸ್ಯೆಯ ಬಗ್ಗೆ ಅಳವಾಗಿ, ದೀರ್ಘವಾಗಿ ಮತ್ತು ವೈವಿಧ್ಯಮಯ ದೃಷ್ಟಿಕೋನದಿಂದ ವಿಶ್ಲೇಷಿಸಿದಾಗ ಸಮಸ್ಯೆಗೆ ಪರಿಹಾರ ತಟ್ಟನೆ ಹೊಳೆಯುತ್ತದೆ. ಇದಕ್ಕೆ **'ಪ್ರಕಾಶಿಸುವಹಂತ'** ಎಂದು ಕರೆಯುತ್ತಾರೆ. ಉದಾ: ಅರ್ಕಿಮಿಡಿಸ್‌ನಿಗೆ ಸ್ನಾನಗೃಹದಲ್ಲಿ ಸಮಸ್ಯೆಗೆ ಪರಿಹಾರ ಸಿಕ್ಕಾಗ ಯುರೇಕಾ! ಯುರೇಕಾ! ಎಂದು ಹೊರಬಂದದ್ದು.

### 4. ಪರಿಶೀಲನಾ ಹಂತ (Verification)

ಇದು ಸೃಜನಾತ್ಮಕ ಚಿಂತನೆಯ ಕೊನೆಯ ಹಂತವಾಗಿದೆ. ಈ ಹಂತದಲ್ಲಿ ಸಮಸ್ಯೆಗೆ ಸಿಕ್ಕಿರುವ ಪರಿಹಾರವು ಸೂಕ್ತವಾಗಿದೆಯೋ ಅಥವಾ ದೋಷಪೂರ್ಣವಾಗಿದೆಯೋ ಎಂಬುದನ್ನು ಒರೆಗೆ ಹಚ್ಚಿ ಖಾತರಿಪಡಿಸಿಕೊಳ್ಳಲಾಗುವುದು. ಕೆಲವೊಮ್ಮೆ ಪರಿಹಾರಗಳು ತಪ್ಪಾಗಿದ್ದರೆ, ಪುನರ್ ಪರಿಶೀಲಿಸಿ ಅಲ್ಪ ಸ್ವಲ್ಪ ಬದಲಾವಣೆ ಮಾಡಿ ಹೆಚ್ಚು ನಿಖರ ಗೊಳಿಸಬೇಕಾಗುತ್ತದೆ.

ಒಟ್ಟಾರೆ, ಜ್ಞಾನದ ಹೆಬ್ಬಾಗಿಲುಗಳಾದ ಪಂಚೇಂದ್ರಿಯಗಳಿಂದ ಸಂವೇದನೆ ಉಂಟಾಗಿ ವ್ಯಕ್ತಿ, ವಸ್ತು, ವಿಷಯಗಳನ್ನು ಅರ್ಥೈಸುವುದರ ಮೂಲಕ ಪ್ರತ್ಯಕ್ಷಾನುಭವವಾಗುತ್ತದೆ. ಪ್ರತ್ಯಕ್ಷಾನುಭವವು ಪಂಚೇಂದ್ರಿಯಗಳ ಸ್ಥಿತಿಗತಿ ಯನ್ನಾಧರಿಸಿದೆ. ಪಂಚೇಂದ್ರಿಯಗಳು ಚುರುಕಾಗಿದ್ದರೆ ಸಂವೇದನೆಯ ಮೂಲಕ ಅರ್ಥಗ್ರಹಿಕೆಯಾಗಿ ಪ್ರತ್ಯಕ್ಷಾನುಭವವಾಗುತ್ತದೆ. ಪ್ರತ್ಯಕ್ಷಾನುಭವವು ಭಾವರೂಪಣಕ್ಕೆ ಸಹಕರಿಸುವುದರ ಮೂಲಕ ಅಮೂರ್ತಚಿಂತನೆ, ಅವಧಾನ, ಕಲಿಕೆ ಮತ್ತು ಸ್ಮೃತಿ ಇತ್ಯಾದಿ ಬೌದ್ಧಿಕ ವಿಕಾಸಕ್ಕೆ ನೆರವಾಗುತ್ತದೆ. ತನ್ಮೂಲಕ ವ್ಯಕ್ತಿ ಚಿಂತನೆಯಿಂದ ಸಮಸ್ಯೆಗೆ ಪರಿಹಾರ ಕಂಡುಕೊಂಡು ವಿವೇಚನೆಯಿಂದ ಸೂಕ್ತ ನಿರ್ಣಯ ಕೈಗೊಳ್ಳುತ್ತಾನೆ. ಸೃಜನಾತ್ಮಕ ಚಿಂತನೆಯಿಂದ ವ್ಯಕ್ತಿ ಮತ್ತು ಸಮಷ್ಠಿಯ ಪ್ರಗತಿ ಸಾಧ್ಯವಾಗುತ್ತದೆ.

******

## ಅಭ್ಯಾಸ ಪ್ರಶ್ನೆಗಳು

### I. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1) ಸಂವೇದನೆ ಎಂದರೇನು?
2) ಪ್ರತ್ಯಕ್ಷಾನುಭವದ ಅರ್ಥ ಬರೆಯಿರಿ ?
3) ಭಾವರೂಪಣದ ಅರ್ಥವೇನು?
4) ಚಿಂತನೆ ಎಂದರೇನು?
5) ಸಮಸ್ಯಾ ಪರಿಹಾರ ಚಿಂತನೆ ಎಂದರೇನು ?
6) ವಿವೇಚನೆಯ ಅರ್ಥವೇನು ?
7) ಸೃಜನಾತ್ಮಕ ಚಿಂತನೆಯ ಅರ್ಥ ಬರೆಯಿರಿ.
8) ತೀರ್ಮಾನ ಕೈಗೊಳ್ಳುವಿಕೆ ಎಂದರೇನು?

### II. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

1) ಸಂವೇದನೆಯ ಎರಡು ಲಕ್ಷಣಗಳನ್ನು ತಿಳಿಸಿ
2) ಪ್ರತ್ಯಕ್ಷಾನುಭವದ ಎರಡು ಲಕ್ಷಣಗಳನ್ನು ತಿಳಿಸಿ.
3) ಪ್ರತ್ಯಕ್ಷಾನುಭವದ ಎರಡು ನಿರ್ಧಾರಕಗಳಾವುವು?
4) ಚಿಂತನೆಯ ಎರಡು ವಿಧಗಳನ್ನು ತಿಳಿಸಿ.
5) ಸಮಸ್ಯಾ ಪರಿಹಾರದಲ್ಲಿ ಪ್ರಭಾವಬೀರುವ ಎರಡು ಅಂಶಗಳಾವುವು?
6) ವಿವೇಚನೆಯ ಎರಡು ವಿಧಗಳಾವುವು?
7) ತೀರ್ಮಾನಕೈಗೊಳ್ಳುವಿಕೆಯ ಮೇಲೆ ಪ್ರಭಾವ ಬೀರುವ ಎರಡು ಅಂಶಗಳಾವುವು?
8) ಸೃಜನಾತ್ಮಕ ಚಿಂತನೆಯ ಹಂತಗಳನ್ನು ಹೆಸರಿಸಿ.

### III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಒಂದು ಪುಟ ಮೀರದಂತೆ ಉತ್ತರಿಸಿರಿ.

1) ಸಂವೇದನೆಯ ಅರ್ಥ ಬರೆದು ಅದರ ಲಕ್ಷಣಗಳನ್ನು ವಿವರಿಸಿ.
2) ಪ್ರತ್ಯಕ್ಷಾನುಭವದ ಅರ್ಥ ಬರೆದು ಅದರ ಗುಣಲಕ್ಷಣಗಳನ್ನು ವಿವರಿಸಿ.
3) ಪ್ರತ್ಯಕ್ಷಾನುಭವದ ನಿರ್ಧಾರಕಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
4) ಸಂವೇದನೆ ಮತ್ತು ಪ್ರತ್ಯಕ್ಷಾನುಭವಗಳ ನಡುವಿನ ವ್ಯತ್ಯಾಸಗಳಾವುವು ?
5) ಭಾವರೂಪಣದ ಪ್ರಕ್ರಿಯೆ ವಿವರಿಸಿ.
6) ಸಮಸ್ಯಾ ಪರಿಹಾರ ಚಿಂತನೆಯ ಹಂತಗಳನ್ನು ವಿವರಿಸಿ.
7) ಸಮಸ್ಯಾ ಪರಿಹಾರದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ವಿವರಿಸಿ.
8) ವಿವೇಚನೆ ಎಂದರೇನು ? ಅದರ ವಿಧಗಳನ್ನು ವಿವರಿಸಿ.
9) ತೀರ್ಮಾನ ಕೈಗೊಳ್ಳುವಿಕೆಯ ಅರ್ಥವೇನು ? ಅದರ ಮೇಲೆ ಪ್ರಭಾವ ಬೀರುವ ಅಂಶಗಳನ್ನು ವಿವರಿಸಿ.
10) ಸೃಜನಾತ್ಮಕ ಚಿಂತನೆಯ ಹಂತಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

### IV. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಎರಡು ಪುಟಗಳಿಗೆ ಮೀರದಂತೆ ಉತ್ತರಿಸಿರಿ

1) ಚಿಂತನೆ ಎಂದರೇನು ? ಅದರ ವಿಧಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
2) ಸಮಸ್ಯಾ ಪರಿಹಾರ ಚಿಂತನೆ ಎಂದರೇನು ? ಅದರ ಮೇಲೆ ಪ್ರಭಾವ ಬೀರುವ ಅಂಶಗಳನ್ನು ವಿವರಿಸಿ.
3) ವಿವೇಚನೆಯ ವಿಧಗಳನ್ನು ವಿವರಿಸಿ.
4) ಸೃಜನಾತ್ಮಕ ಚಿಂತನೆಯ ಹಂತಗಳನ್ನು ಮತ್ತು ಅದರ ಮೇಲೆ ಪ್ರಭಾವ ಬೀರುವ ಅಂಶಗಳನ್ನು ವಿವರಿಸಿ.

*****

ಘಟಕ 2

# ವೈಯಕ್ತಿಕ ಭಿನ್ನತೆಗಳು
# Individual Differences

2.1 **ವೈಯಕ್ತಿಕ ಭಿನ್ನತೆಗಳು** – ಪರಿಕಲ್ಪನೆ ಮತ್ತು ಕ್ಷೇತ್ರಗಳು
2.2 **ಬುದ್ಧಿಶಕ್ತಿ**
2.2.1 **ಬುದ್ಧಿಶಕ್ತಿಯ ಪರಿಕಲ್ಪನೆ**
2.2.2 **ಮಾನಸಿಕ ವಯಸ್ಸು ಮತ್ತು ಬುದ್ಧಿಸೂಚ್ಯಾಂಕ**–ಪರಿಕಲ್ಪನೆ– ಬುದ್ಧಿಸೂಚ್ಯಾಂಕಗಳ ವರ್ಗೀಕರಣ ಹಾಗೂ ವಿತರಣೆ
2.2.3 **ಬುದ್ಧಿಶಕ್ತಿ ಪರೀಕ್ಷಣಗಳು** – ವಿಧಗಳು – ವೈಯಕ್ತಿಕ ಮತ್ತು ಸಾಮೂಹಿಕ – ಶಾಬ್ದಿಕ–ಅಶಾಬ್ದಿಕ – ಕಾರ್ಯನಿರ್ವಹಣಾ ಪರೀಕ್ಷಣಗಳು – ಬುದ್ಧಿಶಕ್ಷಿ ಪರೀಕ್ಷಣಗಳ ಉಪಯೋಗಗಳು
2.3 **ಸಂವೇಗಾತ್ಮಕ ಬುದ್ಧಿಶಕ್ತಿ** – ಪರಿಕಲ್ಪನೆ – ಘಟಕಾಂಶಗಳು ಮತ್ತು ಪ್ರಾಮುಖ್ಯತೆ – ಸಂವೇಗಾತ್ಮಕ ಬುದ್ಧಿಲಬ್ಧ(EQ) – ಸಂವೇಗಾತ್ಮಕ ಬುದ್ಧಿಶಕ್ತಿ ಸಂವರ್ಧನೆಯ ಕ್ರಮಗಳು
2.4 **ಸೃಜನಶೀಲತೆ**
2.4.1 **ಸೃಜನಶೀಲತೆ**–ಪರಿಕಲ್ಪನೆ–ಪ್ರಭಾವ ಬೀರುವ ಅಂಶಗಳು
2.4.2 **ಸೃಜನಶೀಲ ವ್ಯಕ್ತಿಯ ಲಕ್ಷಣಗಳು**
2.4.3 **ಸೃಜನಶೀಲತೆ ಪೋಷಿಸುವ ಕ್ರಮಗಳು**
2.5 **ಅಭಿಕ್ಷಮತೆ** – ಪರಿಕಲ್ಪನೆ – ವಿಧಗಳು ಮತ್ತು ಪ್ರಾಮುಖ್ಯತೆ
2.6 **ಮನೋಭಾವ** – ಪರಿಕಲ್ಪನೆ ಮತ್ತು ಪ್ರಾಮುಖ್ಯತೆ
2.7 **ಆಸಕ್ತಿ** – ಪರಿಕಲ್ಪನೆ ಮತ್ತು ಪ್ರಾಮುಖ್ಯತೆ

********************

**ಉದ್ದೇಶಗಳು :**

ಈ ಘಟಕದ ಬೋಧನೆಯ ನಂತರ ವಿದ್ಯಾರ್ಥಿಗಳು,

1) ವೈಯಕ್ತಿಕ ಭಿನ್ನತೆಗಳು, ಬುದ್ಧಿಶಕ್ತಿ, ಸೃಜನಶೀಲತೆ, ಅಭಿಕ್ಷಮತೆ ಮತ್ತು ಆಸಕ್ತಿಗಳ ಪರಿಕಲ್ಪನೆಯನ್ನು ವಿವರಿಸುವರು
2) ವೈಯಕ್ತಿಕ ಭಿನ್ನತೆಯ ಕ್ಷೇತ್ರಗಳನ್ನು ವಿವರಿಸುವರು.
3) ಬುದ್ಧಿಶಕ್ತಿ ಪರೀಕ್ಷಣಗಳನ್ನು ವರ್ಗೀಕರಿಸುವರು ಹಾಗೂ ವಿವಿಧ ಪರೀಕ್ಷಣಗಳ ವಿಧಗಳ ವಿವೇಚನೆ ಹೊಂದುವರು.
4) ಸಂವೇಗಾತ್ಮಕ ಬುದ್ಧಿಶಕ್ತಿಯ ಪ್ರಾಮುಖ್ಯತೆಯನ್ನು ವಿವರಿಸುವರು.
5) ಶಾಬ್ದಿಕ, ಅಶಾಬ್ದಿಕ ಮತ್ತು ಕಾರ್ಯನಿರ್ವಹಣ ಬುದ್ಧಿಶಕ್ತಿ ಪರೀಕ್ಷಣಗಳನ್ನು ಬಳಸುವ ಸಾಮರ್ಥ್ಯ ಬೆಳೆಸಿಕೊಳ್ಳುವರು.
6) ಸೃಜನಶೀಲತೆಯ ಮೇಲೆ ಪ್ರಭಾವ ಬೀರುವ ಅಂಶಗಳನ್ನು ವಿವರಿಸುವರು.
7) ಸೃಜನಶೀಲ ವ್ಯಕ್ತಿಯ ಲಕ್ಷಣಗಳನ್ನು ವಿವರಿಸುವರು.
8) ವಿವಿಧ ಅಭಿಕ್ಷಮತೆಗಳು, ಮನೋಭಾವಗಳು ಮತ್ತು ಆಸಕ್ತಿಗಳ ಪರಿಕಲ್ಪನೆ ಹಾಗೂ ಪ್ರಾಮುಖ್ಯತೆಯನ್ನು ವಿವರಿಸುವರು.

##########################

ಘಟಕ 2

# ವೈಯಕ್ತಿಕ ಭಿನ್ನತೆಗಳು
# Individual Differences

ಭೂಮಿಯ ಮೇಲೆ ವಾಸಿಸುವ ಎಲ್ಲ ಜೀವಿಗಳು ಒಂದೇ ತೆರನಾಗಿ ಇರುವದಿಲ್ಲ. ಗಾತ್ರ, ಆಕಾರ, ಬಣ್ಣ, ರೂಪ ಮುಂತಾದವುಗಳಲ್ಲಿ ವ್ಯತ್ಯಾಸಗಳನ್ನು ಕಾಣುತ್ತೇವೆ. ಮಾನವರಲ್ಲಿ ಸಹ ಅವರ ಶಾರೀರಿಕ ರಚನೆ, ಬೌದ್ಧಿಕ ಸಾಮರ್ಥ್ಯಗಳು, ಭಾವಾತ್ಮಕ ಅಂಶಗಳು ಹಾಗೂ ಸಾಮಾಜಿಕ ಗುಣವಿಶೇಷಗಳಲ್ಲಿ ವ್ಯತ್ಯಾಸಗಳಿರುವುದನ್ನು ಗಮನಿಸಲಾಗುತ್ತದೆ. ಶಾರೀರಿಕ ರಚನೆಗೆ ಸಂಬಂಧಿಸಿದಂತೆ ಎತ್ತರ, ಗಾತ್ರ, ಬಣ್ಣ, ದೇಹದ ರಚನೆ ಮುಂತಾದ ಅಂಶಗಳಲ್ಲಿ ವ್ಯತ್ಯಾಸಗಳನ್ನು ಹೊಂದಿರುವರು. ಬೌದ್ಧಿಕ ಸಾಮರ್ಥ್ಯಗಳಿಗೆ ಸಂಬಂಧಿಸಿದಂತೆ ಕೆಲವರು ಬುದ್ಧಿವಂತರು ಮತ್ತೆ ಕೆಲವರು ಮಂದಬುದ್ಧಿಯವರಾಗಿರುವರು. ಕೆಲವರು ಬೇಗನೆ ಕಲಿತರೆ ಮತ್ತೆ ಕೆಲವರು ನಿಧಾನವಾಗಿ, ಇನ್ನೂ ಕೆಲವರು ತೀರಾ ನಿಧಾನವಾಗಿ ಕಲಿಯುವರು. ವ್ಯಕ್ತಿಗಳ ಮನೋಭಾವಗಳಿಗೆ ಸಂಬಂಧಿಸಿದಂತೆ ಕೆಲವರು ದೃಢ ಮನಸ್ಥಿತಿಯನ್ನು ಹೊಂದಿದ್ದು ಆತ್ಮ ಸ್ಥೈರ್ಯದಿಂದಿರುವರು. ಮತ್ತೆ ಕೆಲವರು ಉತ್ತಮ ಮನಸ್ಥಿತಿಯನ್ನು ಹೊಂದಿರದೇ ಆತ್ಮ ವಿಶ್ವಾಸದ ಕೊರತೆಯನ್ನು ಅನುಭವಿಸುವರು. ಸಾಮಾಜಿಕವಾಗಿ ಹೇಳುವುದಾದರೆ ಕೆಲವು ವ್ಯಕ್ತಿಗಳು ಸಾಮಾಜಿಕ ಹೊಂದಾಣಿಕೆಯ ಸ್ವಭಾವದವರಾಗಿದ್ದು ತಮ್ಮ ಭಾವನೆಗಳನ್ನು ಇತರರೊಂದಿಗೆ ಹಂಚಿಕೊಳ್ಳುವರು. ಆದರೆ ಕೆಲವರು ಏಕಾಂಗಿಗಳಾಗಿದ್ದು ಇತರರೊಂದಿಗೆ ಬೆರೆಯಲಾರರು. ಈ ರೀತಿಯಾಗಿ ವ್ಯಕ್ತಿಯಿಂದ ವ್ಯಕ್ತಿಗೆ ಸಾಕಷ್ಟು ಭಿನ್ನತೆಗಳು ಕಂಡುಬರುತ್ತವೆ. ಒಂದು ವರ್ಗಕೋಣೆಯ ಸನ್ನಿವೇಶದಲ್ಲಿಯೂ ಸಹ ಮಕ್ಕಳಲ್ಲಿ ಅವರ ಕಲಿಕೆಯ ಸಾಮರ್ಥ್ಯಗಳಲ್ಲಿ ವೈಯಕ್ತಿಕ ಭಿನ್ನತೆಗಳನ್ನು ಕಾಣುತ್ತೇವೆ. ಒಂದೇ ವಯಸ್ಸಿನ ಮಕ್ಕಳ ಸಮೂಹದಲ್ಲಿಯೂ ಕೂಡಾ ಅವರ ಶಾರೀರಿಕ ರಚನೆ, ಬೌದ್ಧಿಕ ಸಾಮರ್ಥ್ಯಗಳು ಹಾಗೂ ಸಾಮಾಜಿಕ ಗುಣ ವಿಶೇಷಗಳಲ್ಲಿ ವ್ಯತ್ಯಾಸಗಳನ್ನು ಗುರುತಿಸಲಾಗುತ್ತದೆ. ವ್ಯಕ್ತಿ ವ್ಯಕ್ತಿಗಳಲ್ಲಿ ಕಂಡು ಬರುವ ಈ ರೀತಿಯ ವ್ಯತ್ಯಾಸಗಳನ್ನು **'ವೈಯಕ್ತಿಕ ಭಿನ್ನತೆಗಳು'** ಎನ್ನುವರು. ವೈಯಕ್ತಿಕ ಭಿನ್ನತೆಗಳಿಂದಾಗಿ ಉದ್ಭವಿಸುವ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡಲು ವೈಯಕ್ತಿಕ ಭಿನ್ನತೆಗಳ ಜ್ಞಾನ ಅತ್ಯವಶ್ಯಕವಾಗಿದೆ.

## 2.1 ವೈಯಕ್ತಿಕ ಭಿನ್ನತೆಗಳು–ಪರಿಕಲ್ಪನೆ ಮತ್ತು ಕ್ಷೇತ್ರಗಳು (Individual Differences-Concept and Areas)

### ವೈಯಕ್ತಿಕ ಭಿನ್ನತೆಯ ಪರಿಕಲ್ಪನೆ (Concept of Individual Differences)

ಮನೋವಿಜ್ಞಾನದ ಪರಿಭಾಷೆಯಲ್ಲಿ ಒಬ್ಬನನ್ನು ಇನ್ನೊಬ್ಬನಿಂದ ಬೇರ್ಪಡಿಸುವಂತಹ ಹಾಗೂ ಪ್ರತಿಯೊಬ್ಬ ವ್ಯಕ್ತಿಯನ್ನು ವಿಶಿಷ್ಟ ವ್ಯಕ್ತಿಯನ್ನಾಗಿ ಮಾಡುವಂತಹ ಲಕ್ಷಣಗಳನ್ನು **'ವೈಯಕ್ತಿಕ ಭಿನ್ನತೆಗಳು'** ಎಂದು ಕರೆಯಲಾಗುತ್ತದೆ.

**"ವ್ಯಕ್ತಿಗಳಲ್ಲಿ ಕಂಡು ಬರುವ ಯಾವುದೇ ಒಂದು ಲಕ್ಷಣ ಇಲ್ಲವೇ ಹಲವಾರು ಗುಣಲಕ್ಷಣಗಳಲ್ಲಿನ ವ್ಯತ್ಯಾಸ ಅಥವಾ ವಿಚಲನೆಯನ್ನು ವೈಯಕ್ತಿಕ ಭಿನ್ನತೆ ಎನ್ನುವರು."**

– ಶಿಕ್ಷಣಶಾಸ್ತ್ರದ ಪಾರಿಭಾಷಿಕ ನಿಘಂಟು

**"ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗಿಂತ ಭಿನ್ನವಾಗಿರುವಂತೆ ತೋರುವ ವ್ಯತ್ಯಾಸಗಳೇ ವೈಯಕ್ತಿಕ ಭಿನ್ನತೆಗಳು"**

–ಕಾರ್ಟರ ಬಿ. ಗುಡ್

ವ್ಯಕ್ತಿ ವ್ಯಕ್ತಿಗಳ ನಡುವೆ ಶಾರೀರಿಕ, ಬೌದ್ಧಿಕ, ಸಾಮಾಜಿಕ ಮತ್ತು ಭಾವಾತ್ಮಕ ಗುಣಲಕ್ಷಣಗಳಲ್ಲಿ ಕಂಡು ಬರುವ ವ್ಯತ್ಯಾಸಗಳನ್ನು **ವೈಯಕ್ತಿಕ ಭಿನ್ನತೆಗಳು** ಎನ್ನುವರು.

### ವೈಯಕ್ತಿಕ ಭಿನ್ನತೆಯ ಕ್ಷೇತ್ರಗಳು (Areas of Individual Differences)

**1) ಶಾರೀರಿಕ ಭಿನ್ನತೆಗಳು :** ವ್ಯಕ್ತಿಗಳ ಎತ್ತರ, ತೂಕ, ಗಾತ್ರ, ಬಣ್ಣ ಹಾಗೂ ದೇಹದ ರಚನೆ, ಕೈಕಾಲು, ಪಾದಗಳ ಅಳತೆ ಮುಂತಾದ ಶಾರೀರಿಕ ಗುಣಲಕ್ಷಣಗಳಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನತೆಗಳನ್ನು ಕಾಣುತ್ತೇವೆ.

**2) ಬೌದ್ಧಿಕ ಭಿನ್ನತೆಗಳು :** ಬೌದ್ಧಿಕ ಸಾಮರ್ಥ್ಯಗಳಾದ ಚಿಂತನಾ ಸಾಮರ್ಥ್ಯ, ಗ್ರಹಿಕಾ ಸಾಮರ್ಥ್ಯ, ಕಲ್ಪನಾ ಶಕ್ತಿ, ಸೃಜನಶೀಲತೆ, ಅವಧಾನ, ಸ್ಮೃತಿ, ಬುದ್ಧಿಶಕ್ತಿ ಮುಂತಾದವುಗಳಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸಗಳಿರುವುದನ್ನು ಕಾಣುತ್ತೇವೆ.

**3) ಸಂವೇಗಾತ್ಮಕ (ಭಾವಾತ್ಮಕ) ಭಿನ್ನತೆಗಳು :** ಪ್ರತಿಯೊಬ್ಬ ವ್ಯಕ್ತಿ ತನ್ನದೇ ಆದ ರೀತಿಯಲ್ಲಿ ಭಾವನೆಗಳನ್ನು ವ್ಯಕ್ತಪಡಿಸುತ್ತಾನೆ. ವ್ಯಕ್ತಿಯಿಂದ ವ್ಯಕ್ತಿಗೆ ಭಾವಾತ್ಮಕ ಭಿನ್ನತೆಗಳಿರುವುದು ಸಹಜ. ಕೆಲವು ವ್ಯಕ್ತಿಗಳಲ್ಲಿ ಧನಾತ್ಮಕ ಭಾವನೆಗಳಾದ ಪ್ರೀತಿ, ವಿಶ್ವಾಸ, ವಿನೋದ, ಇತ್ಯಾದಿಗಳು ಪ್ರಭಲವಾಗಿದ್ದರೆ ಇನ್ನೂ ಕೆಲವರಲ್ಲಿ ಋಣಾತ್ಮಕ ಭಾವನೆಗಳಾದ ಅಸೂಯೆ, ಕೋಪ, ಜಿಗುಪ್ಸೆ, ಭಯ ಇತ್ಯಾದಿಗಳು ಪ್ರಭಲವಾಗಿರುತ್ತವೆ. ಕೆಲವರು ಭಾವಾತ್ಮಕ ಸ್ಥಿರತೆ ಮತ್ತು ಪಕ್ವತೆ ಹೊಂದಿದ್ದರೆ ಇನ್ನೂ ಕೆಲವು ವ್ಯಕ್ತಿಗಳು ಭಾವಾತ್ಮಕ ಅಸ್ಥಿರತೆ ಮತ್ತು ಅಪಕ್ವತೆ ತೋರುವರು ಹೀಗೆ ವ್ಯಕ್ತಿಗಳಲ್ಲಿ ಸಂವೇಗಾತ್ಮಕ ವ್ಯತ್ಯಾಸಗಳು ಕಂಡುಬರುತ್ತವೆ.

**4. ಸಾಮಾಜಿಕ ಹೊಂದಾಣಿಕೆಯಲ್ಲಿನ ಭಿನ್ನತೆಗಳು :** ಸಮಾಜವನ್ನು ಬಿಟ್ಟು ಮಾನವನ ಅಸ್ತಿತ್ವವನ್ನು ಊಹಿಸಿಕೊಳ್ಳಲು ಸಾಧ್ಯವಾಗಲಾರದು. ನಾವೆಲ್ಲರೂ ಸಮಾಜದಲ್ಲಿಯೇ ಬೆಳೆದು ಅಭಿವೃದ್ಧಿ ಹೊಂದುತ್ತೇವೆ. ಆದಾಗ್ಯೂ ಕೆಲವು ವ್ಯಕ್ತಿಗಳು ಜನಪ್ರಿಯರು, ಸಹಕಾರ ಮನೋಭಾವದವರಾಗಿದ್ದು ಸಮೂಹದಲ್ಲಿ ಎಲ್ಲರೊಡನೆ ಹೊಂದಿಕೊಂಡು ಇರಲು ಬಯಸುವರು. ಆದರೆ ಇನ್ನೂ ಕೆಲವು ವ್ಯಕ್ತಿಗಳು ಇತರರೊಡನೆ ಹೊಂದಿಕೊಳ್ಳದೆ ಏಕಾಂಗಿಗಳಾಗಿರುವರು, ಇಲ್ಲವೇ ಅಪಸಮಾಯೋಜನೆಗೆ ಒಳಗಾಗುವರು.

**5. ಸಾಧನೆಯಲ್ಲಿನ ಭಿನ್ನತೆಗಳು :** ವ್ಯಕ್ತಿ ವ್ಯಕ್ತಿಗಳ ನಡುವೆ ಅವರ ಸಾಧನೆಗಳಲ್ಲಿ ಭಿನ್ನತೆ ಇರುವುದು ಕಂಡುಬರುತ್ತದೆ. ಒಂದೇ ಮಟ್ಟದ ಬುದ್ಧಿಶಕ್ತಿ ಹೊಂದಿರುವ, ಒಂದೇ ರೀತಿಯ ಶಾಲಾ ಶಿಕ್ಷಣ ಪಡೆದ ವ್ಯಕ್ತಿಗಳಲ್ಲಿಯೂ ಸಹ ಅವರ ಸಾಧನೆಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಕೆಲವರು ಅಸಾಧಾರಣ ಅಥವಾ ಅತ್ಯುನ್ನತ ಸಾಧನೆಯನ್ನು ತೋರಿದರೆ ಮತ್ತೆ ಕೆಲವರು ಸಾಧಾರಣ ಸಾಧನೆ ತೋರುವರು. ಔಪಚಾರಿಕ ಶಿಕ್ಷಣ ವ್ಯವಸ್ಥೆಯಾದ ಶಾಲೆ ಕಾಲೇಜುಗಳಲ್ಲಿ ಏಕರೀತಿಯ ಬೋಧನೆ ಹಾಗೂ ಪರಿಸರದಲ್ಲಿ ಅಭ್ಯಸಿಸಿದ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗಳಲ್ಲಿಯೂ ಸಹ ವ್ಯತ್ಯಾಸಗಳಿರುವುದನ್ನು ಗುರುತಿಸಬಹುದಾಗಿದೆ.

**6. ಮನೋಭಾವಗಳ ( ಅಭಿವೃತ್ತಿಗಳ) ಭಿನ್ನತೆಗಳು :** ಯಾವುದೇ ವ್ಯಕ್ತಿ, ವಿಷಯ ಅಥವಾ ವಸ್ತುವಿನ ಬಗ್ಗೆ ಒಬ್ಬ ವ್ಯಕ್ತಿ ಹೊಂದಿರುವ ನಿರ್ದಿಷ್ಟ ಭಾವನೆಯೇ ಮನೋಭಾವ. ವ್ಯಕ್ತಿಗಳು ಪಡೆಯುವ ಅನುಭವಗಳನ್ನಾಧರಿಸಿ ಇವುಗಳು ರೂಪಗೊಳ್ಳುತ್ತವೆ. ಈ ಮನೋಭಾವಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿದ್ದು ಅವರ ವರ್ತನೆಯ ಮೇಲೆ ಪ್ರಭಾವ ಬೀರುತ್ತವೆ. ಕೆಲವರು ವ್ಯಕ್ತಿ, ವಿಷಯ ಅಥವಾ ವಸ್ತುಗಳ ಕುರಿತು ಧನಾತ್ಮಕ ಮನೋಭಾವ ಹೊಂದಿದ್ದರೆ ಇನ್ನೂ ಕೆಲವರು ಋಣಾತ್ಮಕ ಮನೋಭಾವ ಹೊಂದಿರುತ್ತಾರೆ.

**7. ಅಭಿಕ್ಷಮತೆಯಲ್ಲಿನ ಭಿನ್ನತೆಗಳು :** ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ತೋರುವಂತೆ ಮಾಡುವ ಸಾಮರ್ಥ್ಯವೇ ಅಭಿಕ್ಷಮತೆ. ವ್ಯಕ್ತಿಗಳಲ್ಲಿ ವಿವಿಧ ಪ್ರಮಾಣದಲ್ಲಿ ಈ ಗುಣವಿಶೇಷತೆ ಕಂಡು ಬರುತ್ತದೆ. ಇದರಿಂದಾಗಿ ವ್ಯಕ್ತಿಗಳು ಹೆಚ್ಚು ಸಮರ್ಥರಾಗುವ ಮಾತುಗಾರನಾಗುವ, ಸಂಗೀತಗಾರನಾಗುವ, ಚಿತ್ರಕಲಾಕಾರನಾಗುವ, ಇಲ್ಲವೆ ತಾಂತ್ರಿಕ ನೈಪುಣ್ಯತೆ ಹೊಂದಿದ ವ್ಯಕ್ತಿಗಳಾಗಿ ಗುರುತಿಸಿಕೊಳ್ಳುವರು. ಅಭಿಕ್ಷಮತೆಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತವೆ ಎಂಬುದನ್ನು ಅಭಿಕ್ಷಮತಾ ಪರೀಕ್ಷಣಗಳು ದೃಢಪಡಿಸಿವೆ.

**8. ಆಸಕ್ತಿಗಳಲ್ಲಿನ ಭಿನ್ನತೆಗಳು :** ಒಬ್ಬ ವ್ಯಕ್ತಿ ಅಥವಾ ಒಂದು ವಸ್ತುವಿನ ಸುತ್ತ ಕೇಂದ್ರೀಕೃತವಾದ ಮನಸ್ಸಿನ ಸ್ಥಿತಿಯೇ ಆಸಕ್ತಿ. ಈ ಆಸಕ್ತಿಗಳು ವ್ಯಕ್ತಿಯಿಂದ ವ್ಯಕ್ತಿಗೆ ವಿಭಿನ್ನವಾಗಿರುತ್ತವೆ. ವ್ಯಕ್ತಿಗಳ ದೃಷ್ಟಿಕೋನ, ಗುರಿಗಳು, ಪ್ರವೃತ್ತಿಗಳು, ಅವಶ್ಯಕತೆಗಳು ಮುಂತಾದವುಗಳನ್ನಾಧರಿಸಿ ವಿಭಿನ್ನ ಆಸಕ್ತಿಗಳು ಕಂಡು ಬರುತ್ತವೆ. ವ್ಯಕ್ತಿಗಳು ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ನಿರತರಾಗುವಾಗ ಅವರದೇ ಆಸಕ್ತಿಗಳಿಗನುಸಾರ ಕಾರ್ಯನಿರ್ವಹಿಸುತ್ತಾರೆ. ಓದುವ ಹವ್ಯಾಸ, ಕ್ರೀಡೆಗಳಲ್ಲಿ ಭಾಗವಹಿಸುವಿಕೆ, ವೇಷಭೂಷಣಗಳು, ಕೆಲಸಕಾರ್ಯಗಳ ಆಯ್ಕೆ ಮುಂತಾದ ವಿಚಾರಗಳಲ್ಲಿ ವಿವಿಧ ಆಸಕ್ತಿಗಳು ಕಂಡುಬರುತ್ತವೆ.

**9. ಮನೋಚಾಲನ ಕೌಶಲಗಳಲ್ಲಿನ ಭಿನ್ನತೆಗಳು :** ವ್ಯಕ್ತಿಯಿಂದ ವ್ಯಕ್ತಿಗೆ ಅವರ ಕೌಶಲಗಳಲ್ಲಿ ವ್ಯತ್ಯಾಸಗಳನ್ನು ಕಾಣುತ್ತೇವೆ. ಕೆಲವು ಮಕ್ಕಳು ಪ್ರಾರಂಭದಲ್ಲಿಯೇ ಕೌಶಲಪೂರ್ಣ ಚಟುವಟಿಕೆಗಳಲ್ಲಿ ಪ್ರಾವೀಣ್ಯತೆ ತೋರುವರು. ಇನ್ನೂ ಕೆಲವರು ಇಂತಹ ಕೌಶಲಗಳನ್ನು ಪಡೆಯುವಲ್ಲಿ ಹಿಂದುಳಿಯುವರು ಓದುವ, ಬರೆಯುವ, ಚಿತ್ರಬಿಡಿಸುವ, ಸಂಗೀತವಾದ್ಯ ನುಡಿಸುವ, ಸಾಧನಗಳನ್ನು ಉಪಯೋಗಿಸುವ, ವಾಹನಗಳನ್ನು ಚಲಿಸುವ ಮುಂತಾದ ಮನೋಚಾಲನ ಕೌಶಲಗಳು ವ್ಯಕ್ತಿ ವ್ಯಕ್ತಿಗಳಲ್ಲಿ ಭಿನ್ನವಾಗಿರುತ್ತವೆ.

**10. ಸ್ವ–ಪರಿಕಲ್ಪನೆಯಲ್ಲಿನ ಭಿನ್ನತೆಗಳು :** ಮಗು ಬೆಳವಣಿಗೆ ಹಾಗೂ ವಿಕಾಸ ಹೊಂದಿದಂತೆಲ್ಲ ತನ್ನ ಪರಿಸರದಲ್ಲಿನ ವ್ಯಕ್ತಿಗಳು, ವಸ್ತುಗಳು, ಘಟನೆ ಕುರಿತು ಪರಿಕಲ್ಪನೆ ಹೊಂದುತ್ತಾನೆ. ಅದೇ ರೀತಿಯಾಗಿ ಅವನು ತನ್ನ ಸಾಮರ್ಥ್ಯ ಹಾಗೂ ಇತಿಮಿತಿಗಳ ಕುರಿತು ತಿಳಿವಳಿಕೆ ಹೊಂದುವ ಪ್ರಯತ್ನ ಮಾಡುತ್ತಾನೆ. ಇದನ್ನೇ ಸ್ವ–ಪರಿಕಲ್ಪನೆ ಎನ್ನುವರು. ವ್ಯಕ್ತಿ ತನ್ನ ಸ್ವಯಂ ಅನುಭವಗಳನ್ನಾಧರಿಸಿ ತನ್ನನ್ನು ಕುರಿತು ಹೊಂದುವ ತಿಳಿವಳಿಕೆಯು ಸ್ವ–ಪರಿಕಲ್ಪನೆಯಾಗಿದೆ. ವ್ಯಕ್ತಿಗಳು

ಸ್ವ–ಪರಿಕಲ್ಪನೆ ರೂಪಿಸಿಕೊಳ್ಳುವಲ್ಲಿಯೂ ಸಹ ಭಿನ್ನತೆಯನ್ನು ಹೊಂದಿರುತ್ತಾರೆ. ಒಂದೇ ವಯಸ್ಸಿನ ಇಲ್ಲವೇ ಒಂದೇ ರೀತಿಯ ವಾತಾವರಣದಲ್ಲಿ ಬೆಳೆಯುವ ವ್ಯಕ್ತಿಗಳು ತಮ್ಮ ಬಗ್ಗೆ ವಿಭಿನ್ನ ರೀತಿಯ ಸ್ವ–ಪರಿಕಲ್ಪನೆಗಳನ್ನು ರೂಪಿಸಿಕೊಳ್ಳುತ್ತಾರೆ.

**2.2 ಬುದ್ಧಿಶಕ್ತಿ (Intelligence) :** ಮಾನವನು ಸಹಜವಾಗಿ ಕೆಲವು ಬೌದ್ಧಿಕ ಸಾಮರ್ಥ್ಯಗಳನ್ನು ಹೊಂದಿದ್ದು ಇವುಗಳಿಂದಾಗಿ ಅವನು ವಿವೇಚನೆ ಉಳ್ಳವನಾಗಿದ್ದಾನೆ. ಅವನು ಹೊಸ ಸನ್ನಿವೇಶಗಳನ್ನು ಗ್ರಹಿಸುವ, ವ್ಯತ್ಯಾಸಗಳನ್ನು ತಿಳಿದುಕೊಳ್ಳುವ ಮತ್ತು ಪರಿಸ್ಥಿತಿಯನ್ನು ಎದುರಿಸುವ ಸಾಮರ್ಥ್ಯ ಹೊಂದಿರುವನು. ಅವನು ಇತರ ಪ್ರಾಣಿಗಳಿಗಿಂತ ಮೇಲ್ಮಟ್ಟದ ಬುದ್ಧಿಶಕ್ತಿಯನ್ನು ಹೊಂದಿರುವನು. ಈ ಬುದ್ಧಿಶಕ್ತಿಯಿಂದಾಗಿಯೇ ಜೀವನದ ಹಲವಾರು ಕ್ಷೇತ್ರಗಳಲ್ಲಿ ಅಪರಿಮಿತ ಸಾಧನೆಯನ್ನು ಮಾಡಲು ಸಾಧ್ಯವಾಗಿದೆ. **'ಬುದ್ಧಿಶಕ್ತಿ'** ಎಂದರೇನು ಎಂಬ ಪ್ರಶ್ನೆಯು ಬಹುಕಾಲದಿಂದಲು ಚರ್ಚಿತ ವಿಷಯವಾಗಿದೆ. ಮನೋವಿಜ್ಞಾನಿಗಳು ಬುದ್ಧಿಶಕ್ತಿಯನ್ನು ಕುರಿತು ತಮ್ಮದೇ ಆದ ಅಧ್ಯಯನ ಹಾಗೂ ಅನುಭವದ ಬೆಳಕಿನಲ್ಲಿ ವಿಭಿನ್ನ ರೀತಿಯಲ್ಲಿ ಅರ್ಥೈಸಿದ್ದಾರೆ.

ಶಾಲೆಯಲ್ಲಿ ಒಂದು ಮಗು ಪರೀಕ್ಷೆಯಲ್ಲಿ ಗರಿಷ್ಠ ಅಂಕಗಳನ್ನು ಪಡೆದರೆ ಅಥವಾ ಗಣಿತದ ಸಮಸ್ಯೆಯೊಂದನ್ನು ಅತ್ಯಂತ ವೇಗವಾಗಿ ಹಾಗೂ ನಿಖರವಾಗಿ ಬಿಡಿಸಲು ಸಮರ್ಥನಾದರೆ ಅವನನ್ನು **'ಬುದ್ಧಿವಂತ'** ಎಂದು ಕರೆಯುತ್ತೇವೆ. ಯಾವುದೇ ಒಂದು ಕಾರ್ಯ ಚಟುವಟಿಕೆಯನ್ನು ಒಬ್ಬ ವ್ಯಕ್ತಿ ಉತ್ತಮ ರೀತಿಯಲ್ಲಿ ಕೈಗೊಂಡಾಗ ಅವನನ್ನು ಬುದ್ಧಿವಂತ ಎನ್ನುತ್ತೇವೆ. ಆದ್ದರಿಂದ ಒಬ್ಬ ವ್ಯಕ್ತಿಯ ವಿಶಿಷ್ಠ ಸಾಮರ್ಥ್ಯ ಮತ್ತು ಕಾರ್ಯಕ್ಷಮತೆಯನ್ನು ಸೂಚಿಸಲು ಸಾಮಾನ್ಯವಾಗಿ ಬುದ್ಧಿಶಕ್ತಿ ಎಂಬ ಪದವನ್ನು ಉಪಯೋಗಿಸಲಾಗುತ್ತದೆ.

ವ್ಯಕ್ತಿಯನ್ನು ಅವನ ಪರಿಸರಕ್ಕೆ ಹೊಂದಿಕೊಳ್ಳುವಂತೆ ಮತ್ತು ನವೀನ ಪರಿಸ್ಥಿತಿಗಳೊಂದಿಗೆ ಸಾಧ್ಯವಾದಷ್ಟು ಪರಿಣಾಮಕಾರಿಯಾಗಿ ವ್ಯವಹರಿಸುವಂತೆ ಮಾಡುವ ಬೌದ್ಧಿಕ ಸಾಮರ್ಥ್ಯವೇ ಬುದ್ಧಿಶಕ್ತಿ ಎಂಬುದಾಗಿ ಗ್ರಹಿಸಲಾಗುತ್ತದೆ.

**2.2.1 ಬುದ್ಧಿಶಕ್ತಿಯ ಪರಿಕಲ್ಪನೆ (Concept of Intelligence):** ಬುದ್ಧಿಶಕ್ತಿ ಈ ಪದವನ್ನು ನಿತ್ಯ ಜೀವನದಲ್ಲಿ ಅನೇಕ ಸಂದರ್ಭಗಳಲ್ಲಿ ಬಳಸಲಾಗುತ್ತದೆ. ಒಬ್ಬ ವ್ಯಕ್ತಿ ಯಾವುದೇ ಒಂದು ಕಾರ್ಯವನ್ನು ಉತ್ತಮವಾಗಿ ಕೈಗೊಂಡಾಗ ಅಥವಾ ಸಮಸ್ಯೆಯೊಂದಕ್ಕೆ ಸೂಕ್ತ ಪರಿಹಾರ ಸೂಚಿಸಿದಾಗ, ತರಗತಿಯಲ್ಲಿ ವಿದ್ಯಾರ್ಥಿ ಗರಿಷ್ಟ ಅಂಕಗಳನ್ನು ಪಡೆದಾಗ ಅವನನ್ನು ಬುದ್ಧಿವಂತ ಎನ್ನಲಾಗುತ್ತದೆ. ಅಂದರೆ ವಿಶೇಷವಾಗಿ ಒಬ್ಬ ವ್ಯಕ್ತಿಯ ಸಾಮರ್ಥ್ಯವನ್ನು ಸೂಚಿಸುವುದೇ ಬುದ್ಧಿಶಕ್ತಿಯಾಗಿದೆ. ವ್ಯಕ್ತಿಗಳಲ್ಲಿ ವಿಭಿನ್ನ ಪ್ರಮಾಣದಲ್ಲಿ ಇರುವ ಬುದ್ಧಿಶಕ್ತಿಯಿಂದಾಗಿ ವೈಯಕ್ತಿಕ ಭಿನ್ನತೆ ಕಂಡುಬರುತ್ತದೆ. ಬುದ್ಧಿಶಕ್ತಿಯನ್ನು ಕುರಿತು ಅನೇಕ ಮನೋವಿಜ್ಞಾನಿಗಳು ಈ ಕೆಳಗಿನಂತೆ ವ್ಯಾಖ್ಯಾನಿಸಿರುವರು.

1) **"ಶೀಘ್ರವಾಗಿ ಗ್ರಹಿಸುವುದೇ ಬುದ್ಧಿಶಕ್ತಿ"** – ವೆಬಸ್ಟರ್ಸ ನಿಘಂಟು
2) **"ಜ್ಞಾನ ಮತ್ತು ಕೌಶಲ್ಯಗಳನ್ನು ಪಡೆಯುವ ಹಾಗೂ ಅನ್ವಯಿಸುವ ಸಾಮರ್ಥ್ಯವೇ ಬುದ್ಧಿಶಕ್ತಿ"** – ಆಕ್ಸಫರ್ಡ ನಿಘಂಟು
3) **"ಉತ್ತಮವಾಗಿ ನಿರ್ಣಯ ಕೈಗೊಳ್ಳುವ, ಸನ್ನಿವೇಶವನ್ನು ಗ್ರಹಿಸುವ ಮತ್ತು ತರ್ಕಿಸುವ ವ್ಯಕ್ತಿಯ ಸಾಮರ್ಥ್ಯವೇ ಬುದ್ಧಿಶಕ್ತಿ".** –ಬೀನೆ ಮತ್ತು ಸೈಮನ್ (1905)
4) **"ಅಮೂರ್ತ ಆಲೋಚನಾ ಸಾಮರ್ಥ್ಯವೇ ಬುದ್ಧಿಶಕ್ತಿ"** –ಟರ್ಮನ್ (1921)
5) **"ವ್ಯಕ್ತಿಯು ಉದ್ದೇಶಪೂರ್ವಕವಾಗಿ ವರ್ತಿಸಲು, ತರ್ಕಬದ್ಧವಾಗಿ ಆಲೋಚಿಸಲು ಮತ್ತು ಪರಿಸರದೊಂದಿಗೆ ಸಮರ್ಪಕವಾದ ರೀತಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಅಗತ್ಯವಾದ ಒಟ್ಟು ಸಾಮರ್ಥ್ಯವನ್ನು ಅಥವಾ ಸಾಮರ್ಥ್ಯದ ಸಮಷ್ಠಿಯನ್ನು ಬುದ್ಧಿಶಕ್ತಿ ಎನ್ನುವರು"** – ಡೇವಿಡ್ ವೆಸ್ಲರ್ (1939)
6) **"ಹೊಸದಾದ ಮತ್ತು ಬದಲಾಗುತ್ತಿರುವ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಕಲಿಯುವ ಮತ್ತು ಹೊಂದಿಕೊಳ್ಳುವ ಸಾಮರ್ಥ್ಯವೇ ಬುದ್ಧಿಶಕ್ತಿ"** –ವ್ಯಾಗ್‌ನಾನ್ (1937)
7) **"ಜ್ಞಾನವನ್ನು ಗಳಿಸುವ ಸಾಮರ್ಥ್ಯವೇ ಬುದ್ಧಿಶಕ್ತಿ"** – ವುಡ್ರೋ
8) **"ಒಂದು ಮಗು ತನ್ನ ಜ್ಞಾನೇಂದ್ರಿಯಗಳ ಮೂಲಕ ಪಡೆಯುವ ಮಾಹಿತಿಯನ್ನು ವಿಶಿಷ್ಟ ರೀತಿಯಲ್ಲಿ ವಿಶ್ಲೇಷಿಸುವ ವಿಧಾನವೇ ಬುದ್ಧಿಶಕ್ತಿ"** – ಡಾ॥ ಹಂಟ್

## 2.2.2 ಮಾನಸಿಕ ವಯಸ್ಸು ಮತ್ತು ಬುದ್ಧಿಸೂಚ್ಯಾಂಕ–ಪರಿಕಲ್ಪನೆ–ಬುದ್ಧಿಶಕ್ತಿಯ ವರ್ಗೀಕರಣ ಮತ್ತು ವಿತರಣೆ

### ಮಾನಸಿಕ ವಯಸ್ಸು (Mental Age) (MA)

ಮಾನಸಿಕ ವಯಸ್ಸಿನ ಪರಿಕಲ್ಪನೆಯನ್ನು ಫ್ರಾನ್ಸ್ ದೇಶದ ಮನೋವಿಜ್ಞಾನಿ ಆಲ್ಫ್ರೇಡ್ ಬೀನೆಯವರು ಪ್ರಥಮ ಬಾರಿಗೆ ಪರಿಚಯಿಸಿದ್ದಾರೆ. **ಒಬ್ಬ ವ್ಯಕ್ತಿಯ ಮಾನಸಿಕ ಬೆಳವಣಿಗೆಯ ಮಟ್ಟವನ್ನು ಸೂಚಿಸುವುದೇ ಮಾನಸಿಕ ವಯಸು.** ಇದನ್ನು ಬುದ್ಧಿಶಕ್ತಿ ಪರೀಕ್ಷಣೆಗಳ ಮೂಲಕ ವ್ಯಕ್ತಿಯ ಸಾಧನೆಯ ಮಟ್ಟವನ್ನಾಧರಿಸಿ ನಿರ್ಧರಿಸಲಾಗುತದೆ. ಬೀನೇ–ಸೈಮನ್‌ರವರು ವ್ಯಕ್ತಿಯ ವಯೋಮಾನಕ್ಕನುಗುಣವಾಗಿ ಬುದ್ಧಿಶಕ್ತಿ ಪರೀಕ್ಷಣಗಳನ್ನು ವ್ಯವಸ್ಥೆಗೊಳಿಸುವ ಮೂಲಕ ಮಾನಸಿಕ ವಯಸ್ಸಿನ ಅಳತೆಯನ್ನು ನಿರ್ಧರಿಸುವ ಮಾನವನ್ನು ರಚಿಸಿರುವರು. **"ವ್ಯಕ್ತಿಗಳ ನಿರ್ದಿಷ್ಟ ವಯೋಮಾನದಲ್ಲಿ ಬೌದ್ಧಿಕ ಸಾಮರ್ಥ್ಯಗಳ ಬೆಳವಣಿಗೆಯ ಮಟ್ಟವನ್ನು ಸೂಚಿಸುವ ಮಾನವೇ ಮಾನಸಿಕ ವಯಸ್ಸು ಆಗಿದೆ".**

ಮಗುವಿನ ಮಾನಸಿಕ ವಯಸ್ಸನ್ನಾದರಿಸಿ ಅವನ ಬೌದ್ಧಿಕ ಬೆಳವಣಿಗೆಯ ಮಟ್ಟ ಸಾಮಾನ್ಯ ಮಟ್ಟದಲ್ಲಿದೆಯೋ ಸಾಮಾನ್ಯಕಿಂತ ಮೇಲ್ಮಟ್ಟದಲ್ಲಿ ಇಲ್ಲವೇ ಕೆಳಮಟ್ಟದಲ್ಲಿ ಇದೆಯೋ ಎಂಬುದನ್ನು ನಿರ್ಧರಿಸಲಾಗುತ್ತದೆ. ಮಗುವಿನ ಮಾನಸಿಕ ವಯಸ್ಸು ಅವನ ನಿಜ ವಯಸ್ಸಿನಷ್ಟೆ ಆಗಿದ್ದರೆ ಸಾಮಾನ್ಯ ಬುದ್ಧಿವಂತನೆಂದು ಅವನ ಮಾನಸಿಕ ವಯಸ್ಸು ನಿಜವಯಸ್ಸಿಗಿಂತಲು ಹೆಚ್ಚು ಇದ್ದರೆ ಹೆಚ್ಚು ಬುದ್ಧಿವಂತನೆಂದು ಅವನ ಮಾನಸಿಕ ವಯಸ್ಸು ನಿಜ ವಯಸ್ಸಿಗಿಂತ ಕಡಿಮೆಯಿದ್ದರೆ ಅವನು ಕಡಿಮೆ ಬುದ್ಧಿವಂತನೆಂದು ನಿರ್ಧರಿಸಲಾಗುತ್ತದೆ.

### ಬುದ್ಧಿಶಕ್ತಿ ಸೂಚ್ಯಂಕ (ಬುದ್ಧಿಲಬ್ಧ) (Intelligence Quotient) (IQ)

**ಮಾನಸಿಕ ಸಾಮರ್ಥ್ಯದ ಬೆಳವಣಿಗೆ ದರವನ್ನು ಬುದ್ಧಿಲಬ್ಧ ಎನ್ನುವರು.** ಈ ಪರಿಕಲ್ಪನೆಯನ್ನು ಪರಿಚಯಿಸಿದವರು ಜರ್ಮನ್ ಮನೋವಿಜ್ಞಾನಿ ವಿಲಿಯಂ ಸ್ಟರ್ನ್‌ರವರು. **ಬುದ್ಧಿಲಬ್ಧವು ಮಾನಸಿಕ ವಯಸು ಮತ್ತು ದೈಹಿಕ ವಯಸುಗಳಿಗಿರುವ ಅನುಪಾತವಾಗಿದೆ.** ಮಾನಸಿಕ ವಯಸ್ಸನ್ನು ದೈಹಿಕ ವಯಸ್ಸಿನಿಂದ ಭಾಗಿಸುವುದರ ಮೂಲಕ ಬುದ್ಧಿಲಬ್ಧವನ್ನು ಕಂಡುಹಿಡಿಯಲಾಗುವುದು. ಇದನ್ನು ಕೆಳಗಿನ ಸೂತ್ರದ ಮೂಲಕ ಹೀಗೆ ಲೆಕ್ಕಿಸಲಾಗುವುದು.

$$\text{ಬುದ್ಧಿಲಬ್ಧ} = \frac{\text{ಮಾನಸಿಕ ವಯಸ್ಸು (MA)}}{\text{ದೈಹಿಕ ವಯಸ್ಸು (CA)}} \times 100$$

$$IQ = \frac{MA}{CA} \times 100$$

**ಉದಾ : 1)** 10 ವರ್ಷ ವಯೋಮಾನದ ಒಂದು ಮಗುವಿನ ಮಾನಸಿಕ ವಯಸ್ಸು 10 ವರ್ಷಗಳಾಗಿದ್ದಲ್ಲಿ ಅವನ ಬುದ್ಧಿಲಬ್ಧವನ್ನು ಹೀಗೆ ಲೆಕ್ಕಿಸಲಾಗುತ್ತದೆ. ಇಲ್ಲಿ MA=10, CA=10 ಆದರೆ IQ= ?

$$IQ = \frac{MA}{CA} \times 100 = \frac{10}{10} \times 100 = 100 \quad IQ=100$$

**ಉದಾ : 2)** 10 ವರ್ಷ ವಯೋಮಾನದ ಒಂದು ಮಗುವಿನ ಮಾನಸಿಕ ವಯಸ್ಸು 12 ವರ್ಷಗಳಾಗಿದ್ದಲ್ಲಿ ಅವನ ಬುದ್ಧಿಲಬ್ಧವನ್ನು ಹೀಗೆ ಲೆಕ್ಕಿಸಲಾಗುತ್ತದೆ.

$$IQ = \frac{MA}{CA} \times 100 = \frac{12}{10} \times 100 = 120 \quad IQ=120$$

**ಉದಾ : 3)** 10 ವರ್ಷ ವಯೋಮಾನದ ಒಂದು ಮಗುವಿನ ಮಾನಸಿಕ ವಯಸ್ಸು 8 ವರ್ಷಗಳಾಗಿದ್ದಲ್ಲಿ ಅವನ ಬುದ್ಧಿಲಬ್ಧವನ್ನು ಹೀಗೆ ಲೆಕ್ಕಿಸಲಾಗುತ್ತದೆ.

$$IQ = \frac{MA}{CA} \times 100 = \frac{8}{10} \times 100 = 80 \quad IQ=80$$

**ಉದಾ : 4)** ಒಂದು ಮಗುವಿನ ದೈಹಿಕ ವಯಸ್ಸು 10 ವರ್ಷ ಹಾಗೂ ಬುದ್ಧಿಲಬ್ಧ 140 ಆಗಿದ್ದರೆ ಅವನ ಮಾನಸಿಕ ವಯಸ್ಸನ್ನು ಹೀಗೆ ಲೆಕ್ಕಿಸಲಾಗುತ್ತದೆ.

$$IQ = \frac{MA}{CA} \times 100 = MA \times 100 = CA \times IQ$$

$$MA = \frac{CA \times IQ}{100} = \frac{10 \times 140}{100} = 14$$

MA=14 ವರ್ಷ

**ಉದಾ : 5)** ಒಂದು ಮಗುವಿನ ಮಾನಸಿಕ ವಯಸ್ಸು 12 ವರ್ಷ ಹಾಗೂ ಬುದ್ಧಿಲಬ್ಧ 120 ಆಗಿದ್ದರೆ ಅವನ ನಿಜ ವಯಸ್ಸನ್ನು ಹೀಗೆ ಲೆಕ್ಕಿಸಲಾಗುತ್ತದೆ.

$$IQ = \frac{MA}{CA} x100 \quad CA = \frac{MA \times 100}{IQ} = \frac{12 \times 100}{120} = 10$$

CA=10

**ಉದಾ : 6)** CA=10, IQ=90 ಆದರೆ MA ಕಂಡುಹಿಡಿಯಿರಿ.

$$IQ = \frac{MA}{CA} x100 \quad MA \times 100 = CA \times IQ$$

$$MA = \frac{CAxIQ}{100} = \frac{10 \times 90}{100} = 9$$

MA = 9

**ಉದಾ : 7)** MA=14, IQ=100 ಆದರೆ CA ಕಂಡುಹಿಡಿಯಿರಿ.

$$IQ = \frac{MA}{CA} x100 \quad IQ \times CA = MA \times 100$$

$$CA = \frac{MAx100}{IQ} = \frac{14 \times 100}{100} = 14$$

CA = 14 ವರ್ಷ


## ಬುದ್ಧಿಶಕ್ತಿಯ ವರ್ಗೀಕರಣ ಹಾಗೂ ವಿತರಣೆ (Classification and Distribution of Intelligence)

ಈ ಕೆಳಗೆ ಕೊಟ್ಟಿರುವ ಕೋಷ್ಟಕ ಮತ್ತು ಚಿತ್ರದಲ್ಲಿ ತೋರಿಸಿರುವಂತೆ ಒಂದು ಬೃಹತ ಸಮೂಹದ ಬುದ್ಧಿಲಬ್ಧಗಳ ಆಧಾರದ ಮೇಲೆ ಬೀನೇ ಕಾಮತ್‌ರವರು ವರ್ಗೀಕರಿಸಿರುತ್ತಾರೆ.

**ಕೋಷ್ಟಕ : ಬುದ್ಧಿಲಬ್ಧವನ್ನಾಧರಿಸಿದ ಬೀನೇ–ಕಾಮತ್ ರವರ ವರ್ಗೀಕರಣ**

| ಕ್ರ..ಸಂ | ವರ್ಗೀಕರಣ | ಬುದ್ಧಿಲಬ್ಧ | ಶೇಕಡಾ ಪ್ರಮಾಣ |
|---|---|---|---|
| 1 | ಅತಿಮೇಧಾವಿಗಳು | 140 ಮತ್ತು ಮೇಲ್ಪಟ್ಟು | 0.25 |
| 2 | ಮೇಧಾವಿಗಳು | 130 – 139 | 0.75 |
| 3 | ಪ್ರತಿಭಾನ್ವಿತರು | 120 – 129 | 6.00 |
| 4 | ಸಾಮಾನ್ಯಕ್ಕಿಂತ ಮೇಲ್ಮಟ್ಟದ ಬುದ್ಧಿಶಕ್ತಿಯುಳ್ಳವರು | 110 – 119 | 13.00 |
| 5 | ಸಾಮಾನ್ಯ ಬುದ್ಧಿಶಕ್ತಿ ಹೊಂದಿದವರು | 90 – 109 | 60.00 |
| 6 | ಸಾಮಾನ್ಯಕ್ಕಿಂತ ಕಡಿಮೆ ಮಟ್ಟದ ಬುದ್ಧಿಶಕ್ತಿಯುಳ್ಳವರು | 80 – 89 | 13.00 |
| 7 | ಬುದ್ಧಿಮಾಂದ್ಯರು ಅಥವಾ ಸೀಮಾರೇಖೆಯಲ್ಲಿರುವವರು | 70 – 79 | 6.00 |
| 8 | ಮಾನಸಿಕ ನ್ಯೂನ್ಯತೆಯುಳ್ಳವರು | 59 – 69 | 0.75 |
| 9 | ಮೂರ್ಖರು | 49 ಮತ್ತು ಕೆಳಗೆ | 0.25 |

### ಬುದ್ಧಿಲಬ್ಧವನ್ನಾಧರಿಸಿದ ವಿತರಣೆ – ಸಾಮಾನ್ಯ ಸಂಭಾವ್ಯ ವಕ್ರ ರೇಖೆ




ಜನ ಸಮೂಹದ ಬುದ್ಧಿಲಬ್ಧವನ್ನಾಧರಿಸಿದ ಶೇಕಡಾ ಪ್ರಮಾಣ ಸೂಚಿಸುವ ವಿತರಣೆಯ ಚಿತ್ರ

## 2.2.3 ಬುದ್ಧಿಶಕ್ತಿ ಪರೀಕ್ಷಣಗಳು –ವಿಧಗಳು–ವೈಯಕ್ತಿಕ ಮತ್ತು ಸಾಮೂಹಿಕ–ಶಾಬ್ದಿಕ–ಅಶಾಬ್ದಿಕ–ಕಾರ್ಯನಿರ್ವಹಣಾ ಪರೀಕ್ಷಣಗಳು – ಬುದ್ಧಿಶಕ್ತಿ ಪರೀಕ್ಷಣಗಳ ಉಪಯೋಗಗಳು.

### ಬುದ್ಧಿಶಕ್ತಿ ಪರೀಕ್ಷಣದ ವಿಧಗಳು (Types of Intelligence Tests)

ಬುದ್ಧಿಶಕ್ತಿ ಪರೀಕ್ಷಣಗಳು

- ವೈಯಕ್ತಿಕ ಪರೀಕ್ಷಣಗಳು
  - ಶಾಬ್ದಿಕ ಪರೀಕ್ಷಣ
  - ಅಶಾಬ್ದಿಕ ಪರೀಕ್ಷಣ
  - ಕ್ರಿಯಾತ್ಮಕ ಪರೀಕ್ಷಣ
- ಸಾಮೂಹಿಕ ಪರೀಕ್ಷಣಗಳು
  - ಶಾಬ್ದಿಕ ಪರೀಕ್ಷಣ
  - ಅಶಾಬ್ದಿಕ ಪರೀಕ್ಷಣ

### 1. ವೈಯಕ್ತಿಕ ಬುದ್ಧಿಶಕ್ತಿ ಪರೀಕ್ಷಣಗಳು

ಒಂದು ಸಮಯದಲ್ಲಿ ಕೇವಲ ಒಬ್ಬ ವ್ಯಕ್ತಿಯ ಬುದ್ಧಿಶಕ್ತಿಯನ್ನು ಒಬ್ಬ ಪರೀಕ್ಷಕ ಪರೀಕ್ಷಿಸುವ ಪರೀಕ್ಷಣಗಳಿಗೆ ವೈಯಕ್ತಿಕ ಬುದ್ಧಿಶಕ್ತಿ ಪರೀಕ್ಷಣಗಳು ಎನ್ನುವರು. 1905 ರಲ್ಲಿ ಪ್ರಾನ್ಸ್ ದೇಶದ ಆಲ್ಫ್ರೆಡ್ ಬೀನೆಯವರು ಪ್ರಥಮ ಬಾರಿಗೆ ರಚಿಸಿದ ಬುದ್ಧಿಶಕ್ತಿ ಪರೀಕ್ಷಣಗಳು ವೈಯಕ್ತಿಕ ಬುದ್ಧಿಶಕ್ತಿ ಪರೀಕ್ಷಣಗಳಾಗಿವೆ. ಆಲ್ಫ್ರೆಡ್ ಬೀನೆಯವರನ್ನು ಬುದ್ಧಿಶಕ್ತಿ ಪರೀಕ್ಷಣಗಳ ಪಿತಾಮಹ ಎನ್ನುವರು. ವೈಯಕ್ತಿಕ ಬುದ್ಧಿಶಕ್ತಿ ಪರೀಕ್ಷಣಗಳನ್ನು ಶಾಬ್ಧಿಕ, ಅಶಾಬ್ಧಿಕ, ಮತ್ತು ಕ್ರಿಯಾತ್ಮಕ ಪರೀಕ್ಷಣಗಳಾಗಿ ವಿಂಗಡಿಸಲಾಗುತ್ತದೆ.

### (a) ವೈಯಕ್ತಿಕ ಶಾಬ್ಧಿಕ ಬುದ್ಧಿಶಕ್ತಿ ಪರೀಕ್ಷಣಗಳು

ಒಬ್ಬ ಪರೀಕ್ಷಕ ಒಂದು ಸಮಯದಲ್ಲಿ ಭಾಷೆ ಹಾಗೂ ಭಾಷೆಯ ಘಟಕಗಳಾದ ಅಕ್ಷರ, ಪದ, ವಾಕ್ಯ, ವ್ಯಾಕರಣ ಹಾಗೂ ಸಂಖ್ಯೆಗಳನ್ನು ಬಳಸಿ ಕೇವಲ ಒಬ್ಬ ವ್ಯಕ್ತಿಯ ಬುದ್ಧಿಶಕ್ತಿಯನ್ನು ಅಳೆಯುವ ಪರೀಕ್ಷಣಗಳನ್ನು ವೈಯಕ್ತಿಕ ಶಾಬ್ದಿಕ ಬುದ್ಧಿಶಕ್ತಿ ಪರೀಕ್ಷಣಗಳೆನ್ನುವರು.

ಉದಾ : 1) ಬೀನೇ–ಸೈಮನ್ ಬುದ್ಧಿಶಕ್ತಿ ಪರೀಕ್ಷಣ
2) ಸ್ಟ್ಯಾನ್ ಫೋರ್ಡ – ಬೀನೇ ಬುದ್ಧಿಶಕ್ತಿ ಪರೀಕ್ಷೆ
3) ಬೀನೇ–ಕಾಮತ್ ಬುದ್ಧಿಶಕ್ತಿ ಪರೀಕ್ಷೆ

**(b) ವೈಯಕ್ತಿಕ ಅಶಾಬ್ಧಿಕ ಬುದ್ಧಿಶಕ್ತಿ ಪರೀಕ್ಷಣಗಳು :** ಒಂದು ನಿರ್ಧಿಷ್ಟ ಸನ್ನಿವೇಶದಲ್ಲಿ ಒಬ್ಬ ಪರೀಕ್ಷಕ ಭಾಷೆಯನ್ನು ಬಳಸದೇ ಚಿತ್ರ, ಸಂಕೇತ, ಚಿಹ್ನೆ ಹಾಗೂ ನಕ್ಷೆಗಳ ಮೂಲಕ ಕೇವಲ ಒಬ್ಬ ವ್ಯಕ್ತಿಯ ಬುದ್ಧಿಶಕ್ತಿಯನ್ನು ಅಳೆಯುವ ಪರೀಕ್ಷಣಗಳನ್ನು ವೈಯಕ್ತಿಕ ಅಶಾಬ್ಧಿಕ ಬುದ್ಧಿಶಕ್ತಿ ಪರೀಕ್ಷಣಗಳು ಎನ್ನುವರು, ಇವುಗಳು ಭಾಷೆ ಅರಿಯದ ಅನಕ್ಷರಸ್ಥ, ಸ್ಥಳೀಯ ಭಾಷೆ ಅರಿಯದ ಹಾಗೂ ಅಕ್ಷರಸ್ಥ ವ್ಯಕ್ತಿಗಳ ಬುದ್ಧಿಶಕ್ತಿ ಅಳೆಯುವ ಪರೀಕ್ಷೆಗಳಾಗಿದ್ದು, ಸಾಮಾನ್ಯವಾಗಿ ಇವು ಕೂಡಾ ಪೇಪರ್–ಪೆನ್ಸಿಲ್ ಪರೀಕ್ಷೆಗಳಾಗಿವೆ. ಚಿತ್ರಗಳ ಸರಣಿ, ಚಿತ್ರಗಳ ವಿವರಣೆ, ಚಿತ್ರಗಳನ್ನು ಪೂರ್ಣಗೊಳಿಸುವುದು ಮುಂತಾದ ಅಂಶಗಳಿಂದ ಕೂಡಿರುತ್ತವೆ.

ಉದಾ: (1) ರೇವನ್ಸ ಪ್ರೋಗ್ರೆಸಿವ್ ಮ್ಯಾಟ್ರಿಕ್ಸ್ ಪರೀಕ್ಷೆ.

**(c) ವೈಯಕ್ತಿಕ ಕ್ರಿಯಾತ್ಮಕ ಬುದ್ಧಿಶಕ್ತಿ ಪರೀಕ್ಷಣಗಳು :** ಒಂದು ನಿರ್ಧಿಷ್ಟ ಸನ್ನಿವೇಶದಲ್ಲಿ ಒಬ್ಬ ಪರೀಕ್ಷಕ ಕೇವಲ ಒಬ್ಬ ಪರೀಕ್ಷಾರ್ಥಿಯನ್ನು ಕ್ರಿಯೆ ಇಲ್ಲವೆ ಚಟುವಟಿಕೆಯಲ್ಲಿ ತೊಡಗಿಸಿ ಕೈಚಳಕ ಅಳೆಯುವ ಮೂಲಕ ಬುದ್ಧಿಶಕ್ತಿ ಪರೀಕ್ಷಿಸುವ ಪರೀಕ್ಷೆಯನ್ನು ಕ್ರಿಯಾತ್ಮಕ/ ಕಾರ್ಯನಿರ್ವಹಣಾ ಪರೀಕ್ಷೆ ಎನ್ನುವರು ಇಲ್ಲಿ ಭಾಷೆಯ ಬಳಕೆ ಇರುವುದಿಲ್ಲ. ಭಾಷೆ ಅರಿಯದವರ, ಅನಕ್ಷಸ್ಥರ, ಮೂಗ, ಕಿವುಡ ವ್ಯಕಿಗಳ ಬುದ್ಧಿಶಕ್ತಿಯನ್ನು ಅಳೆಯಲಾಗುತ್ತದೆ.

ಉದಾ: (1) ಭಾಟಿಯಾರವರ ಕ್ರಿಯಾತ್ಮಕ ಬುದ್ಧಿಶಕ್ತಿ ಪರೀಕ್ಷೆ.
(2) ಡೆವಿಡ್‌ವೆಸ್ಲರ ಕ್ರಿಯಾತ್ಮಕ ಬುದ್ಧಿಶಕ್ತಿ ಪರೀಕ್ಷೆ ಮುಂತಾದವುಗಳು.

**2. ಸಾಮೂಹಿಕ ಬುದ್ಧಿಶಕ್ತಿ ಪರೀಕ್ಷಣಗಳು :** ಏಕಕಾಲಕ್ಕೆ ಅನೇಕ ವ್ಯಕ್ತಿಗಳ ಬುದ್ಧಿಶಕ್ತಿಯನ್ನು ಅಳೆಯವ ಪರೀಕ್ಷಣಗಳನ್ನು ಸಾಮೂಹಿಕ ಬುದ್ಧಿಶಕ್ತಿ ಪರೀಕ್ಷಣಗಳೆನ್ನುವರು, ಇವು ಪೇಪರ–ಪೆನ್ಸಿಲ್ ಪರೀಕ್ಷಣಗಳಾಗಿವೆ. ಇವುಗಳನ್ನು ಪ್ರಥಮ ಜಾಗತಿಕ ಮಹಾಯುದ್ಧದ ಸಂದರ್ಭಗಳಲ್ಲಿ ಅಮೇರಿಕಾದ ಅರ್ಥರ್ ಓಟೀಸರವರು ಪ್ರಥಮ ಬಾರಿಗೆ ರಚಿಸಿರುವರು. ಇವುಗಳನ್ನು ಎರಡು ವಿಧಗಳಾಗಿ ವಿಂಗಡಿಸಲಾಗುತ್ತದೆ. (a) ಸಾಮೂಹಿಕ ಶಾಬ್ಧಿಕ ಪರೀಕ್ಷಣಗಳು, ಮತ್ತು (b)ಸಾಮೂಹಿಕ ಅಶಾಬ್ಧಿಕ ಪರೀಕ್ಷಣಗಳು

**(a) ಸಾಮೂಹಿಕ ಶಾಬ್ಧಿಕ ಬುದ್ಧಿಶಕ್ತಿ ಪರೀಕ್ಷಣಗಳು:–** ಏಕಕಾಲಕ್ಕೆ ಅನೇಕ ಅಕ್ಷರಸ್ಥ ವ್ಯಕ್ತಿಗಳ, ಓದು ಬರಹ ಬಲ್ಲವರ ಬುದ್ಧಿಶಕ್ತಿಯನ್ನು ಸಾಮೂಹಿಕವಾಗಿ ಅಳೆಯಲಾಗುತ್ತದೆ. ಇಲ್ಲಿ ಭಾಷೆ ಬಳಕೆ ಇರುವುದು.

ಉದಾ: (1) ಆರ್ಮಿ ಆಲ್ಫಾ ಪರೀಕ್ಷೆ. (2) ಆರ್ಮಿ ಜನರಲ್ ಕ್ಲಾಸಿಫಿಕೇಷನ್ ಪರೀಕ್ಷೆ ಮುಂತಾದವುಗಳು.

**(b) ಸಾಮೂಹಿಕ ಅಶಾಬ್ಧಿಕ ಬುದ್ಧಿಶಕ್ತಿ ಪರೀಕ್ಷಣಗಳು :** ಏಕಕಾಲಕ್ಕೆ ಅನೇಕ ಅನಕ್ಷರಸ್ಥ ವ್ಯಕ್ತಿಗಳ ಇಲ್ಲವೆ ಭಾಷೆ ಅರಿಯದವರ ಬುದ್ಧಿಶಕ್ತಿಯನ್ನು ಸಾಮೂಹಿಕವಾಗಿ ಅಳೆಯಲಾಗುತ್ತದೆ. ಇಲ್ಲಿ ಭಾಷೆ ಬಳಕೆ ಇರುವುದಿಲ್ಲ.

ಉದಾ: (1) ಆರ್ಮಿ ಬೀಟಾ ಪರೀಕ್ಷೆ.
(2) ಚಿಕ್ಯಾಗೋ ಅ–ಶಾಬ್ಧಿಕ ಪರೀಕ್ಷೆ ಮುಂತಾದವುಗಳು.

**ಬುದ್ಧಿಶಕ್ತಿ ಪರೀಕ್ಷಣಗಳ ಉಪಯೋಗಗಳು (Uses of Intelligence Tests)**

1) ಮಗುವಿನ ಬೌದ್ಧಿಕ ಸಾಮರ್ಥ್ಯಗಳನ್ನು ಅರಿಯಲು
2) ಪ್ರತಿಭಾನ್ವಿತ ಮತ್ತು ನಿಧಾನವಾಗಿ ಕಲಿಯುವ ಮಕ್ಕಳನ್ನು ಗುರುತಿಸಿ ಅವರ ಶಿಕ್ಷಣ ವ್ಯವಸ್ಥೆ ಮಾಡುವಲ್ಲಿ.
3) ಮಕ್ಕಳ ಮಾನಸಿಕ ದೌರ್ಬಲ್ಯದ ಮಟ್ಟವನ್ನು ತಿಳಿದು ಪರಿಹರಿಸುವಲ್ಲಿ.
4) ಬುದ್ಧಿಶಕ್ತಿಯನ್ನಾಧರಿಸಿ ಮಕ್ಕಳನ್ನು ವರ್ಗೀಕರಣ ಮಾಡಲು.
5) ವ್ಯಕ್ತಿಗಳಿಗೆ ವಿವಿಧ ಜವಾಬ್ದಾರಿಗಳನ್ನು ಕೊಡುವಾಗ
6) ವೈಯಕ್ತಿಕ ಸಮಸ್ಯೆಗಳನ್ನು ಗುರುತಿಸಿ ಪರಿಹಾರ ಒದಗಿಸುವಲ್ಲಿ.
7) ಶೈಕ್ಷಣಿಕ ಹಾಗೂ ವೃತ್ತಿಮಾರ್ಗದರ್ಶನ ನೀಡುವಲ್ಲಿ.
8) ವಿವಿಧ ವಿಭಾಗಗಳಿಗೆ ಪ್ರವೇಶ ನೀಡುವಲ್ಲಿ ಹಾಗೂ ವಿವಿಧ ವೃತ್ತಿ ಆಯ್ಕೆಯಲ್ಲಿ.
9) ಮನೋರೋಗಿಗಳ ಚಿಕಿತ್ಸೆ ನೀಡುವಲ್ಲಿ.
10) ಶೈಕ್ಷಣಿಕ ಸಂಶೋಧನೆಗಳನ್ನು ಕೈಗೊಳ್ಳುವಲ್ಲಿ.

## 2.3 ಸಂವೇಗಾತ್ಮಕ ಬುದ್ಧಿಶಕ್ತಿ – ಪರಿಕಲ್ಪನೆ – ಘಟಕಾಂಶಗಳು ಮತ್ತು ಪ್ರಾಮುಖ್ಯತೆ – ಸಂವೇಗಾತ್ಮಕ ಬುದ್ದಿಲಬ್ಧ (EQ) – ಸಂವೇಗಾತ್ಮಕ ಬುದ್ಧಿಶಕ್ತಿ ಸಂವರ್ಧನೆಯ ಕ್ರಮಗಳು.

### ಸಂವೇಗಾತ್ಮಕ ಬುದ್ಧಿಶಕ್ತಿ (Emotional Intelligence)

ವ್ಯಕ್ತಿಯ ಜೀವನದ ಯಾವುದೇ ರೀತಿಯ ಯಶಸ್ಸಿಗೆ ಖಂಡಿತವಾಗಿಯೂ ಅವನ ಬುದ್ಧಿಶಕ್ತಿಯು ಪ್ರಮುಖ ನಿರ್ಧಾರಕ ಅಂಶವಾಗಿರುತ್ತದೆ. ಆದಾಗ್ಯೂ ಇತ್ತೀಚೆಗೆ ಕೈಗೊಂಡ ಸಂಶೋಧನೆಗಳು ಮತ್ತು ಪ್ರಯೋಗಗಳು ವ್ಯಕ್ತಿಯ ಬುದ್ಧಿಶಕ್ತಿಗಿಂತಲೂ ಅವನ ಸಂವೇಗಾತ್ಮಕ ಬುದ್ಧಿಶಕ್ತಿಯು ಜೀವನದ ಯಶಸ್ಸು ನಿರ್ಧರಿಸುವ ನಿರ್ಧಾರಕ ಅಂಶವಾಗಿದೆ ಎಂಬುವುದನ್ನು ಪ್ರತಿಪಾದಿಸುತ್ತವೆ. ಉನ್ನತ ಶಿಕ್ಷಣ ಪಡೆದ ವ್ಯಕ್ತಿಗಳು ತಮ್ಮ ವೃತ್ತಿ ಜೀವನದಲ್ಲಿ ಯಶಸ್ಸು ಪಡೆಯುವರು. ಆದರೆ ಕೆಲವೊಮ್ಮೆ ಸ್ವಪ್ರತಿಷ್ಟೆ, ಸ್ವಯಂ ಗೌರವ ಮತ್ತು ಸ್ವಯಂ ಅರಿವು ಮುಂತಾದ ಸಂವೇಗಾತ್ಮಕ ಅಂಶಗಳ ಕೊರತೆಯಿಂದ ಅವರು ತಮ್ಮ ಪರಿಸರಕ್ಕೆ ಹೊಂದಿಕೊಳ್ಳುವಲ್ಲಿ ವಿಫಲರಾಗುವರು. ಆದ್ದರಿಂದ ಈ ರೀತಿಯ ಸಂವೇಗಾತ್ಮಕ ಅಂಶಗಳನ್ನು ಅಭಿವೃದ್ಧಿ ಪಡಿಸಲು ಸಂವೇಗಾತ್ಮಕ ಬುದ್ಧಿಶಕ್ತಿಯು ಅತ್ಯವಶ್ಯಕವಾಗಿದೆ. ಸಾಮಾನ್ಯವಾಗಿ ಸಂವೇಗಾತ್ಮಕ ಬುದ್ಧಿಶಕ್ತಿ ಹೊಂದಿದ ವ್ಯಕ್ತಿಗಳು ಶ್ರಮಜೀವಿಗಳು, ಪ್ರಜ್ಞಾಪೂರ್ವಕವಾಗಿ ವರ್ತಿಸುವರು, ಉತ್ತಮ ನಡತೆಯುಳ್ಳವರು, ಮಾನವಿಯತೆಯಿಂದ ಕೂಡಿದ್ದು ಇತರರಿಗಾಗಿ ತ್ಯಾಗ ಮಾಡಲು ಸಿದ್ಧರಾಗಿರುವರು. ಆಧುನಿಕ ಮನೋವಿಜ್ಞಾನಿಗಳ ಅಭಿಪ್ರಾಯದಲ್ಲಿ ಒಬ್ಬ ವ್ಯಕ್ತಿಯ ಯಶಸ್ಸಿಗೆ ಅವನ ಸಂವೇಗಾತ್ಮಕ ಬುದ್ಧಿಶಕ್ತಿಯು ಕಾರಣವಾಗಿದೆ.

### ಸಂವೇಗಾತ್ಮಕ ಬುದ್ಧಿಶಕ್ತಿಯ ಪರಿಕಲ್ಪನೆ (Concept of Emotional Intelligence) :

ಸಂವೇಗಾತ್ಮಕ ಬುದ್ಧಿಶಕ್ತಿಯು 'ಸಾಮಾಜಿಕ ಬುದ್ಧಿಶಕ್ತಿ' ಎಂಬ ಪರಿಕಲ್ಪನೆಯ ಮೂಲಕ ಮೂಡಿಬಂದಿದೆ. ಥಾರ್ನ್ಡೈಕ್‌ರವರ ಪ್ರಕಾರ ಸಾಮಾಜಿಕ ಬುದ್ಧಿಶಕ್ತಿ ಎಂಬುದು "ವ್ಯಕ್ತಿಗಳನ್ನು ಅರಿಯುವ ಮತ್ತು ಅವರನ್ನು ಸಂಘಟಿಸುವ ಹಾಗೂ ಮಾನವ ಸಂಬಂಧಗಳ ಕುರಿತು ಬುದ್ಧಿವಂತಿಕೆಯಿಂದ ಕಾರ್ಯನಿರ್ವಹಿಸುವ ಸಾಮರ್ಥ್ಯವೇ ಸಾಮಾಜಿಕ ಬುದ್ಧಿಶಕ್ತಿ". ಸಂವೇಗಾತ್ಮಕ ಬುದ್ದಿಶಕ್ತಿ ಎಂಬುದು ಸಾಮಜಿಕ ಬುದ್ಧಿಶಕ್ತಿಯ ಒಂದು ವಿಧವಾಗಿದ್ದು ಇದು ವ್ಯಕ್ತಿ ತನ್ನ ಭಾವನೆಗಳನ್ನು ಹಾಗೂ ಇತರರ ಭಾವನೆಗಳನ್ನು ಗುರುತಿಸಿಕೊಂಡು ಸಂಘಟಿಸುವ ಮೂಲಕ ಅಭಿಪ್ರೇರಣೆಹೊಂದಿ ಉತ್ತಮ ಸಂಬಂಧವನ್ನು ಹೊಂದುವದಾಗಿದೆ.

ಸಂವೇಗಾತ್ಮಕ ಬುದ್ಧಿಶಕ್ತಿ ಎಂಬ ಪರಿಕಲ್ಪನೆಯನ್ನು ಮೊದಲ ಬಾರಿಗೆ ರೂಪಿಸಿದವರು **ಪೀಟರ್ ಸಾಲೋವೈ** ಮತ್ತು ನ್ಯೂಹ್ಯಾಂಪ್‌ಸೈರ್ ವಿಶ್ವವಿದ್ಯಾಲಯದ **ಜಾನ್‌ಮೇಯರ್‌ರವರು**. ಸಂವೇಗಾತ್ಮಕ ಬುದ್ಧಿಶಕ್ತಿಯು ವ್ಯಕ್ತಿಯ ಜೀವನದಲ್ಲಿ ಯಶಸ್ಸು ಪಡೆಯುವ ಸಾಧ್ಯತೆಯನ್ನು ನಿರ್ಧರಿಸುವ ಮಾನದಂಡವಾಗಿದೆ.

ಸಂವೇಗಾತ್ಮಕ ಬುದ್ಧಿಶಕ್ತಿ ಎಂಬ ಪರಿಕಲ್ಪನೆಯನ್ನು ಅಮೇರಿಕಾದ **ಡೇನಿಯಲ್ ಗೋಲ್‌ಮನ್‌ರವರು 1995** ರಲ್ಲಿ '**ಎಮೋಷನಲ್ ಇಂಟಲಿಜನ್ಸ್**' ಎಂಬ ಪುಸ್ತಕವನ್ನು ಪ್ರಕಟಿಸುವ ಮೂಲಕ ಇದನ್ನು ಹೆಚ್ಚು ಪ್ರಚುರಗೊಳಿಸಿದರು.

### ವ್ಯಾಖ್ಯೆಗಳು

**"ಭಾವನೆಗಳನ್ನು ಗ್ರಹಿಸುವ, ಸಮನ್ವಯಗೊಳಿಸುವ, ನಿಯಂತ್ರಿಸುವ ಮತ್ತು ವ್ಯವಸ್ಥೆಗೊಳಿಸುವ ವ್ಯಕ್ತಿಯ ಸಾಮರ್ಥ್ಯವನ್ನು ಸಂವೇಗಾತ್ಮಕ ಬುದ್ಧಿಶಕ್ತಿ"** ಎನ್ನುವರು – **ಜಾನ್‌ಮೇಯರ್ ಮತ್ತು ಪೀಟರ್ ಸಾಲೋವೈ (1990)**

**"ನಮ್ಮ ಹಾಗೂ ಇತರರ ಭಾವನೆಗಳನ್ನು ಗುರುತಿಸುವ ಸಾಮರ್ಥ್ಯ, ಸ್ವಯಂ ಪ್ರೇರಿತರಾಗುವುದು ಮತ್ತು ನಮ್ಮ ಭಾವನೆಗಳನ್ನು ಸಮರ್ಪಕವಾಗಿ ವ್ಯವಸ್ಥೆಗೊಳಿಸುವ ಸಾಮರ್ಥ್ಯವನ್ನು ಸಂವೇಗಾತ್ಮಕ ಬುದ್ಧಿಶಕ್ತಿ ಎನ್ನುವರು".**

– **ಗೋಲ್‌ಮನ್ (1996)**

**"ಸಂವೇಗಾತ್ಮಕ ಬುದ್ಧಿಶಕ್ತಿಯು ನಾಲ್ಕು ಪ್ರಮುಖ ಅಂಶಗಳಾದ ಜಾಗ್ರತಿಗೊಳಿಸುವುದು, ಸ್ವೀಕರಿಸುವಿಕೆ, ಮನೋಭಾವನೆಗಳು ಮತ್ತು ಕ್ರಿಯೆ ಇವುಗಳಲ್ಲಿ ಪ್ರಭುತ್ವ ಸಾಧಿಸುವುದೇ ಸಂವೇಗಾತ್ಮಕ ಬುದ್ಧಿಶಕ್ತಿಯಾಗಿದೆ"**

– **ಯಟ್ಟಾ ಲಾರೆನ್ಸ್‌ಲಾಗರ್**

### ಸಂವೇಗಾತ್ಮಕ ಬುದ್ಧಿಶಕ್ತಿಯ ಘಟಕಾಂಶಗಳು (Components of Emotional Intelligence)

ಗೋಲ್‌ಮನ್ ಡೇನಿಯಲ್‌ರವರು ಕೈಗೊಂಡ ಅಧ್ಯಯನವು ಸಂವೇಗಾತ್ಮಕ ಬುದ್ಧಿಶಕ್ತಿಯ ಮೂಲಘಟಕಗಳ ಬಗ್ಗೆ ಬೆಳಕು ಚಲ್ಲಿದೆ ಅವುಗಳೆಂದರೆ,

**1) ಸ್ವಯಂ–ಅರಿವು (Self Awarenes) :** ಪ್ರತಿ ಕ್ಷಣದಲ್ಲಿ ವ್ಯಕ್ತಿಗಳು ತಮ್ಮಲ್ಲಿ ಉಂಟಾಗುವ ಭಾವನೆಗಳನ್ನು ತಿಳಿಯುವುದು, ಯಾವುದೇ ನಿರ್ಧಾರ ಕೈಗೊಳ್ಳುವಾಗ ಸೂಕ್ತವಾದ ಸಾಮಾರ್ಥ್ಯಗಳನ್ನು ಉಪಯೋಗಿಸಿಕೊಳ್ಳುವುದು, ತಮ್ಮ ಸಾಮಾರ್ಥ್ಯಗಳ ಹಾಗೂ ಇತಿಮಿತಿಗಳ ನಿಜವಾದ ಅರಿವು ಹೊಂದುವುದನ್ನು ಸ್ವಯಂ ಅರಿವು ಎನ್ನಲಾಗುತ್ತದೆ. ಇದು ಸಂವೇಗಾತ್ಮಕ ಬುದ್ಧಿಶಕ್ತಿಯ ಮೂಲ ಸಾಮಾರ್ಥ್ಯಗಳಲ್ಲೊಂದಾಗಿದೆ.

**2) ಸ್ವಯಂ–ನಿಯಂತ್ರಣ (Self Regulation) :** ನಾವು ಕೈಗೊಳ್ಳುವ ಯಾವುದೇ ಕಾರ್ಯವನ್ನು ಸುಲಭವಾಗಿ ಸಾಧಿಸಲು ನಮ್ಮ ಸಂವೇಗಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು, ನಮ್ಮ ಗುರಿ ಸಾಧನೆಯಾಗುವವರೆಗೆ ಭಾವೋದ್ವೇಗಗಳ ನಿಯಂತ್ರಣ ಹಾಗೂ ಭಾವಾತ್ಮಕವಾಗಿ ವಿಚಲಿತರಾಗದಿರುವದನ್ನು ಸ್ವಯಂ ನಿಯಂತ್ರಣ ಎನ್ನಲಾಗುತ್ತದೆ.

**3) ಸ್ವಯಂ–ಪ್ರೇರಣೆ (Self Motivation) :** ಗುರಿಗಳ ಸಾಧನೆಯ ಕಡೆಗೆ ಸಾಗಲು ತಮ್ಮ ಆಯ್ಕೆಗಳನ್ನು ಇಲ್ಲವೆ ಮಾರ್ಗಗಳನ್ನು ಸಮರ್ಪಕವಾಗಿ ಬಳಸಿಕೊಂಡು ಮುಂದುವರಿದು ಗರೀಷ್ಠ ಸಾಧನೆಗೆ ಪ್ರಯತ್ನಿಸುವುದು ಮತ್ತು ಹಿಂಜರಿಕೆ, ಸೋಲು ಇಲ್ಲವೆ ಆಶಾಭಂಗಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವುದು ಸ್ವಯಂ ಪ್ರೇರಣೆಯಾಗಿದೆ.

**4) ಅನುಭೂತಿ ಶಕ್ತಿ (Empathy) :** ಇತರರ ಭಾವನೆಗಳಿಗೆ ಸ್ಪಂಧಿಸುವುದು, ಅವರ ಭಾವನೆಗಳನ್ನು, ಅಭಿಪ್ರಾಯಗಳನ್ನು ಪರಿಗಣಿಸುವುದು, ಉತ್ತಮ ಬಾಂಧವ್ಯ ಹಾಗೂ ವಿಭಿನ್ನ ಮನೋಭಾವದ ಜನರೊಂದಿಗೆ ಹೊಂದಿಕೊಳ್ಳುವುದೇ ಅನುಭೂತಿ ಶಕ್ತಿಯಾಗಿದೆ. ಇದು ಸಂವೇಗಾತ್ಮಕ ಬುದ್ಧಿಶಕ್ತಿಯ ಮೂಲ ಸಾಮರ್ಥ್ಯಗಳಲ್ಲಿ ಒಂದಾಗಿದೆ.

**5) ಸಾಮಾಜಿಕ ಕೌಶಲಗಳು (Social Skills) :** ಸಾಮಾಜಿಕ ಸನ್ನಿವೇಶಗಳನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳುವುದು, ಸಾಮಾಜಿಕ ಸಂಬಂಧಗಳಲ್ಲಿ ಭಾವನೆಗಳನ್ನು ಸರಿಯಾಗಿ ಬಳಸಿಕೊಳ್ಳುವಿಕೆ ಪರಸ್ಪರ ಉತ್ತಮ ಸಂಬಂಧ ಬೆಳಸಿಕೊಳ್ಳುವಿಕೆ ಇತರರ ಮನ ಒಪ್ಪಿಸಲು, ಕಲಹಗಳನ್ನು ಪರಿಹರಿಸಲು, ಸಂದಾನಮಾಡಲು, ಸಹಕಾರ ಮನೋಭಾವ ಬೆಳೆಸಲು ಮತ್ತು ಸಮೂಹಕಾರ್ಯಗಳನ್ನು ಉತ್ತೇಜಿಸಲು ಬಳಸುವ ಕೌಶಲಗಳು ಸಾಮಾಜಿಕ ಕೌಶಲಗಳಾಗಿವೆ. ಈ ರೀತಿಯ ಸಾಮಾಜಿಕ ಕೌಶಲಗಳು ವ್ಯಕ್ತಿಯ ಜೀವನದಲ್ಲಿ ಯಶಸ್ಸಿಗೆ ಕಾರಣವಾಗಿದ್ದು ಸಂವೇಗಾತ್ಮಕ ಬುದ್ಧಿಶಕ್ತಿಯ ಪ್ರಮುಖ ಘಟಕವಾಗಿದೆ.

## ಸಂವೇಗಾತ್ಮಕ ಬುದ್ಧಿಶಕ್ತಿಯ ಪ್ರಾಮುಖ್ಯತೆ (Importance of Emotional Intelligence)

ಸಂವೇಗಾತ್ಮಕ ಬುದ್ಧಿಶಕ್ತಿಯ ಪರಿಕಲ್ಪನೆ ಜಗತ್ತಿನಾದ್ಯಂತ ಪ್ರಚುರಗೊಳ್ಳುವಲ್ಲಿ ಹಾಗೂ ಇದರ ಪ್ರಾಮುಖ್ಯತೆಯನ್ನು ಅರಿಯುವುದಕ್ಕೆ ಕಾರಣರಾದವರೆಂದರೆ ಅಮೇರಿಕಾದ ಮನೋವಿಜ್ಞಾನಿ ಡಾ॥ ಡ್ಯಾನಿಯಲ್ ಗೋಲ್‌ಮನ್‌ರವರು. ಸಂವೇಗಾತ್ಮಕ ಬುದ್ಧಿಶಕ್ತಿಯ ಪ್ರಾಮುಖ್ಯತೆಯನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

- ಸಂವೇಗಾತ್ಮಕ ಬುದ್ಧಿಶಕ್ತಿಯು ವ್ಯಕ್ತಿಯ ಬುದ್ಧಿಶಕ್ತಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿದ್ದು, ಜೀವನದಲ್ಲಿನ ಯಶಸ್ಸಿಗೆ ಕಾರಣವಾಗಿದೆ. ಸಂವೇಗಾತ್ಮಕ ಬುದ್ಧಿಶಕ್ತಿ ಹೊಂದಿದ ವ್ಯಕ್ತಿಗಳು ಕೈಗೊಳ್ಳುವ ಎಲ್ಲಾ ಕೆಲಸ ಕಾರ್ಯಗಳಲ್ಲಿ ಯಶಸ್ಸು ಸಂಪಾದಿಸುತ್ತಾರೆ.
- ವ್ಯಕ್ತಿಯ ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಸೂಕ್ತ ತರಬೇತಿ ಹಾಗೂ ಶಿಕ್ಷಣದ ಮೂಲಕ ಹೆಚ್ಚಿಸಬಹುದಾಗಿದೆ. ಆ ಮೂಲಕ ಅವರು ಆರೋಗ್ಯಕರ, ತೃಪ್ತಿದಾಯಕ ಹೊಂದಾಣಿಕೆಯ ಜೀವನ ನಡೆಸಿ ಯಶಸ್ಸು ಕಾಣಬಹುದಾಗಿದೆ.
- ಮಕ್ಕಳ ಶೈಕ್ಷಣಿಕ ಪ್ರಗತಿಯು ಅವರ ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಅವಲಂಬಿಸಿದೆ. ಉತ್ತಮ ಸಂವೇಗಾತ್ಮಕ ಬುದ್ಧಿಶಕ್ತಿಹೊಂದಿದ ಮಕ್ಕಳು ಉತ್ತಮ ಶೈಕ್ಷಣಿಕ ಪ್ರಗತಿ ಹೊಂದುವರು.
- ಸಂವೇಗಾತ್ಮಕ ಬುದ್ಧಿಶಕ್ತಿಯು ತಾನು ತನ್ನೊಂದಿಗೆ ಹಾಗೂ ಇತರ ವ್ಯಕ್ತಿಗಳೊಂದಿಗೆ ಸೂಕ್ತ ರೀತಿಯಲ್ಲಿ ವ್ಯವಹರಿಸಲು ನೆರವಾಗುತ್ತದೆ.
- ಸಂವೇಗಾತ್ಮಕ ಬುದ್ಧಿಶಕ್ತಿಯು ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ನೆರವಾಗುತ್ತದೆ. ವ್ಯಕ್ತಿಗಳ ಸಂವೇಗಗಳನ್ನು ಉತ್ತೇಜಿಸುವಲ್ಲಿ, ಇತರರ ಮನೋವೇಗಗಳನ್ನು ಗುರುತಿಸುವಲ್ಲಿ, ಸಂವೇಗಗಳನ್ನು ವ್ಯವಸ್ಥೆಗೊಳಿಸುವಲ್ಲಿ, ಸಂಬಂಧಗಳನ್ನು ಹೊಂದುವಲ್ಲಿ ನೆರವಾಗುತ್ತದೆ.

ಕೇವಲ ಬೌದ್ಧಿಕ ಸಾಮರ್ಥ್ಯಗಳಿಂದ ವ್ಯಕ್ತಿಗಳು ಉದ್ಯೋಗ / ವೃತಿಯಲ್ಲಿ ಯಶಸ್ಸು ಕಾಣಲಾರರು ಹಾಗೂ ಹೊಂದಿಕೊಳ್ಳಲಾರರು. ಆದರೆ ಸಂವೇಗಾತ್ಮಕ ಬುದ್ಧಿಶಕ್ತಿ ಹೊಂದಿದವರು ತಮ್ಮ ಉದ್ಯೋಗ / ವೃತ್ತಿ ರಂಗದಲ್ಲಿ ಯಶಸ್ಸು ಕಾಣುವರು ಹಾಗು ಎಲ್ಲರೊಂದಿಗೆ ಹೊಂದಿಕೊಳ್ಳುವರು.

## ಸಂವೇಗಾತ್ಮಕ ಬುದ್ಧಿಶಕ್ತಿ ಸಂವರ್ಧನೆಯ ಕ್ರಮಗಳು ( Measures to Promote Emotional Intelligence)

- ವಿಶ್ವ ಆರೋಗ್ಯ ಸಂಸ್ಥೆಯವರು ಗುರುತಿಸಿರುವ 10 ಜೀವನ ಕೌಶಲ್ಯಗಳನ್ನು ಬೆಳೆಸುವ ಮೂಲಕ ಮಕ್ಕಳ ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಸಂವರ್ಧಿಸಬಹುದಾಗಿದೆ. ಜೀವನ ಕೌಶಲಗಳ ಅಂತಿಮ ಗುರಿಯು ಆತ್ಮಪ್ರಜ್ಞೆ, ಆತ್ಮಗೌರವ, ಇತರರನ್ನು ಒಪ್ಪಿಕೊಳ್ಳುವುದು ಮತ್ತು ಆರೋಗ್ಯಕರ ಜೀವನ ನಡೆಸುವುದಾಗಿದೆ. ಜೀವನ ಕೌಶಲಗಳ ಬಗ್ಗೆ ಅಧ್ಯಾಯ 5.7 ರಲ್ಲಿ ವಿವರಿಸಲಾಗಿದೆ
- ಮಕ್ಕಳಲ್ಲಿ ಯಾವುದೇ ಕೌಶಲ ಅಥವಾ ಜ್ಞಾನದ ಬೆಳವಣಿಗೆ ಸ್ವಾಭಾವಿಕವಾಗಿರಬೇಕು.
- ವಿದ್ಯಾರ್ಥಿಗಳ ಭಾವಾತ್ಮಕ ವರ್ತನೆಗಳ ಅಂತರ್ವೀಕ್ಷಣೆಗೆ ಅವಕಾಶ ಕಲ್ಪಿಸಬೇಕು.
- ಮಕ್ಕಳಲ್ಲಿ ಕೋಪ, ಭಯ, ಉದ್ವೇಗ, ಮಾನಸಿಕ ಒತ್ತಡಗಳು ಜ್ಞಾನಾತ್ಮಕ ಹಿನ್ನೆಡೆಗೆ ಕಾರಣವಾಗುತ್ತವೆ ಹೀಗಾಗಿ ಅವರ ಮಾನಸಿಕ ಒತ್ತಡ ನಿರ್ವಹಣೆಗೆ ತರಬೇತಿ ನೀಡಬೇಕು
- ಮಕ್ಕಳಿಗೆ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವಂತಹ ಮತ್ತು ಆತ್ಮಹತ್ಯಾ ಪ್ರವೃತ್ತಿಯನ್ನು ತಡೆಗಟ್ಟಲು ನೆರವಾಗುವಂತಹ ತರಬೇತಿ ಅಗತ್ಯ.
- ವಿದ್ಯಾರ್ಥಿಗಳು ಸಮುದಾಯ ಸೇವೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿ ಅವರಲ್ಲಿ ಸಹಾನುಭೂತಿ ಶಕ್ತಿಯನ್ನು ಬೆಳೆಸಬೇಕು.
- ಶಾಲಾ ಕಾಲೇಜುಗಳಲ್ಲಿ ಹಲವಾರು ಸಹಪಠ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಮಕ್ಕಳ ವ್ಯಕ್ತಿತ್ವ ವಿಕಾಸ ಮತ್ತು ಮೌಲ್ಯಗಳ ವೃದ್ಧಿಯಾಗುವಂತೆ ನೋಡಿಕೊಳ್ಳಬೇಕು.
- ಬೋಧನೆಯಲ್ಲಿ ಶಿಕ್ಷಕರು ವೈವಿಧ್ಯಮಯ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು.
- ಪೋಷಕರು ಹಾಗೂ ಶಿಕ್ಷಕರು ಮಾದರಿಯಾಗಿದ್ದು ಮಕ್ಕಳಲ್ಲಿ ಅಪೇಕ್ಷಿತಗುಣಗಳನ್ನು ಬೆಳೆಸುವಂತಾಗಬೇಕು.
- ಶಿಕ್ಷಕರು ಹಾಗೂ ಪೋಷಕರು ಮಕ್ಕಳ ಜ್ಞಾನಾತ್ಮಕ ಬೆಳವಣಿಗೆಗೆ ಮಾತ್ರ ಒತ್ತುಕೊಡದೆ ಜೀವನವನ್ನು ಯಶಸ್ವಿಯಾಗಿ ನಿರ್ವಹಿಸಲು ಅಗತ್ಯವಾಗುವಂತಹ ಸಂವೇಗಾತ್ಮಕ ಬುದ್ದಿಶಕ್ತಿ ಬೆಳೆಯಲು ಕ್ರಮ ಕೈಗೊಳ್ಳಬೇಕು.

## ಸಂವೇಗಾತ್ಮಕ ಬುದ್ಧಿಲಬ್ಧ (ಸಂವೇಗಾತ್ಮಕ ಬುದ್ಧಿಶಕ್ತಿ ಸೂಚ್ಯಾಂಕ)( Emotional Quotient –EQ)

ವ್ಯಕ್ತಿಗಳ ಬೌದ್ಧಿಕ ಸಾಮರ್ಥ್ಯವನ್ನು ಬುದ್ಧಿಲಬ್ಧ (ಬುದ್ಧಿಶಕ್ತಿ ಸೂಚ್ಯಾಂಕ)ದ ಮೂಲಕ ಅಳೆಯುವಂತೆ, **ಸಂವೇಗಾತ್ಮಕ ಬುದ್ಧಿಶಕ್ತಿ ಸೂಚ್ಯಾಂಕದ(EQ)** ಮೂಲಕ ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಅಳೆಯಲಾಗುತ್ತದೆ.

**"ವ್ಯಕ್ತಿಯ ಜೀವನದ ನಿರ್ದಿಷ್ಟ ಅವಧಿಯಲ್ಲಿ ಅವನು ಹೊಂದಿರುವ ಸಂವೇಗಾತ್ಮಕ ಸಾಮರ್ಥ್ಯಗಳ ಸಾಪೇಕ್ಷ ಮಟ್ಟವನ್ನು ನಿರ್ಧರಿಸುವ ಮಾನವೇ ಸಂವೇಗಾತ್ಮಕ ಬುದ್ಧಿಶಕ್ತಿ ಸೂಚ್ಯಾಂಕವಾಗಿದೆ."**

ಒಬ್ಬ ವ್ಯಕ್ತಿಯ ಸಂವೇಗಾತ್ಮಕ ಬುದ್ಧಿಶಕ್ತಿಯ ಮಟ್ಟವನ್ನು ನೈಜ ಜೀವನದ ಸನ್ನಿವೇಶಗಳ ಮುಖಾಂತರ ಅಥವಾ ಸಂವೇಗಾತ್ಮಕ ಬುದ್ಧಿಶಕ್ತಿ ಪರೀಕ್ಷಣಗಳ ಮೂಲಕ ನಿರ್ಧರಿಸಲಾಗುತ್ತದೆ.

ಉದಾ: 1. ಮೇಯರ್–ಸಾಲೋವೈ–ಕಾರುಸೊ ಸಂವೇಗಾತ್ಮಕ ಬುದ್ಧಿಶಕ್ತಿ ಪರೀಕ್ಷೆ.(**MSCEIT)**

2. ಹೈಡ್ ಮತ್ತು ಪೈತ್ ಸಂವೇಗಾತ್ಮಕ ಬುದ್ಧಿಶಕ್ತಿ ಪರೀಕ್ಷೆ.

## 2.4 ಸೃಜನಶೀಲತೆ –ಪರಿಕಲ್ಪನೆ – ಸೃಜನಶೀಲತೆಯ ಮೇಲೆ ಪ್ರಭಾವ ಬೀರುವ ಅಂಶಗಳು

## (Creativity-Concept-Factors influencing Creativity)

ಸೃಜನಶೀಲತೆ ಎಂಬುದು ಹೊಸವಸ್ತುಗಳನ್ನು ಸೃಷ್ಟಿಸುವ ಇಲ್ಲವೇ ಉತ್ಪಾದಿಸುವ ವಿಶಿಷ್ಟ ಕಾರ್ಯವಿಧಾನವಾಗಿದೆ. ಪ್ರತಿಯೊಬ್ಬ ವ್ಯಕ್ತಿ ಸೃಜನಶೀಲನಾಗಿದ್ದು ಇದು ವ್ಯಕ್ತಿಯಿಂದ ವ್ಯಕ್ತಿಗೆ ವಿಭಿನ್ನವಾಗಿರುತ್ತದೆ. ಒಂದು ರಾಷ್ಟ್ರದಲ್ಲಿನ ವಿವಿಧ ಕ್ಷೇತ್ರಗಳ ಅಭಿವೃದ್ಧಿ ಮತ್ತು ಪ್ರಗತಿ ಆ ರಾಷ್ಟ್ರದಲ್ಲಿರುವ ಸೃಜನಶೀಲ ವ್ಯಕ್ತಿಗಳನ್ನು ಅವಲಂಭಿಸಿರುತ್ತದೆ. ಅಂತೆಯೇ ಸೃಜನಶೀಲರನ್ನು ರಾಷ್ಟ್ರದ ಮಾನವ ಸಂಪನ್ಮೂಲ ಎಂದು ಗುರುತಿಸಲಾಗಿದೆ.

ಪಾಲಕರು, ಶಿಕ್ಷಕರು ಹಾಗೂ ಸಮಾಜ ಮಕ್ಕಳಲ್ಲಿರುವ ಸೃಜನಾತ್ಮಕ ಸಾಮರ್ಥ್ಯಗಳನ್ನು ಪೋಷಿಸಿ ಗರಿಷ್ಟ ಪ್ರಮಾಣಕ್ಕೆ ಬೆಳೆಸುವ ಮೂಲಕ ರಾಷ್ಟ್ರದ ಪ್ರಗತಿಗೆ ಕಾರಣವಾಗಬೇಕಾಗಿದೆ. ಆದ್ದರಿಂದ ಸೃಜನಶೀಲತೆಯ ಅರ್ಥ, ಪ್ರಕ್ರಿಯೆ ಮತ್ತು ಇದನ್ನು ಅಭಿವೃದ್ಧಿಪಡಿಸುವ ಸೂಕ್ತ ಜ್ಞಾನ ಹೊಂದುವುದು ಅಗತ್ಯ.

**2.4.1 ಸೃಜನಶೀಲತೆ ಪರಿಕಲ್ಪನೆ :** ಸೃಜನಶೀಲತೆ ಈ ಪದವು ಆಂಗ್ಲಭಾಷೆಯ **'Creativity'** ಎಂಬ ಈ ಪದದ ಸಮಾನ ಪದವಾಗಿದ್ದು ಇದು ಲ್ಯಾಟಿನ್ ಭಾಷೆಯ **'Creare'** ಎಂಬ ಪದದಿಂದ ಉಗಮವಾಗಿದ್ದು, ಇದರ ಅರ್ಥ **'Create'** ಸೃಷ್ಟಿಸು ಎಂದಾಗುತ್ತದೆ. ಸಾಮಾನ್ಯವಾಗಿ ಸೃಜನಶೀಲತೆ ಎಂಬುದು ವಸ್ತುಗಳಲ್ಲಿ ಅಥವಾ ವಿಚಾರಗಳಲ್ಲಿ ಹೊಸ ಸಂಬಂಧವನ್ನು ಹುಡುಕುವ ಅಥವಾ ಅಭಿವ್ಯಕ್ತಿಗೊಳಿಸುವುದಾಗಿದೆ. ಇದನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಲಾಗುತ್ತದೆ.

### ವ್ಯಾಖ್ಯೆಗಳು

**"ಸೃಷ್ಟಿಸುವುದು ಎಂದರೆ ಹೊಸದನ್ನು ಉತ್ಪಾದಿಸುವದು, ಹೊಸತನವನ್ನು ಅಸ್ತಿತ್ವಕ್ಕೆ ತರುವುದು, ವೈಚಾರಿಕತೆಯ ಬಲೆ ಅಥವಾ ಕಲ್ಪನೆಯಾಗಿದೆ. ಸೃಜನಾತ್ಮಕತೆ ಎಂದರೆ ಬೌದ್ಧಿಕ ಅವಿಷ್ಕಾರಗಳಾಗಿವೆ".** –ವೆಬಸ್ಟರ್ ನಿಘಂಟು

**"ಸೃಜನಶಿಲತೇಯು ಎಲ್ಲರಲ್ಲಿಯೂ ಇರಬಹುದಾದ ಸಾಮಾನ್ಯ ಸಾಮರ್ಥ್ಯ. ಇದು ವ್ಯಕ್ತಿಗತವಾದದ್ದು. ಪ್ರತಿಯೊಬ್ಬ ಆರೋಗ್ಯವಂತ ವ್ಯಕ್ತಿ ವಿವಿಧ ಪ್ರಮಾಣದಲ್ಲಿ ಸೃಜನಶೀಲತೆ ತೋರುವವನು".** –ಎನ್‌ಸೈಕ್ಲೋಪಿಡಿಯಾ ಆಫ್ ಎಜ್ಯುಕೇಶನ್

**"ಹೊಸ ವಿಚಾರ ಇಲ್ಲವೇ ವಸ್ತುವನ್ನು ಸೃಷ್ಟಿಸುವ ಪ್ರಕ್ರಿಯೆಯೇ ಸೃಜನಶೀಲತೆ".**–ವಿಲ್‌ಸನ್, ಗಿಲ್‌ಫೋರ್ಡ್, ಮತ್ತು ಕ್ರಿಸ್ಟನ್‌ಸನ್

**"ಸೃಜನಶೀಲತೆ ಎಂಬುದು ಪೂರ್ಣವಾಗಿ ಇಲ್ಲವೇ ಭಾಗಶಃ ನವೀನ ಅನನ್ಯತೆಯ ಉತ್ಪನ್ನವಾಗಿದೆ".**

–ಸ್ಟ್ಯಾಗ್‌ನರ್ ಮತ್ತು ಕಾರ್‌ವಾಸ್ಕಿ

**"ಸೃಜನಶೀಲತೆಯು ಒಂದು ಪ್ರಕ್ರಿಯೆಯಾಗಿದ್ದು, ನವೀನ ಕಾರ್ಯಕ್ಕೆ ಕಾರಣವಾಗುತ್ತದೆ".** – ಸ್ಟರ್ನ

**"ಸೃಜನಶೀಲತೆ ಎಂಬುದು ಸಾಮಾಜಿಕ ಮೌಲ್ಯ ಹೊಂದಿರುವ ನವೀನ ಉತ್ಪಾದನೆಗೆ ಕಾರಣವಾಗುವ ಚಟುವಟಿಕೆಯಾಗಿದೆ".**

– ಡೇ ಮತ್ತು ಬೆರಿಲಿನ್

## ಸೃಜನಶೀಲತೆಯ ಮೇಲೆ ಪ್ರಭಾವ ಬೀರುವ ಅಂಶಗಳು (Factors affecting creativity)

ಸೃಜನಶೀಲತೆಯ ಮೇಲೆ ಪ್ರಭಾವ ಬೀರುವ ಅಂಶಗಳೆಂದರೆ, ಜ್ಞಾನಾತ್ಮಕ ಅಂಶಗಳು, ವ್ಯಕ್ತಿತ್ವದ ಅಂಶಗಳು ಮತ್ತು ಪರಿಸರದ ಅಂಶಗಳು.

### A ) ಜ್ಞಾನಾತ್ಮಕ ಅಂಶಗಳು (Cognitive factors)

ಸೃಜನಶೀಲತೆಯ ಮೇಲೆ ಪ್ರಭಾವ ಬೀರುವ ಜ್ಞಾನಾತ್ಮಕ ಅಂಶಗಳೆಂದರೆ ನಿರರ್ಗಳತೆ, ಸ್ವಂತಿಕೆ, ನಮ್ಯತೆ ಮತ್ತು ವಿಷದೀಕರಿಸುವುದು.

- **ನಿರರ್ಗಳತೆ (Fluency)-** ಅಡೆತಡೆ ಇಲ್ಲದೆ ಪ್ರತಿಕ್ರಯಿಸುವುದನ್ನು ನಿರರ್ಗಳತೆ ಎನ್ನುವರು. ಇದೊಂದು ಮಾನಸಿಕ ಪ್ರಕ್ರಿಯೆಯಾಗಿದ್ದು ನಿರರ್ಗಳವಾಗಿ ವಿಚಾರಗಳು ಹರಿಯುತ್ತವೆ. ಉದಾಹರಣೆಗೆ: ಕಥೆ ಇಲ್ಲವೇ ಚಿತ್ರಕ್ಕೆ ಯುಕ್ತವಾದ ಶೀರ್ಷಿಕೆಯನ್ನು ಸೂಚಿಸುವುದು, ಪದಗಳು ಅಥವಾ ವಾಕ್ಯಗಳ ಜೋಡಣೆಯಿಂದ ಸಂಕೀರ್ಣ ವಿಚಾರಗಳನ್ನು ಉತ್ಪತ್ತಿಮಾಡುವುದು, ಚಿತ್ರಬರೆಯುವುದು, ಶಿಲ್ಪ ರಚಿಸುವುದು ಇತ್ಯಾದಿ.
- **ಸ್ವಂತಿಕೆ ( Originality)-** ಹೊಸದಾದ ಮತ್ತು ಪ್ರಯೋಜನಕರ ವಿಚಾರಗಳ ಉತ್ಪಾದನೆಯು ಸ್ವಂತಿಕೆ ಎನಿಸುವುದು. ಇದು ಹಲವಾರು ಮಾರ್ಗಗಳಲ್ಲಿ, ಹಲವಾರು ವಿಧಗಳಲ್ಲಿ ಅಭಿವ್ಯಕ್ತಿಗೊಳ್ಳುವುದು.
- **ಬಹುಮುಖ ಚಿಂತನೆ ( Divergent Thinking)-** ಒಂದು ವಿಷಯದ ಕುರಿತಾಗಿ ವಿವಿಧ ಆಯಾಮಗಳಿಂದ ಆಲೋಚಿಸುವದೇ ಬಹುಮುಖ ಚಿಂತನೆಯಾಗಿದೆ. ಇದು ಸೃಜನಶೀಲತೆಗೆ ಅವಶ್ಯವಾಗಿದೆ.
- **ನಮ್ಯತೆ (Flexibility)-** ಇದು ದತ್ತ ಮಾಹಿತಿಯನ್ನು ರೂಪಾಂತರಿಸುವುದು, ಅದನ್ನು ವ್ಯಾಖ್ಯಾನಿಸುವುದು, ಅಥವಾ ಪುನರ್ ವ್ಯಾಖ್ಯಾನಿಸಿ ಹೊಸ ಉಪಯೋಗಗಳಿಗೆ ಅಳವಡಿಸುವ ಸಾಮರ್ಥ್ಯವಾಗಿದೆ. ಸನ್ನಿವೇಶದಲ್ಲಿನ ಇತರೆ ಸಾಧ್ಯತೆಗಳನ್ನು ಪರೀಕ್ಷಿಸುವ ಸಾಮರ್ಥ್ಯ. ಇದು ನಿರರ್ಗಳತೆಗೆ ಮತ್ತು ಸ್ವಂತಿಕೆಗೆ ತುಂಬಾ ಹತ್ತಿರವಾದ ಪರಿಕಲ್ಪನೆಯಾಗಿದೆ.
- **ವಿಸ್ತ್ರುತಗೊಳಿಸುವಿಕೆ (Elobaration) (ವಿಷದೀಕರಿಸುವಿಕೆ)** ದತ್ತ ವಿಚಾರಗಳಲ್ಲಿರುವ ನಿಹಿತಾರ್ಥಗಳನ್ನು ಹೊರತೆಗೆಯುವ ಮತ್ತು ದತ್ತಪ್ರಚೋದನೆ, ಸನ್ನಿವೇಶಕ್ಕೆ ಹೊಸವಿಚಾರಗಳನ್ನು ಸೇರಿಸಿ ಅದನ್ನು ಮತ್ತಷ್ಟು ಅರ್ಥಪೂರ್ಣವಾಗಿ ಮಾಡುವ ಸಾಮರ್ಥ್ಯಕ್ಕೆ ವಿಸ್ತ್ರುತಗೊಳಿಸುವಿಕೆ ಇಲ್ಲವೇ ವಿಷದೀಕರಿಸುವಿಕೆ ಎನ್ನುವರು.

  ಉದಾ: ಕಥೆ ಪೂರ್ಣಗೊಳಿಸುವಿಕೆ, ಪ್ರಬಂಧ ರಚನೆ, ಚಿತ್ರ ಪೂರ್ಣಗೊಳಿಸುವಿಕೆ ಇತ್ಯಾದಿ.

### B) ವ್ಯಕ್ತಿತ್ವದ ಅಂಶಗಳು ( Personality factors)

ಸೃಜನಶೀಲತೆಯ ಮೇಲೆ ಪ್ರಭಾವ ಬೀರುವ ವ್ಯಕ್ತಿತ್ವದ ಅಂಶಗಳಲ್ಲಿ ಅಭಿಪ್ರೇರಣೆ ಅತ್ಯಂತ ಮಹತ್ವವಾದ ಅಂಶವಾಗಿದೆ. ಆಸಕ್ತಿ, ಕುತೂಹಲ, ಮೋಹ, ಅರ್ಪಣಾಮನೋಭಾವ ಮತ್ತು ಉತ್ಸಾಹ ಮುಂತಾದ ಅಭಿಪ್ರೇರಣಾ ಅಂಶಗಳ ಜೊತೆಗೆ ಕಾರಣವಾಗುವ ವ್ಯಕ್ತಿತ್ವದ ಇತರ ಅಂಶಗಳೆಂದರೆ ಅವಿರತ ಪ್ರಯತ್ನ, ಧೈರ್ಯ, ಅನುಭೋಗಗಳಿಗೆ ಮುಕ್ತ ಅವಕಾಶ ಮತ್ತು ಅಭಿವೃದ್ಧಿ ಹೊಂದಬೇಕೆಂಬ ಆಸೆ. ಕೆಲವೊಮ್ಮೆ ಪ್ರಬಲ ಭಾವಾತ್ಮಕ ಅಂಶಗಳು ಸೃಜನಶೀಲತೆಯ ಮೇಲೆ ವ್ಯತಿರಿಕ್ತ, ಋಣಾತ್ಮಕ ಪ್ರಭಾವ ಬೀರುತ್ತವೆ ಇಲ್ಲವೇ ತಡೆ ಒಡ್ಡುತ್ತವೆ. ಸಮಯದ ಒತ್ತಡ, ಪರೀಕ್ಷೆಯ ಒತ್ತಡ, ಅನುತೀರ್ಣತೆಯ ಅನುಭವಗಳು, ಆಶಾಭಂಗ ಮುಂತಾದವುಗಳು ಸೃಜನಶೀಲತೆಯನ್ನು ಅವಿರೋಧಿಸುತ್ತವೆ.

### C) ಪರಿಸರದ ಅಂಶಗಳು (Environmental factors)

ಪರಿಸರದ ಅಂಶಗಳನ್ನು ಪ್ರಚೋದಿಸುವ, ಪೋಷಿಸುವ, ಸ್ವಾಭಾವಿಕ ಅಡ್ಡಿಯನ್ನುಂಟುಮಾಡುವ ಮತ್ತು ಹಾನಿಕಾರಕ ಅಂಶಗಳೆಂದು ಗುರುತಿಸಬಹುದು. ಮಕ್ಕಳಲ್ಲಿ ಸೃಜನಶೀಲತೆಯನ್ನು ಬೆಳೆಸುವಲ್ಲಿ ಪರಿಸರದ ಅಂಶಗಳು ತುಂಬಾ ಪ್ರಭಾವಬೀರುತ್ತವೆ. ಅವರ ಸೃಜನಶೀಲತೆಯನ್ನು ಪ್ರಚೋದಿಸುವ, ಪೋಷಿಸುವ ಕಾರ್ಯವನ್ನು ಶಾಲೆ, ಕಾಲೇಜುಗಳು ಹಾಗೂ ಕುಟುಂಬ ಮಾಡಬೇಕು. ಸ್ವತಂತ್ರವಾದ ವಾತಾವರಣ, ಮುಕ್ತ ಪರಿಸರ, ಪ್ರಶ್ನಿಸುವುದಕ್ಕೆ ಅವಕಾಶವಿರುವುದು ಮುಂತಾದವುಗಳು ಸೃಜನಾತ್ಮಕ ಸಾಮರ್ಥ್ಯಗಳ ಬೆಳವಣಿಗೆಯಲ್ಲಿ ಪ್ರಮುಖಪಾತ್ರ ವಹಿಸುತ್ತವೆ.

### 2.4.2 ಸೃಜನಶೀಲ ವ್ಯಕ್ತಿಯ ಲಕ್ಷಣಗಳು(Characteristics of a creative Individual)

1. ಸೃಜನಾತ್ಮಕ ಮಗು ವಿಚಾರ ಮತ್ತು ಅಭಿವ್ಯಕ್ತಿಯಲ್ಲಿ ಸ್ವಂತಿಕೆ ಹೊಂದಿರುವನು.
2. ಅವನು ಗರಿಷ್ಟ ಪ್ರಮಾಣದ ಅರಿವು, ಕುತೂಹಲ ಮತ್ತು ಏಕಾಗ್ರತೆ ಹೊಂದಿರುವನು.
3. ಅವನು ತನ್ನ ಪರಿಸರ ಕುರಿತು ಹೆಚ್ಚು ಹೆಚ್ಚು ತಿಳಿದುಕೊಳ್ಳುವ ಕುತೂಹಲ ಹೊಂದಿರುವನು.
4. ಸೃಜನಶೀಲ ಮಗು ತನ್ನ ನಂಬಿಕೆಗಳು ಮತ್ತು ಮೌಲ್ಯಗಳಲ್ಲಿ ದೃಡ ವಿಶ್ವಾಸ ಹೊಂದಿರುವನು.
5. ಇವನು ಕುತೂಹಲ ಹಾಗೂ ಸಂಶೋಧನಾತ್ಮಕ ಗುಣ ಹೊಂದಿರುವನು.
6. ವಿವಿಧ ಸಮಸ್ಯೆಗಳ ಕುರಿತು ಸ್ವತಂತ್ರವಾಗಿ ಆಲೋಚನೆ ಮಾಡುವನು.
7. ಇವನು ಅಸ್ಪಷ್ಟತೆ ಮತ್ತು ತೆಗಳುವಿಕೆಯನ್ನು ಸಹಿಸಿಕೊಳ್ಳುವನು.
8. ಇವನು ಮಹತ್ವಾಕಾಂಕ್ಷೆಯುಳ್ಳವನು ಮತ್ತು ಸಮಸ್ಯೆಗಳಿಗೆ ಗರಿಷ್ಟ ಸಂವೇದನಾಶಿಲತೆ ಹೊಂದಿರುವನು.
9. ಇವನು ಆಲೋಚನೆ ಗ್ರಹಿಕೆ ಮತ್ತು ಕಾರ್ಯವಿಧಾನದಲ್ಲಿ ನಮ್ಯತೆಯ ಗುಣ ಹೊಂದಿರುವನು.
10. ಇವನು ವಿಷದಿಕರಿಸುವ ಮತ್ತು ಸವಿವರವಾಗಿ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಹೊಂದಿರುವನು.
11. ನಿರರ್ಗಳವಾಗಿ ಅಭಿವ್ಯಕ್ತಿಗೊಳಿಸುವ ಸಾಮರ್ಥ್ಯ ಹೊಂದಿರುವನು.
12. ಇವನಲ್ಲಿ ಗರಿಷ್ಟ ಮಟ್ಟದ ಸೌಂದರ್ಯೋಪಾಸಕ ಮೌಲ್ಯಗಳಿರುವವು.
13. ಇವನು ಸಮಸ್ಯೆಗಳನ್ನು ಪರಿಹರಿಸುವಾಗ ಒಳನೋಟ ಪಡೆಯುತ್ತಾನೆ.
14. ಸಮಸ್ಯೆಗಳಿಗೆ ಮಾಮೂಲು ಪರಿಹಾರಗಳನ್ನು ಒಪ್ಪಿಕೊಳ್ಳುವದಿಲ್ಲ.
15. ಗಂಡಾಂತರಗಳನ್ನು ಎದುರಿಸಲು ಸಿದ್ದನಿದ್ದು ಅವುಗಳನ್ನು ಎದುರಿಸುವ ಸಾಮರ್ಥ್ಯ ತೊರುವನು.
16. ಭವಿಷ್ಯದ ಸಮಸ್ಯೆಗಳ ಕುರಿತು ದೂರ ದೃಷ್ಟಿ ಹೊಂದಿರುವನು.
17. ಭವಿಷ್ಯದಲ್ಲಿ ಎದುರಾಗುವ ಸಮಸ್ಯೆಗಳನ್ನು ಗ್ರಹಿಸಿ ಸ್ಪಂದಿಸುವನು.
18. ಸೃಜನಶೀಲ ಮಗು ಯಾವಾಗಲು ನವೀನ ವಿಚಾರಗಳಿಂದ ತುಂಬಿರುವನು.
19. ಅವನು ವಸ್ತುಗಳನ್ನು, ಶಬ್ದಗಳನ್ನು, ಅಥವಾ ವಿಚಾರಾಂಶಗಳನ್ನು ನವಿನ ರೀತಿಯಲ್ಲಿ ಉಪಯೋಗಿಸುವನು.
20. ಅವನಲ್ಲಿ ಗರಿಷ್ಟ ಪ್ರಮಾಣದ ಕುತುಹಲವಿದ್ದು ಹಲವಾರು ಪ್ರಶ್ನೆಗಳನ್ನು ಕೇಳುವನು.
21. ಭಿನ್ನ ಭಿನ್ನ ವಿಚಾರ ಸಾಮರ್ಥ್ಯ ಹೊಂದಿರುವನು.
22. ತನಗೆ ಇಷ್ಟವಾದ ಕ್ಷೇತ್ರದಲ್ಲಿ ವಿಶಿಷ್ಟ ಕೊಡುಗೆ ನೀಡಬಲ್ಲನು ಉದಾ: ಸ್ವಂತ ಕಥೆ, ನಾಟಕ, ಪಧ್ಯ ಇಲ್ಲವೇ ಚಿತ್ರಗಳನ್ನು ಸೃಷ್ಟಿಸುವನು.

### 2.4.3 ಸೃಜನಶೀಲತೆ ಪೋಷಿಸುವ ಕ್ರಮಗಳು(Measures to foster creativity)

ಸೃಜನಶೀಲತೆಯು ಸಹಜವಾಗಿ ಹುಟ್ಟಿನಿಂದಲೆ ವಿಶೇಷ ಕಲ್ಪನಾ ಶಕ್ತಿ ಹೊಂದಿರುವ ಪ್ರತಿಭಾವಂತ ವ್ಯಕ್ತಿಗಳಿಗೆ ಮಾತ್ರ ಸಿಮಿತವಾದುದ್ದಲ್ಲ. ಪ್ರತಿಯೊಬ್ಬ ವಕ್ತಿಯಲ್ಲಿಯು ಸೃಜನಶೀಲತೆಯ ಸಾಮರ್ಥ್ಯ ಇರುವುದು. ಸೃಜನಶೀಲತೆಗೆ ಮುಖ್ಯವಾದ ಅಂಶವೆಂದರೆ ಹೊಸ ಸಾಧ್ಯತೆಗಳ ಕುರಿತು ನಮ್ಯತೆ ಮತ್ತು ಮುಕ್ತತೆ ಹೊಂದಿರುವುದಾಗಿದೆ. ಮನೋವಿಜ್ಞಾನಿಗಳು ಸೃಜನಶೀಲತೆಯನ್ನು ಪೋಷಿಸುವ ಹಲವಾರು ತಂತ್ರಗಳನ್ನು ಸೂಚಿಸಿರುವರು ಇದನ್ನು ಪೋಷಿಸುವಲ್ಲಿ ಈ ಕೆಳಗೆ ನಮೂದಿಸಿದ ಕ್ರಮಗಳು ಮಹತ್ವದಾಗಿವೆ.

1) **ನಮ್ಯತೆ –** ನಮ್ಯತೆ ಎಂಬುದು ನಾವು ಈಗಾಗಲೇ ಹೊಂದಿರುವ ಯಾಂತ್ರಿಕ ಆಲೋಚನಾ ಸರಣಿಯಲ್ಲಿ ಮುಂದುವರಿಯದೆ ಹೊಸ ವಿನ್ಯಾಸದಲ್ಲಿ ಆಲೋಚಿಸುವಂತೆ ಮಾಡುವ ಕೌಶಲವಾಗಿದೆ. ನಮ್ಯತೆಯು ಸೃಜನಶೀಲತೆಯ ಮೊದಲ ಹಂತವಾಗಿದ್ದು ಇದು ಸೃಜನಶೀಲತೆಯ ಆಧಾರವಾಗಿದೆ. ಸೃಜನಶೀಲ ವ್ಯಕ್ತಿಗಳು ನಮ್ಯತೆಯ ಗುಣ ಹೊಂದಿರುವದು ಅಗತ್ಯ.

2) **ಹೊಸ ಸಾಧ್ಯತೆಗಳ ಕುರಿತು ತೆರೆದ ಮನಸ್ಸಿನವರಾಗಿರುವುದು–** ಸೃಜನಶೀಲನಾಗಿರಲು ವ್ಯಕ್ತಿಯು ಹೊಸ ಸಾಧ್ಯತೆಗಳ ಕುರಿತು ತೆರೆದ ಮನಸನ್ನು ಹೊಂದಿರುವುದು ಅಗತ್ಯ. ಹೊಸ ಕಲ್ಪನೆ ಹೊಂದಲು ಹಾಗೂ ಯಾವುದೇ ಸಮಸ್ಯೆಯನ್ನು ಪರಿಹರಿಸುವಲ್ಲಿ ನವೀನ ತಂತ್ರಗಳನ್ನು ಉಪಯೋಗಿಸಲು ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಶಾಲೆಗಳಲ್ಲಿ ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳಲು ಮತ್ತು ಹೊಸಕಲ್ಪನೆಗಳನ್ನು ಅಭಿವೃದ್ಧಿ ಪಡಿಸಲು ಪೂರಕವಾದ ವಾತಾವರಣ ಕಲ್ಪಿಸಬೇಕು.

3) **ಬುದ್ಧಿಮಂಥನ(ಮನಮಂಥನ) ತಂತ್ರ–** ಆಸ್‌ಬಾರ್ನ್‌ರವರು ಸೃಜನಶೀಲತೆಯನ್ನು ಪೋಷಿಸುವಲ್ಲಿ ಬುದ್ಧಿಮಂಥನ ತಂತ್ರವನ್ನು ಅಭಿವೃದ್ಧಿ ಪಡಿಸಿರುವರು. ಬುದ್ಧಿಮಂಥನ ಎಂದರೆ ಬೌದ್ಧಿಕ ಸಾಮರ್ಥ್ಯಗಳನ್ನು ಉಪಯೋಗಿಸಿ ತಮಗೆ ಸಾಧ್ಯವಾದಷ್ಟು ವಿಚಾರಗಳನ್ನು ಉತ್ಪಾದಿಸುವ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದೇ ಬುದ್ಧಿಮಥನವಾಗಿದೆ. ಇಲ್ಲಿ ಒಂದು ಸಮಸ್ಯೆಗೆ ಪ್ರತಿಯೊಬ್ಬ ವ್ಯಕ್ತಿ ಪರಿಹಾರವನ್ನು ಸೂಚಿಸುವಂತೆ ಕೆಳಲಾಗುತ್ತದೆ. ವ್ಯಕ್ತಿಗಳು ಅಸಾಮಾನ್ಯ ರೀತಿಯಲ್ಲಿ ಸ್ವತಂತ್ರವಾಗಿ ವೈವಿಧ್ಯಮಯವಾಗಿ ಸಮಸ್ಯೆ ಪರಿಹರಿಸಲು ಆಲೋಚಿಸಿ ಪ್ರತಿಕ್ರಯಿಸುವರು.

4) **ಮನೋವೈಜ್ಞಾನಿಕ ಸ್ವಾತಂತ್ರ್ಯ ಮತ್ತು ರಕ್ಷಣೆ–** ಕಾರ್ಲ ರೋಜರ್ಸ್‌ರವರ ಪ್ರಕಾರ ಮನೋವೈಜ್ಞಾನಿಕ ಸ್ವಾತಂತ್ರ್ಯ ಮತ್ತು ರಕ್ಷಣೆ ಸೃಜನಶೀಲತೆಯ ಉಗಮಕ್ಕೆ ಅತ್ಯವಶ್ಯಕ. ಅನೇಕ ಸಂದರ್ಭಗಳಲ್ಲಿ ಶಿಕ್ಷಕರು ಮತ್ತು ಪಾಲಕರು ಸಾಮಾನ್ಯ ಪ್ರತಿಕ್ರಿಯೆಗಳನ್ನು ಮಕ್ಕಳಿಂದ ನಿರಿಕ್ಷಿಸುವ ಮೂಲಕ ಅವರ ಸೃಜನಾತ್ಮಕತೆಯನ್ನು ನಾಶ ಮಾಡುತ್ತಾರೆ. ಕಾರಣ ಒಂದು ಸನ್ನಿವೇಶಕ್ಕೆ ಪ್ರತಿಕ್ರಯಿಸುವಲ್ಲಿ ಮಕ್ಕಳಿಗೆ ಸಾಕಷ್ಟು ಸ್ವಾತಂತ್ರ ನೀಡಬೇಕು. ಮಕ್ಕಳು ಉತ್ತಮ ಮಾನಸಿಕ ಆರೋಗ್ಯ ಹೊಂದಿರುಬೇಕು. ಇದರಿಂದ ತಮ್ಮ ವೇಳೆಯನ್ನು ಸೃಜನಾತ್ಮಕ ಚಟುವಟಿಕೆಗಳನ್ನು ಕೈಗೊಳ್ಳಲು ಉಪಯೋಗಿಸುವರು.

5) **ಮೂಲಭೂತತೆಯನ್ನು ಉತ್ತೇಜಿಸುವುದು–** ಮಕ್ಕಳಲ್ಲಿರುವ ಮೂಲಭೂತತೆ ಯವುದೇ ವಿಧದಲ್ಲಿ ವ್ಯಕ್ತವಾದರು ಅದನ್ನು ಉತ್ತೇಜಿಸಬೇಕು. ಯಾಂತ್ರಿಕ ಕಲಿಕೆ, ಯಾಂತ್ರಿಕ ಸ್ಮೃತಿ ಸೃಜನಶೀಲತೆಯನ್ನು ಹಿಮ್ಮೆಟ್ಟಿಸುತ್ತದೆ. ಕಾರಣ ಸಾಧ್ಯವಾದಷ್ಟು ಇದನ್ನು ತಡೆಯುವುದು ಸೂಕ್ತ.

6) **ವಿಸ್ತರಿಸುವುದು–** ವಿವರವಾದ ಮಾಹಿತಿಯನ್ನು ಮೂಲವಿಚಾರಾಂಶಕ್ಕೆ ಸೇರಿಸುವ ಮೂಲಕ ಅದನ್ನು ಅರ್ಥಪೂರ್ಣ ಹಾಗೂ ಉಪಯುಕ್ತವಾಗುವಂತೆ ಮಾಡುವುದೆ ವಿಸ್ತರಣೆಯಾಗಿದೆ. ಈ ವಿಸ್ತರಣಾ ಪ್ರಕ್ರಿಯೆಯು ವ್ಯಕ್ತಿಗೆ ಗ್ರಹಿಸುವ, ವಿಚಾರಿಸುವ ಮತ್ತು ಸಮಸ್ಯಾ ಪರಿಹಾರ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಅವಕಾಶ ಕಲ್ಪಸುವುದು.

7) **ಹಿಂಜರಿಕೆ ಮತ್ತು ಅಂಜಿಕೆಯಿಂದ ದೂರ ಸರಿಯುವುದು–** ಅನೇಕ ಸಂದರ್ಭಗಳಲ್ಲಿ ಸೃಜನಾತ್ಮಕ ಅಭಿವ್ಯಕ್ತಿಯಲ್ಲಿ ಕೀಳರಿಮೆ ಮತ್ತು ಅಂಜಿಕೆಯಿಂದಾಗಿ ಹಿಂಜರಿಕೆ ಉಂಟಾಗುವುದು ಈ ರೀತಿಯ ಹಿಂಜರಿಕೆಗೆ ಕಾರಣಗಳನ್ನು ಗುರುತಿಸಿ ಹೋಗಲಾಡಿಸುವು ಅಗತ್ಯ.

8) **ಆತ್ಮ ವಿಶ್ವಾಸ–** ಸೃಜನಶೀಲತೆಯು ಆತ್ಮ ವಿಶ್ವಾಸದಿಂದ ಪೋಷಿಸಲ್ಪಡುತ್ತದೆ ಕಾರಣ ಕುಟುಂಬದಲ್ಲಿ ಪಾಲಕರು, ಶಾಲೆಯಲ್ಲಿ ಶಿಕ್ಷಕರು, ಮಕ್ಕಳಲ್ಲಿ ಆತ್ಮ ವಿಶ್ವಾಸ ಬೆಳೆಸುವ ಕಾರ್ಯಮಾಡಬೇಕು.

9) **ಅಭಿಪ್ರೇರಣೆ–** ಸೃಜನಶೀಲತೆಯನ್ನು ಪೋಷಿಸುವ ಅತ್ಯಂತ ಮಹತ್ವದ ಅಂಶವೆಂದರೆ ಅಭಿಪ್ರೇರಣೆ. ಶಾಲೆಯಲ್ಲಿ ಶಿಕ್ಷಕರು ಮಕ್ಕಳ ಆಸಕ್ತಿಗಳು, ಮನೋಧೋರಣೆಗಳು, ಸಾಮರ್ಥ್ಯಗಳು ಮತ್ತು ಹವ್ಯಾಸಗಳನ್ನು ಆಧರಿಸಿ ಅಭಿಪ್ರೇರಣೆಗೊಳಿಸಬೇಕು.

10) **ಸೃಜನಾತ್ಮಕ ಅಭಿವ್ಯಕ್ತಿಗೆ ಪೂರಕ ವಾತಾವರಣ ಕಲ್ಪಿಸುವುದು–** ಸೃಜನಾತ್ಮಕ ಆಲೋಚನೆ ಮತ್ತು ಅಭಿವ್ಯಕ್ತಿಗೆ ಪೂರಕವಾದ ವಾತಾವರಣ ಸೃಷ್ಟಿಸುವುದು ಅತ್ಯಗತ್ಯ. ಮಕ್ಕಳಲ್ಲಿ ಸೃಜನಶೀಲತೆಯನ್ನು ಉತ್ತೇಜಿಸಲು ಹಾಗೂ ಪೋಷಿಸಲು ಸಹಪಠ್ಯ ಚಟುವಟಿಕೆಗಳ ಮೂಲಕ ಸೃಜನಾತ್ಮಕ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸಬೇಕು.

11) **ಸಮುದಾಯದ ಸೃಜನಶೀಲ ಸಂಪನ್ಮೂಲವನ್ನು ಉಪಯೋಗಿಸಿಕೊಳ್ಳುವುದು -** ಮಕ್ಕಳು ಸೃಜನಾತ್ಮಕ ಚಟುವಟಿಕೆಗಳ ಕೇಂದ್ರಗಳಿಗೆ ಭೇಟಿನೀಡುವಂತೆ ಮಾಡಬೇಕು. ಇದರಿಂದ ಮಕ್ಕಳಿಗೆ ಸೃಜನಾತ್ಮಕ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರೇರೇಪಣೆ ದೊರೆಯುವುದು. ಸೃಜನಶೀಲ ವ್ಯಕ್ತಿಗಳನ್ನು ಅಂದರೆ, ಕಲಾವಿದರು, ವಿಜ್ಞಾನಿಗಳು ಮುಂತಾದ ಸೃಜನಶೀಲ ವ್ಯಕ್ತಿಗಳನ್ನು ಶಾಲೆಗೆ ಆಹ್ವಾನಿಸಬೇಕು. ಇದರಿಂದ ಮಕ್ಕಳಲ್ಲಿ ಸೃಜನಾತ್ಮಕ ಅಭಿವ್ಯಕ್ತಿ ಸಾಧ್ಯ.

12) **ಸೃಜನಾತ್ಮಕತೆಗೆ ಇರುವ ಅಡೆತಡೆಗಳನ್ನು ತೊಡೆದುಹಾಕುವುದು.-** ತಪ್ಪಾದ ಬೋಧನಾ ವಿಧಾನಗಳು, ಸಹಾನುಭೂತಿ ಇಲ್ಲದ ಉಪಚಾರ, ಯಾಂತ್ರಿಕ ಮತ್ತು ಸಂಕುಚಿತ ಕೆಲಸಗಳು, ವ್ಯಾಕುಲತೆ (ಆತಂಕ) ಆಶಾಭಂಗ, ಅಂಕಗಳಿಗೆ ಶಾಲೆಯಲ್ಲಿ ಅತಿಯಾದ ಮಹತ್ವ, ಶಿಕ್ಷಕರ ನಿರಂಕುಶಾಧಿಕಾರತ್ವ ಮನೋಭಾವ ಮುಂತಾದವುಗಳು ಮಕ್ಕಳ ಸೃಜನಶೀಲತೆಗೆ ತಡೆಯೊಡ್ಡುತ್ತವೆ. ಆದ್ದರಿಂದ ಇಂತಹ ಅಡೆತಡೆಗಳನ್ನು ತೆಗೆದುಹಾಕುವುದು ಸೃಜನಾತ್ಮಕತೆ ಪೋಷಿಸುವಲ್ಲಿ ಅಗತ್ಯ.

13) **ಪಠ್ಯಕ್ರಮವನ್ನು ಕ್ರಮಬದ್ಧವಾಗಿ ವ್ಯವಸ್ಥೆಗೊಳಿಸುವುದು–** ಮಕ್ಕಳಲ್ಲಿ ಸೃಜನಶೀಲತೆಯನ್ನು ಬೆಳೆಸುವಂತೆ ಪಠ್ಯಕ್ರಮವನ್ನು ವಿನ್ಯಾಸಗೊಳಿಸಬೇಕು. ಇದು ವಿದ್ಯಾರ್ಥಿಗಳ ವೈಯಕ್ತಿಕ ಅಗತ್ಯಗಳನ್ನು ಈಡೇರಿಸುವಂತೆ ರಚಿತವಾಗಬೇಕು. ಮಕ್ಕಳ ಸೃಜನಶೀಲತೆಯ ಪೊಷಣೆಗೆ ಅಗತ್ಯವಾದ ನಿರರ್ಗಳತೆ, ನಮ್ಯತೆ ಮತ್ತು ಮೂಲಭೂತತೆಯ ಗುಣಗಳನ್ನು ಬೆಳೆಸುವಂತೆ ಪಠ್ಯಕ್ರಮವನ್ನು ರಚಿಸಬೇಕು.

14) **ವಿಶೇಷ ತಂತ್ರಗಳನ್ನು ಉಪಯೋಗಿಸುವುದು –** ವಿಶೇಷ ತಂತ್ರಗಳಾದ ಬುದ್ಧಿಮಂಥನತಂತ್ರ, ವಿಸ್ತ್ರುತಗೊಳಿಸುವಿಕೆ, ಬೋಧನಾ ಮಾದರಿಗಳನ್ನು ಉಪಯೋಗಿಸುವುದು., ಆಟದ ಪದ್ಧತಿಯ ಬಳಕೆ, ಸಮಸ್ಯಾಪರಿಹಾರಪದ್ದತಿ, ರಸಪ್ರಶ್ನೆ ಮುಂತಾದವುಗಳು ಮಕ್ಕಳಲ್ಲಿ ಸೃಜನಶೀಲತೆಯನ್ನು ಬೆಳೆಸಲು ಉಪಯುಕ್ತವಾಗಿವೆ.

## 2.5 ಅಭಿಕ್ಷಮತೆ–ಪರಿಕಲ್ಪನೆ–ವಿಧಗಳು ಮತ್ತು ಪ್ರಾಮುಖ್ಯತೆ (Aptitude-Concept-Types and Importance)

ಸಂಗೀತ, ಚಿತ್ರಕಲೆ, ಗಣಿತ ಮುಂತಾದ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುವ ಸಾಮರ್ಥ್ಯ ವ್ಯಕ್ತಿಯಿಂದ ವ್ಯಕ್ತಿಗೆ ಹಾಗೂ ವ್ಯಕ್ತಿಗಳಲ್ಲಿಯೇ ವ್ಯತ್ಯಾಸವಿರುವುದನ್ನು ಕಾಣುತ್ತೇವೆ. ಏಕರೀತಿಯ ಪರಿಸ್ಥಿತಿ ಇದ್ದಾಗ್ಯೂ ಕೆಲವರು ಜ್ಞಾನ ಕೌಶಲ್ಯಗಳನ್ನು ಪಡೆಯುವ ಮೂಲಕ ಉತ್ತಮ ಸಾಧನೆ ತೋರುವ ಮೂಲಕ ಜೀವನದಲ್ಲಿ ಯಶಸ್ಸು ಗಳಿಸುವರು. ಇಂತಹ ವ್ಯಕ್ತಿಗಳು ಸಾಮಾನ್ಯ ಬುದ್ಧಿಶಕ್ತಿಯ ಜೊತೆಗೆ ಕೆಲವು ವಿಶೇಷ ಸಾಮರ್ಥ್ಯಗಳನ್ನು ಹೊಂದಿದ್ದು ಅವುಗಳ ಮೂಲಕ ನಿರ್ದಿಷ್ಟ ಕ್ಷೇತ್ರದಲ್ಲಿ ಯಶಸ್ವಿಯಾಗುವರು. ಇಂತಹ ವಿಶಿಷ್ಟ ಸಾಮರ್ಥ್ಯಗಳನ್ನು ಅಭಿಕ್ಷಮತೆ ಎನ್ನುವರು. ಅಭಿಕ್ಷಮತೆಯು ಎಲ್ಲಾ ವ್ಯಕ್ತಿಗಳು ವಿವಿಧ ಪ್ರಮಾಣದಲ್ಲಿ ಹೊಂದಿರುವ ವಿಶೇಷಗುಣ. ಒಂದು ಸೀಮಿತ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ತೋರುವಂತೆ ಮಾಡುವುದೇ ಅಭಿಕ್ಷಮತೆ.

### ಅಭಿಕ್ಷಮತೆಯ ಪರಿಕಲ್ಪನೆ ( Concept of Aptitude)

**ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ವ್ಯಕ್ತಿಯು ವಿಶಿಷ್ಟ ಸಾಧನೆ ತೋರಲು ಸಹಾಯಕವಾಗುವ, ಸಾಮಾನ್ಯ ಬುದ್ಧಿಶಕ್ತಿಯೊಂದಿಗೆ ವಿಶಿಷ್ಟ ಹುಟ್ಟು ಸಾಮರ್ಥ್ಯವನ್ನು ಹೊಂದಿರುವದೇ ಅಭಿಕ್ಷಮತೆಯಾಗಿದೆ.**

### ವ್ಯಾಖ್ಯೆಗಳು

**"ಅಭಿಕ್ಷಮತೆ ಎನ್ನುವುದು ವ್ಯಕ್ತಿ ಹೊಂದಿರುವ ಆಂತರಿಕ ಸಾಮರ್ಥ್ಯಗಳ ಸೂಚಕವಾಗಿದ್ದು, ಆತನು ಎಷ್ಟರ ಮಟ್ಟಿಗೆ ಒಂದು ನಿರ್ಧಿಷ್ಟ ಸಮಸ್ಯೆಯನ್ನು ಪರಿಹರಿಸಲು ಸಮರ್ಥನಾಗುತ್ತಾನೆ ಎಂಬುದನ್ನು ಸೂಚಿಸುತ್ತದೆ." –ಬಿಂಗ್‌ಹ್ಯಾಮ್**

**" ಜ್ಞಾನ, ಕುಶಲತೆ ಅಥವಾ ಸುಸಂಘಟಿತ ಅನುಕ್ರಿಯೆಗಳುಳ್ಳ ಒಂದು ವಿಶೇಷಗುಣ. ವ್ಯಕ್ತಿಯು ಇದಕ್ಕೆ ತಕ್ಕಂತೆ ತರಬೇತಿ ಯನ್ನು ಪಡೆದು ವೃತ್ತಿಯಲ್ಲಿ ಸಾಮರ್ಥ್ಯವನ್ನು ಪಡೆಯುವ ವಿಶಿಷ್ಟತೆಗೆ ಅಭಿಕ್ಷಮತೆ ಎನ್ನುವರು".** – ಪ್ರಾಕ್ಸಲರ್

**" ವ್ಯಕ್ತಿಯ ಭಾವಿ ಸಾಮರ್ಥ್ಯಗಳನ್ನು ಸೂಚಿಸುವ ಪ್ರಸಕ್ತ ಸ್ಥಿತಿಯೇ ಅಭಿಕ್ಷಮತೆ".** – ಪ್ರಾಕ್ಸಲರ್

**" ಒಂದು ನಿಧಿಷ್ಟ ಜ್ಞಾನ, ಕುಶಲತೆ ಅಥವಾ ಸುಸಂಘಟಿತ ಅನುಕ್ರಿಯೆಗಳ ಸಂಯೋಜನೆಯೆ ಅಭಿಕ್ಷಮತೆ. ವ್ಯಕ್ತಿ ಪಡೆದಿರುವ ಈ ಗುಣವಿಶೇಷತೆಯ ಮೂಲಕ ಹೆಚ್ಚು ಸಾಮರ್ಥ್ಯಗಳಿಸಿ ತನ್ಮೂಲಕ ಒಳ್ಳೆಯ ಮಾತುಗಾರನಾಗುವ, ಸಂಗೀತಗಾರನಾಗುವ ಇಲ್ಲವೇ ತಾಂತ್ರಿಕ ನೈಪುಣ್ಯ ವೃದ್ಧಿಸಿಕೊಳ್ಳುವಿಕೆಗೆ ಅಭಿಕ್ಷಮತೆ ಎನ್ನುವರು. "** – ಫ್ರೀಮ್ಯಾನ್

## ಅಭಿಕ್ಷಮತೆಯ ವಿಧಗಳು (Types of Aptitude)

### 1. ಇಂದ್ರಿಯ ಸಂಬಂಧಿತ ಅಭಿಕ್ಷಮತೆ ( Sensory Aptitude )

ಪಂಚೇಂದ್ರಿಗಳ ಸಾಮರ್ಥ್ಯಗಳಿಗೆ ಸಂಬಂಧಿಸಿದ ಎಲ್ಲ ಅಭಿಕ್ಷಮತೆಗಳು ಇಂದ್ರಿಯ ಸಂಬಂಧಿತ ಅಭಿಕ್ಷಮತೆಗಳಾಗಿವೆ ಕೆಲವು ವ್ಯಕ್ತಿಗಳು ಕೇಳುವ ಸಾಮರ್ಥ್ಯವನ್ನು ಉಪಯೋಗಿಸಿಕೊಂಡು ಕೈಗೊಳ್ಳುವ ಚಟುವಟಿಕೆಗಳ ಅಭಿಕ್ಷಮತೆ ಹೊಂದಿರುವರು. ಇನ್ನೂ ಕೆಲವು ವ್ಯಕ್ತಿಗಳು ದೃಷ್ಟಿ, ವಾಸನೆ, ರುಚಿ, ಸ್ಪರ್ಶ ಮುಂತಾದ ಸಾಮರ್ಥ್ಯಗಳನ್ನು ಒಳಗೊಂಡ ಚಟುವಟಿಕೆಗಳ ಅಭಿಕ್ಷಮತೆ ಹೊಂದಿರುವರು. ಹೀಗೆ ವ್ಯಕ್ತಿಗಳ ಜ್ಞಾನೇಂದ್ರಿಯಗಳಿಗೆ ಸಂಬಂಧಿಸಿದ ಅಭಿಕ್ಷಮತೆಗಳು ಇದರಲ್ಲಿ ಒಳ್ಳಗೊಳ್ಳುತ್ತವೆ.

### 2. ಯಂತ್ರವಿದ್ಯಾ ಅಭಿಕ್ಷಮತೆ(Mechanical Aptitude)

ಕೆಲವು ವ್ಯಕ್ತಿಗಳು ಯಂತ್ರವಿದ್ಯಾ ಸಾಮರ್ಥ್ಯಗಳನ್ನು ಒಳಗೊಂಡ ಚಟುವಟಿಕೆಗಳನ್ನು ಕೈಗೊಳ್ಳಲು ಒಲವು ತೋರುವರು. ಹಾಗೂ ಯಂತ್ರವಿದ್ಯಾ ಅಭಿಕ್ಷಮತೆ ಒಳಗೊಂಡ ವೃತ್ತಿ ಇಲ್ಲವೇ ಕೆಲಸ ಕಾರ್ಯಗಳನ್ನು ಉತ್ತಮವಾಗಿ ಪ್ರದರ್ಶಿಸುವರು ವ್ಯಕ್ತಿಗಳ ವಿಶಿಷ್ಟ ಸಾಮರ್ಥ್ಯಗಳನ್ನು ಅವರಲ್ಲಿ ವೈಜ್ಞಾನಿಕ ಸಾಧನೆ ಸಲಕರಣೆಗಳನ್ನು ಉಪಯೋಗಿಸುವ, ಹೊಂದಿಸುವ, ಸರಿಪಡಿಸುವ, ಬದಲಾಯಿಸುವ ಮುಂತಾದ ಚಟುವಟಿಕೆಗಳನ್ನು ಕೈಗೊಳ್ಳುತ್ತಾರೆ. ಇಂತಹ ವಿಶಿಷ್ಟ ಸಾಮರ್ಥ್ಯಗಳೆಲ್ಲವು ಯಂತ್ರವಿದ್ಯಾ ಅಭಿಕ್ಷಮತೆಗಳು ಎನಿಸುತ್ತವೆ.

### 3. ಕಲಾತ್ಮಕ ಅಭಿಕ್ಷಮತೆ (Artistic Aptitude)

ಕಲಾತ್ಮಕ ಸಾಮರ್ಥ್ಯಗಳನ್ನು ಅಭಿವ್ಯಕ್ತಿಗೊಳಿಸುವುದಕ್ಕೆ ಸಂಬಂಧಿಸಿದ ಸಾಮರ್ಥ್ಯಗಳೆಲ್ಲವು ಇದರ ವ್ಯಾಪ್ತಿಯಲ್ಲಿ ಬರುತ್ತವೆ. ಈ ಚಟುವಟಿಕೆಗಳು ಮಾನವನ ವರ್ತನೆಯ ಭಾವಾತ್ಮಕ ವಲಯಕ್ಕೆ ಸಂಬಂಧಿಸಿದವುಗಳಾಗಿವೆ. ಕಲಾತ್ಮಕ ಮನೋಭಾವ ಇಲ್ಲಿ ವ್ಯಕ್ತವಾಗುವುದು. ಉದಾ: ಸಂಗೀತ ಅಭಿಕ್ಷಮತೆ, ಚಿತ್ರಕಲೆ, ನೃತ್ಯಕಲೆ ಇತ್ಯಾದಿ.

### 4. ವೃತ್ತಿ ಅಭಿಕ್ಷಮತೆ (Professional Aptitude)

ವಿವಿಧ ಉದ್ಯೋಗಗಳು ಮತ್ತು ವೃತ್ತಿಗಳಿಗೆ ಸಂಬಂಧಿಸಿದ ವಿಶಿಷ್ಟ ಸಾಮರ್ಥ್ಯಗಳನ್ನು ವೃತ್ತಿ ಅಭಿಕ್ಷಮತೆ ಎನ್ನುವರು ವ್ಯಕ್ತಿಯಲ್ಲಿನ ಈ ಅಭಿಕ್ಷಮತೆಗಳು ಅವನ ಬಾವಿ ವೃತ್ತಿ ಇಲ್ಲವೇ ಉದ್ಯೋಗವನ್ನು ನಿರ್ಧರಿಸಲು ಸಹಕಾರಿಯಾಗುತ್ತವೆ. ಉದಾ: ಒಬ್ಬ ವ್ಯಕ್ತಿ ಬೋಧನಾ ಅಭಿಕ್ಷಮತೆ ಹೊಂದಿದ್ದರೆ ಅವನು ಶಿಕ್ಷಕ ವೃತ್ತಿಯಲ್ಲಿ ಯಶಸ್ಸು ಸಂಪಾದಿಸುವನು ಎಂದು ನಿರ್ಧರಿಸಬಹುದಾಗಿದೆ.

### 5. ವಿದ್ಯಾ ಅಭಿಕ್ಷಮತೆ (Scholastic Aptitude)

ಶೈಕ್ಷಣಿಕ ಶಿಸ್ತಿನ, ಪಾಂಡಿತ್ಯಕ್ಕೆ ಸಂಬಂಧಿಸಿದ ಕಲಿಕೆಯ ಅಭಿಕ್ಷಮತೆಗಳನ್ನು ಶಾಲಾ ಅಭಿಕ್ಷಮತೆಗಳು ಎನ್ನುವುರು. ಇವುಗಳು ವ್ಯಕ್ತಿಯ ಭಾವಿ ಶಿಕ್ಷಣ, ಉದ್ಯೋಗ ಕುರಿತು ನಿರ್ಧರಿಸಲು ಸಹಕಾರಿಯಾಗುತ್ತವೆ. ಉದಾ: ವೈಜ್ಞಾನಿಕ ಅಭಿಕ್ಷಮತೆ, ಭಾಷಾ ಅಭಿಕ್ಷಮತೆ ಗಣಿತ ಅಭೀಕ್ಷಮತೆ ಮುಂತಾದವು.

## ಅಭಿಕ್ಷಮತೆಯ ಪ್ರಾಮುಖ್ಯತೆ ( Importance of Aptitude)

- ಅಭಿಕ್ಷಮತೆಗಳು ಮಾರ್ಗದರ್ಶನ ಹಾಗೂ ಸಮಾಲೋಚನ ಸೇವೆಗಳ ಮೂಲಾಧಾರಗಳಾಗಿವೆ.
- ಬೋಧನೆ ವೈದ್ಯಕೀಯ, ತಾಂತ್ರಿಕ, ಕಾನೂನು, ಮುಂತಾದ ವೃತ್ತಿಪರ ತರಬೇತಿಯ ಪ್ರವೇಶಕ್ಕಾಗಿ ವ್ಯಕ್ತಿಗಳನ್ನು ವೈಜ್ಞಾನಿಕವಾಗಿ ಆಯ್ಕೆಮಾಡಿಕೊಳ್ಳಲು

- ಶೈಕ್ಷಣಿಕ ಸಂಶೋಧನೆಗಳನ್ನು ಕೈಗೊಳ್ಳುವಲ್ಲಿ ಅಭಿಕ್ಷಮತೆಯ ಜ್ಞಾನ ಉಪಯುಕ್ತವಾಗಿದೆ.
- ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಹಾಗೂ ವೃತ್ತಿಮಾರ್ಗದರ್ಶನ ನೀಡುವಲ್ಲಿ ಅಭಿಕ್ಷಮತೆಗಳ ಜ್ಞಾನ ಅವಶ್ಯಕ
- ವಿದ್ಯಾರ್ಥಿಗಳಲ್ಲಿರುವ ವಿಶಿಷ್ಟ ಸಾಮರ್ಥ್ಯಗಳನ್ನು ಗುರುತಿಸಿ ತರಬೇತಿ ನೀಡುವಲ್ಲಿ.
- ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಅಧ್ಯಯನಕ್ಕೆ ಸೂಕ್ತ ವಿಷಯಗಳನ್ನು ಆಯ್ಕೆಮಾಡಿಕೊಳ್ಳಲು ನೆರವಾಗುತ್ತವೆ.

## 2.6 ಮನೋಭಾವಗಳು–ಪರಿಕಲ್ಪನೆ ಮತ್ತು ಪ್ರಾಮುಖ್ಯತೆ (Attitudes- Concept and Importance)

ಪ್ರತಿಯೊಬ್ಬ ವ್ಯಕ್ತಿಯ ವರ್ತನೆಯು ಅವನ ಪರಿಸರದಲ್ಲಿ ಕಂಡುಬರುವ ವಸ್ತು, ವ್ಯಕ್ತಿ, ಅಥವಾ ಸಂಗತಿ ಕುರಿತು ಅವನು ಹೊಂದಿರುವ ಮನೋಭಾವಣೆಯ ಮೇಲೆ ಅವಲಂಬಿಸಿರುತ್ತದೆ. ಮಗುವಿನ ಸಂಪೂರ್ಣ ವ್ಯಕ್ತಿತ್ವ ವಿಕಾಸ ಅವನು ಹೊಂದಿರುವ ಮನೋಭಾವಗಳ ಸ್ವರೂಪದಿಂದ ಪ್ರಭಾವಿತವಾಗುತ್ತದೆ. ಯಾವುದೇ ವಿಷಯದ ಕಲಿಕೆ, ಹವ್ಯಾಸಗಳನ್ನು ಬೆಳಸಿಕೊಳ್ಳುವುದು, ಆಸಕ್ತಿ ಹೊಂದುವುದು ಮುಂತಾದ ಮನೋವಜ್ಞಾನಿಕ ಅಂಶಗಳು ವ್ಯಕ್ತಿಯ ಮನೋಭಾವಗಳಿಂದ ನಿರ್ಧರಿಸಲ್ಪಡುತ್ತವೆ. ಆದ್ದರಿಂದ ಮನೋಭಾವಗಳ ಅರ್ಥ ಮತ್ತು ಮಹತ್ವ ಕುರಿತು ತಿಳಿದುಕೊಳ್ಳುವುದು ಅಗತ್ಯ.

### ಮನೋಭಾವದ–ಪರಿಕಲ್ಪನೆ (Concept of Attitude)

ಮನೋಭಾವದ ಅರ್ಥವನ್ನು ಕುರಿತು ಅನೇಕ ಮನೋವಿಜ್ಞಾನಿಗಳು ಈ ಕೆಳಗಿನಂತೆ ವ್ಯಾಖ್ಯಾನಿಸಿರುವುರು.

"ಒಬ್ಬ ವ್ಯಕ್ತಿ, ವಿಷಯ ಅಥವಾ ವಸ್ತುವಿನ ಬಗ್ಗೆ ನಿರ್ಧಿಷ್ಟ ಭಾವನೆ ಹೊಂದಿರುವುದೇ ಮನೋಭಾವ".

– ಸೂರೇನೂನ

"ಮನೋಭಾವ ಎಂಬುದು ವ್ಯಕ್ತಿಯು ನಿರ್ದಿಷ್ಟ ರೀತಿಯಲ್ಲಿ ಪ್ರತಿಕ್ರಯಿಸುವಂತೆ ಅವನ ವರ್ತನೆಗೆ ನಿರ್ದೇಶನ ನೀಡುವ ಮನಸ್ಸಿನ ಸ್ಥಿತಿಯಾಗಿದೆ." – ಟ್ರಾವರ್ಸ್

"ನಿದಿಷ್ಟ ವಸ್ತುಗಳಿಗೆ ವ್ಯಕ್ತಿಯು ತೋರುವ ಅನುಕ್ರಿಯೆಯ ಮೇಲೆ ಅನುಭವಗಳಿಂದ ಸಂಘಟಿಸಲ್ಪಟ್ಟ ಮಾನಸಿಕ ಮತ್ತು ನರಮಂಡಲದ ಸಿದ್ಧ ಸ್ಥಿತಿಯೇ ಮನೋಭಾವ". – ಜೆ.ಡಬ್ಲ್ಯೂ.ಆಲ್‌ಪೋರ್ಟ್.

"ಸಂಬಂಧಿತ ಉದ್ದೀಪನಗಳಿಗೆ ಪೂರ್ವ ನಿರ್ಧರಿತವಾದ ರೀತಿಯಲ್ಲಿ ಅನುಕ್ರಿಯೆ ತೋರುವಂತೆ ಮಾಡುವ ಮನಸ್ಸಿನ ಪೂರ್ವಸಿದ್ದತೆಯೇ ಮನೋಭಾವ". – ವಿಟ್ಟೇಕಾರ

### ಮನೋಭಾವದ ಪ್ರಾಮುಖ್ಯತೆ (Importance of Attitude)

- ಮನೋಭಾವವು ಸಾಮಾಜಿಕ ಸಮೂಹದ ಸ್ಥಿರತೆಗೆ ಬುನಾದಿಯನ್ನು ಒದಗಿಸುತ್ತದೆ. ಸಮೂಹದ ಸದಸ್ಯರು ಏಕರೀತಿಯ ಮನೋಧೋರಣೆಗಳನ್ನು ಪರಸ್ಪರ ಹಂಚಿಕೊಳ್ಳುವರು.
- ವ್ಯಕ್ತಿಗಳು ತಮ್ಮ ಅಸ್ಥಿತ್ವವನ್ನು ಸ್ಥಾಪಿಸಲು ಅವರ ಮನೋಭಾವಗಳು ನೆರವಾಗುತ್ತವೆ.
- ಮನೋಭಾವಗಳು ವ್ಯಕ್ತಿಯ ಆಲೋಚನೆ ಮತ್ತು ವರ್ತನೆಯನ್ನು ಮಾರ್ಗದರ್ಶಿಸುತ್ತವೆ.
- ವ್ಯಕ್ತಿಯ ಸಾಮಾಜಿಕ ವರ್ತನೆಯ ವಿವಿಧ ಆಯಾಮಗಳ ಮೇಲೆ ಮನೋಭಾವಗಳು ಪ್ರಭಾವಬೀರುತ್ತವೆ. ಉದಾ: ಇತರರ ಕುರಿತು ಧನಾತ್ಮಕ ಮನೋಧೋರಣೆ ಹೊಂದಿದ್ದರೆ ಅಂತಹ ವ್ಯಕ್ತಿಯು ಆತ್ಮೀಯ ಸಂಬಂಧ ಹೊಂದಿರುತ್ತಾನೆ. ಋಣಾತ್ಮಕ ಮನೋಧೋರಣೆಯು ಇತರರ ತಿರಸ್ಕಾರಕ್ಕೆ ಕಾರಣವಾಗುತ್ತದೆ.
- ಗೆಳೆಯರು, ಶಾಲೆ, ವೈದ್ಯರು, ಉದ್ಯೋಗ ಮುಂತಾದವುಗಳ ಆಯ್ಕೆಮಾಡುವಾಗ ಸಾಮಾನ್ಯವಾಗಿ ವ್ಯಕ್ತಿಗಳ ಮನೋಭಾವಗಳು ಪ್ರಭಾವ ಬೀರುತ್ತವೆ.
- ವಿದ್ಯಾರ್ಥಿಗಳಲ್ಲಿ ಅಪೇಕ್ಷಿತ / ಧನಾತ್ಮಕ ಮನೋಭಾವಗಳನ್ನು ಬೆಳಸಿಕೊಳ್ಳುವಂತೆ ಸೂಕ್ತ ಮಾರ್ಗದರ್ಶನ ಮಾಡಬಹುದಾಗಿದೆ.
- ಅನಪೇಕ್ಷಿತ ಇಲ್ಲವೆ ಋಣಾತ್ಮಕ ಮನೋಭಾವಗಳನ್ನು ಹೋಗಲಾಡಿಸಲು ಸೂಕ್ತ ಕ್ರಮ ಜರುಗಿಸುವಲ್ಲಿ ಮನೋಭಾವಗಳ ಜ್ಞಾನ ಅಗತ್ಯ.

## 2.7 ಆಸಕ್ತಿ –ಪರಿಕಲ್ಪನೆ ಮತ್ತು ಪ್ರಾಮುಖ್ಯತೆ (Interest-Concept and Importance)

ಯಾವುದೇ ಕಾರ್ಯವನ್ನು ಮಾಡಬೇಕಾದರು ಆಸಕ್ತಿ ಬೇಕು ಆಸಕ್ತಿ ಇಲ್ಲದೇ ಮಾಡುವ ಕಾರ್ಯ ಯಾಂತ್ರಿಕವಾಗಿ ನಿರುತ್ಸಾಹದಾಯಕವಾಗಿದ್ದು ಯಶಸ್ವಿಯಾಗಲಾರದು. ಮನೋವಿಜ್ಞಾನದಲ್ಲಿ ಆಸಕ್ತಿ ಎಂಬ ಪದಕ್ಕೆ ವಿಶೇಷವಾದ ಅರ್ಥವಿದೆ.

ಯಾವ ಒಂದು ವಸ್ತು, ವಿಷಯ, ವ್ಯಕ್ತಿ ಅಥವಾ ಸನ್ನಿವೇಶ ನಮ್ಮ ಗಮನ ಸೆಳೆದು, ನಮ್ಮನ್ನು ಕಾರ್ಯೋನ್ಮುಖರನ್ನಾಗಿ ಮಾಡಿ ತನ್ಮೂಲಕ ನಮಗೆ ತೃಪ್ತಿಕರವಾದ ಅನುಭವವನ್ನು ಉಂಟುಮಾಡುವುದೋ ಅದರಲ್ಲಿ ನಮಗೆ ಆಸಕ್ತಿ ಇರುತ್ತದೆ ಎಂದು ತಿಳಿಯಬಹುದು. ತಜ್ಞರು ಆಸಕ್ತಿಯನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಿರುವರು.

"ಒಬ್ಬ ವ್ಯಕ್ತಿ, ಒಂದು ವಸ್ತು ಅಥವಾ ಒಂದು ಚಟುವಟಿಕೆಯ ಕಡೆ ಗಮನ ಹರಿಸುವಂತೆ ಮಾಡುವ ಪ್ರೇರಕ ಶಕ್ತಿಯೇ ಆಸಕ್ತಿ" – ಕ್ರೋ ಮತ್ತು ಕ್ರೋ

"ನಮಗೆ ಒಂದು ವಸ್ತುವಿನಲ್ಲಿ ಆಸಕ್ತಿ ಇರುವುದು ಎಂದರೆ ಅದು ನಮ್ಮ ಗಮನ ಸೆಳೆಯುತ್ತದೆ ಮತ್ತು ಮಹತ್ವಪೂರ್ಣವೆನಿಸುತ್ತದೆ" – ರಾಸ್.

"ಆಸಕ್ತಿ ಎಂದರೆ ಭಿನ್ನತೆ ಮೂಡಿಸುವುದು. ನಮಗೆ ಸಂಬಂಧಪಟ್ಟ ಮತ್ತು ಭಿನ್ನವಾಗಿ ಕಾಣುವ ವಸ್ತು, ಘಟನೆಯಲ್ಲಿ ನಾವು ಆಸಕ್ತಿ ತಾಳುತ್ತೇವೆ." –ಭಾಟಿಯಾ

"ನಮಗೆ ಇಷ್ಟವಾದವುಗಳು ಮತ್ತು ಇಷ್ಟವಿಲ್ಲದವುಗಳು ಎಂದು ನಿರ್ಧರಿಸುವುದೆ ಆಸಕ್ತಿಗಳು ಎಂದು ಪರಿಗಣಿಸಲಾಗುತ್ತದೆ' – ಸ್ಟ್ರಾಂಗ್

"ಆಸಕ್ತಿ ಎಂಬುದು ಹೆಚ್ಚುಕಾಲ ಇರುವಂತಹ ಮಾನಸಿಕ ವ್ಯವಸ್ಥೆಯಾಗಿದೆ. ಅದು ಇಚ್ಛಾಶಕ್ತಿಯನ್ನು ಉಳಿಸಿಕೊಳ್ಳುತ್ತದೆ ಮತ್ತು ಅವಧಾನದಲ್ಲಿ ಮುಂದುವರಿಯುತ್ತದೆ." – ಬಿ.ಎನ್.ಝಾ.

## ಆಸಕ್ತಿಯ ಪ್ರಾಮುಖ್ಯತೆ (Importance of Interest)

* ಮಕ್ಕಳ ಆಸಕ್ತಿಗಳ ಜ್ಞಾನ ಶಿಕ್ಷಕರಿಗೆ, ಪಾಲಕರಿಗೆ ಹಾಗೂ ಸಮಾಲೋಚಕರಿಗೆ ಅತ್ಯವಶ್ಯಕ
* ಶಿಕ್ಷಕರು ಪರಿಣಾಮಕಾರಿಯಾಗಿ ಬೋಧನಾ ಕಾರ್ಯಕೈಗೊಳ್ಳಲು ವಿದ್ಯಾರ್ಥಿಗಳ ಆಸಕ್ತಿಗಳ ಜ್ಞಾನ ಅಗತ್ಯ
* ವಿದ್ಯಾರ್ಥಿಗಳು ತರಗತಿಯಲ್ಲಿ ಏಕಾಗ್ರತೆ ಹೊಂದುವಂತೆ ಮಾಡಲು ಅವರ ಆಸಕ್ತಿಯ ಜ್ಞಾನ ಅವಶ್ಯಕ.
* ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಹಾಗೂ ವೃತ್ತಿಮಾರ್ಗದರ್ಶನ ನೀಡುವಲ್ಲಿ ಅವರ ಆಸಕ್ತಿಗಳ ಜ್ಞಾನ ಅಗತ್ಯ
* ವಿದ್ಯಾರ್ಥಿಗಳು ಸೂಕ್ತ ಗುರಿಗಳನ್ನು ಹೊಂದಿ ಅವುಗಳನ್ನು ಸಾಧಿಸುವಂತೆ ಪ್ರೇರೇಪಿಸಲು ಆಸಕ್ತಿಗಳು ನೆರವಾಗುತ್ತವೆ.
* ಪಠ್ಯಕ್ರಮ ರಚನೆ ಕಾಲದಲ್ಲಿ ಮಕ್ಕಳ ಆಸಕ್ತಿಗಳ ಜ್ಞಾನ ಉಪಯುಕ್ತವಾಗುತ್ತದೆ.
* ವಿವಿಧ ಉದ್ಯೋಗ ಇಲ್ಲವೇ ವೃತ್ತಿಗಳಿಗೆ ವ್ಯಕ್ತಿಗಳನ್ನು ಆಯ್ಕೆಮಾಡಿಕೊಳ್ಳಲು ಆಸಕ್ತಿಗಳ ಜ್ಞಾನ ಅಗತ್ಯ.

******

## ಅಭ್ಯಾಸ ಪ್ರಶ್ನೆಗಳು

### I.ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. 'ವೈಯಕ್ತಿಕ ಭಿನ್ನತೆ' ಎಂದರೇನು?
2. ವೈಯಕ್ತಿಕ ಬುದ್ಧಿ ಪರೀಕ್ಷೆಯ ಅರ್ಥ ಬರೆಯಿರಿ.
3. ಬುದ್ಧಿಶಕ್ತಿ ಎಂದರೇನು?
4. ಮಾನಸಿಕ ವಯಸ್ಸು ಎಂದರೇನು?
5. ಸಂವೇಗಾತ್ಮಕ ಬುದ್ಧಿಶಕ್ತಿಯ ಅರ್ಥವೇನು ?
6. ಸೃಜನಶೀಲತೆ ಎಂದರೇನು?
7. ಮನೋಭಾವ ಎಂದರೇನು?
8. ಅಭಿಕ್ಷಮತೆ ಎಂದರೇನು
9. ಆಸಕ್ತಿ ಪದವನ್ನು ವ್ಯಾಖ್ಯಾನಿಸಿ.
10. ವೈಯಕ್ತಿಕ ಬುದ್ಧಿಶಕ್ತಿ ಪರೀಕ್ಷಣಗಳ ಪಿತಾಮಹ ಯಾರು?
11. ಬುದ್ಧಿಲಬ್ಧ ಎಂದರೇನು?

12. ಬುದ್ಧಿಲಬ್ಧ ಪರಿಕಲ್ಪನೆಯನ್ನು ಪರಿಚಯಿಸಿದವರಾರು?
13. ಸಂವೇಗಾತ್ಮಕ ಬುದ್ಧಿಶಕ್ತಿ ಪರಿಕಲ್ಪನೆಯನ್ನು ಪ್ರತಿಪಾದಿಸಿದವರಾರು?
14. ವಿಸ್ತರಿಸಿ ಬರೆಯಿರಿ. EQ
15. ಸಂವೇಗಾತ್ಮಕ ಬುದ್ಧಿಶಕ್ತಿ ಪರೀಕ್ಷಣವನ್ನು ಹೆಸರಿಸಿ.

## II. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಬುದ್ಧಿಲಬ್ಧ ಎಂದರೇನು? ಇದನ್ನು ಲೆಕ್ಕಿಸುವ ಸೂತ್ರ ಬರೆಯಿರಿ.
2. ಸಂವೇಗಾತ್ಮಕ ಬುದ್ಧಿಶಕ್ತಿ ಎಂದರೇನು? ಇದನ್ನು ಪ್ರತಿಪಾದಿಸಿದವರು ಯಾರು?
3. ಯಾವುದಾದರು ಎರಡು ಅಭಿಕ್ಷಮತೆಗಳನ್ನು ಹೆಸರಿಸಿ.
4. 10 ವರ್ಷ ವಯಸ್ಸಿನ ಬಾಲಕನ ಮಾನಸಿಕ ವಯಸ್ಸು 10 ವರ್ಷಗಳಾದರೆ ಅವನ ಬುದ್ದಲಬ್ಧ ಕಂಡುಹಿಡಿಯಿರಿ.
5. 10 ವರ್ಷ ವಯಸ್ಸಿನ ಮಗುವಿನ ಬುದ್ದಲಬ್ಧ 140 ಆಗಿದ್ದರೆ ಅವನ ಮಾನಸಿಕ ವಯಸ್ಸನ್ನು ಲೆಕ್ಕಿಸಿರಿ.
6. ಒಂದು ಮಗುವಿನ ಬುದ್ಧಿಲಬ್ಧ 120 ಆಗಿದ್ದು ಅವನ ಮಾನಸಿಕ ವಯಸ್ಸು 12 ವರ್ಷ ಆದರೆ ನಿಜ ವಯಸ್ಸು ಕಂಡುಹಿಡಿಯಿರಿ.
7. ಆಸಕ್ತಿಯ ಎರಡು ಉಪಯೋಗಗಳನ್ನು ತಿಳಿಸಿರಿ.
8. ಮನೋಭಾವಗಳ ಎರಡು ಉಪಯೋಗಗಳನ್ನು ಬರೆಯಿರಿ.
9. ಅಭಿಕ್ಷಮತೆಯ ಎರಡು ವಿಧಗಳನ್ನು ತಿಳಿಸಿ.
10. ವೈಯಕ್ತಿಕ ಬುದ್ಧಿಪರೀಕ್ಷೆ ಎಂದರೇನು? ಒಂದು ಉದಾಹರಣೆ ಕೊಡಿ.
11. ಸಾಮೂಹಿಕ ಬುದ್ಧಿಪರೀಕ್ಷೆ ಎಂದರೇನು? ಒಂದು ಉದಾಹರಣೆ ಕೊಡಿ.
12. ಬುದ್ಧಿಶಕ್ತಿ ಪರೀಕ್ಷಣೆಗಳ ಎರಡು ಉಪಯೋಗಗಳನ್ನು ತಿಳಿಸಿ.

## III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಒಂದು ಪುಟ ಮೀರದಂತೆ ಉತ್ತರಿಸಿ.

1. ಮಾನಸಿಕ ವಯಸ್ಸು (MA) ಮತ್ತು ಬುದ್ಧಿಲಬ್ಧ (IQ)ಈ ಪರಿಕಲ್ಪನೆಗಳನ್ನು ವಿವರಿಸಿ.
2. ಬುದ್ಧಿಶಕ್ತಿಯ ಪ್ರಸರಣ ಹಾಗೂ ವರ್ಗೀಕರಣವನ್ನು ವಿವರಿಸಿರಿ.
3. ಬುದ್ಧಿಶಕ್ತಿ ಪರೀಕ್ಷಣಗಳ ಉಪಯೋಗಗಳನ್ನು ಬರೆಯಿರಿ.
4. ಸಂವೇಗಾತ್ಮಕ ಬುದ್ಧಿಶಕ್ತಿಯ ಮೂಲ ಘಟಕಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
5. ಸಂವೇಗಾತ್ಮಕ ಬುದ್ಧಿಶಕ್ತಿಯ ಮಹತ್ವವನ್ನು ಬರೆಯಿರಿ.
6. ಸಂವೇಗಾತ್ಮಕ ಬುದ್ಧಿಶಕ್ತಿಯನ್ನು ಅಭಿವೃದ್ಧಿಗೊಳಿಸುವ ಕ್ರಮಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.
7. ಸೃಜನಾತ್ಮಕ ವ್ಯಕ್ತಿಯ ಗುಣಲಕ್ಷಣಗಳನ್ನು ಬರೆಯಿರಿ.
8. ಸೃಜನಶೀಲತೆಯ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.
9 ಸೃಜನಶೀಲತೆಯನ್ನು ಅಭಿವೃದ್ಧಿಗೊಳಿಸುವ ಕ್ರಮಗಳನ್ನು ತಿಳಿಸಿ.
10 ಅಭಿಕ್ಷಮತೆಯ ಉಪಯೋಗಗಳನ್ನು ಬರೆಯಿರಿ.
11 ಆಸಕ್ತಿ ಎಂದರೇನು? ಆಸಕ್ತಿಯ ಮಹತ್ವವನ್ನು ತಿಳಿಸಿ
12 ಮನೋಭಾವ ಎಂದರೇನು? ಇದರ ಮಹತ್ವ ತಿಳಿಸಿ.

## IV. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಎರಡು ಪುಟಗಳು ಮೀರದಂತೆ ಉತ್ತರಿಸಿ.

1. ವೈಯುಕ್ತಿಕ ಭಿನ್ನತೆಯ ಕ್ಷೇತ್ರಗಳನ್ನು ಕುರಿತು ಬರೆಯಿರಿ.
2. ಬುದ್ಧಿಶಕ್ತಿ ಪರೀಕ್ಷಣದ ವಿಧಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ.
3. ಸಂವೇಗಾತ್ಮಕ ಬುದ್ಧಿಶಕ್ತಿಯ ಘಟಕಾಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ. ಸಂವೇಗಾತ್ಮ ಬುದ್ದಿಶಕ್ತಿ ಸಂವರ್ಧನಾ ಕ್ರಮಗಳನ್ನು ವಿವರಿಸಿರಿ.
4. ಸೃಜನಶೀಲತಯ ಮೇಲೆ ಪ್ರಭಾವ ಬೀರುವ ಅಂಶಗಳಾವುವು? ಸೃಜನಶೀಲತೆಯನ್ನು ಹೆಚ್ಚಿಸುವ ಕ್ರಮಗಳನ್ನು ಕುರಿತು ಬರೆಯಿರಿ.
5. ಅಭಿಕ್ಷಮತೆಯ ವಿಧಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

*****

ಘಟಕ 3

# ವ್ಯಕ್ತಿತ್ವ ಮತ್ತು ಸಮಾಯೋಜನೆ
# Personality and Adjustment

## 3.1 ವ್ಯಕ್ತಿತ್ವ

3.1.1 ವ್ಯಕ್ತಿತ್ವ – ಪರಿಕಲ್ಪನೆ ಹಾಗೂ ಆಯಾಮಗಳು

3.1.2 ವ್ಯಕ್ತಿತ್ವದ ನಿರ್ಧಾರಕಗಳು

ಜೈವಿಕ ನಿರ್ಧಾರಕಗಳು–ಅನುವಂಶೀಯತೆ, ದೈಹಿಕ ರಚನೆ, ನರಮಂಡಲ ವ್ಯವಸ್ಥೆ ಹಾಗೂ ನಿರ್ನಾಳ ಗ್ರಂಥಿಗಳು
ಪರಿಸರಾತ್ಮಕ ನಿರ್ಧಾರಕಗಳು –ಕುಟುಂಬ, ಶಾಲೆ, ಸಮಾಜ ಹಾಗೂ ಸಮೂಹಮಾಧ್ಯಮ

3.1.3. ವ್ಯಕ್ತಿತ್ವದ ಮೌಲ್ಯ ನಿರ್ಧಾರ–ವ್ಯಕ್ತಿತ್ವ ಪರೀಕ್ಷೆಯ ಪ್ರಕಾರಗಳು

– ವ್ಯಕ್ತಿನಿಷ್ಠ ಹಾಗೂ ವಸ್ತುನಿಷ್ಠ ಪದ್ಧತಿಗಳು– ಪ್ರಕ್ಷೇಪಣ ತಂತ್ರಗಳು

## 3.2 ಸಮಾಯೋಜನೆ

3.2.1 ಸಮಾಯೋಜನೆ–ಪರಿಕಲ್ಪನೆ – ಸಮಾಯೋಜಿತ ವ್ಯಕ್ತಿತ್ವದ ಲಕ್ಷಣಗಳು.

3.2.2 ಸಮಾಯೋಜನೆಗೆ ಅಡೆತಡೆಗಳು –ಉದ್ವೇಗ, ಆಶಾಭಂಗ, ಮಾನಸಿಕ ಘರ್ಷಣೆ ಹಾಗೂ ಒತ್ತಡ.

3.2.3 ಅಸಮಾಯೋಜನೆ –ಪರಿಕಲ್ಪನೆ – ಕಾರಣಗಳು ಮತ್ತು ಪರಿಹಾರಗಳು.

3.2.4 ರಕ್ಷಣಾತಂತ್ರಗಳು–ಪರಿಕಲ್ಪನೆ, ಪ್ರಕಾರಗಳು–ಆಕ್ರಮಣಕಾರಿ, ಪಲಾಯನ ಮತ್ತು ಹೊಂದಾಣಿಕೆ ತಂತ್ರಗಳು.

***************

**ಉದ್ದೇಶಗಳು:**

ಈ ಘಟಕದ ಬೋಧನೆಯ ನಂತರ ವಿದ್ಯಾರ್ಥಿಗಳು,

- ವ್ಯಕ್ತಿತ್ವ, ಸಮಾಯೋಜನೆ, ಅಸಮಾಯೋಜನೆ ಹಾಗೂ ರಕ್ಷಣಾತಂತ್ರಗಳ ವ್ಯಾಖ್ಯೆ ತಿಳಿಸುವರು.
- ಸಮಾಯೋಜಿತ ವ್ಯಕ್ತಿತ್ವದ ಲಕ್ಷಣಗಳನ್ನು ಪಟ್ಟಿ ಮಾಡುವರು.
- ಸಮಾಯೋಜನೆಯ ಅಡೆತಡೆಗಳನ್ನು ಗುರುತಿಸುವರು.
- ವ್ಯಕ್ತಿತ್ವದ ವಿವಿಧ ಆಯಾಮಗಳನ್ನು ವಿವರಿಸುವರು.
- ವಿವಿಧ ರಕ್ಷಣಾತಂತ್ರಗಳ ಮಹತ್ವ ವಿವರಿಸುವರು.
- ಅಸಮಾಯೋಜನೆ ನಿವಾರಣೆಯ ವಿವಿಧ ಕೌಶಲಗಳನ್ನು ವಿವರಿಸುವರು.

**"ಒಬ್ಬ ವ್ಯಕ್ತಿ ಎಂಥಹವನು ಎನ್ನುವುದನ್ನು ಸೂಚಿಸುವ ಮೂಲಕ ವ್ಯಕ್ತಿಯ ವೈಯಕ್ತಿಕತೆಯ ಸುಂದರ ಪ್ರತಿರೂಪವೇ ವ್ಯಕ್ತಿತ್ವ ."**

***********

ಘಟಕ 3

# ವ್ಯಕ್ತಿತ್ವ ಮತ್ತು ಸಮಾಯೋಜನೆ
# Personality and Adjustment

## 3.1 ವ್ಯಕ್ತಿತ್ವ (Personality)

ಇತಿಹಾಸದ ಪುಟಗಳನ್ನೊಮ್ಮೆ ತಿರುಗಿಸಿ ನೋಡಿದಾಗ ಅನೇಕ ಮಹಾನ್ ವ್ಯಕ್ತಿಗಳ ಜೀವನ ಸಾಧನೆ ನಮ್ಮನ್ನು ಮಂತ್ರ ಮುಗ್ಧರನ್ನಾಗಿಸುತ್ತದೆ.ಅವರ ಅಸಾಧಾರಣ ಪ್ರತಿಭೆ, ಮನಃಸ್ಥೈರ್ಯ, ಕ್ರಿಯಾಶೀಲತೆ, ದಯಾಗುಣ ಹಾಗೂ ಚಾರಿತ್ರ್ಯ ಅವರನ್ನು ಸದಾ ಜೀವಂತಗೊಳಿಸಿವೆ. ಅಂತಹ ವ್ಯಕ್ತಿಗಳನ್ನು **'ಶ್ರೇಷ್ಠ ವ್ಯಕ್ತಿತ್ವದ ವ್ಯಕ್ತಿಗಳು'** ಎನ್ನುತ್ತೇವೆ. ಇವರ ನೆನಪು ಸದಾ ಹಸಿರು.

**'ವ್ಯಕ್ತಿತ್ವ'** ಪದವು ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಮಹತ್ವದ ಪಾತ್ರವಹಿಸಿದೆ. ದೈನಂದಿನ ನಮ್ಮ ಬದುಕಿನ ಎಲ್ಲ ಸಂದರ್ಭಗಳಲ್ಲಿ, ನಮ್ಮ ಸುತ್ತಮುತ್ತಲು ನಮ್ಮ ಸಂಪರ್ಕಕ್ಕೆ ಬರುವ ವ್ಯಕ್ತಿ ಬಗ್ಗೆ ಮಾತನಾಡುತ್ತಾ ಅವನನ್ನು ಸಭ್ಯ/ಅಸಭ್ಯ; ಮೇಧಾವಿ/ದಡ್ಡ; ಭಾವಾತ್ಮಕ/ ಸ್ಥಿತಪ್ರಜ್ಞ ; ಸ್ವಾವಲಂಬಿ/ ಪರಾವಲಂಬಿ; ಕೀಳರಿಮೆಯವ/ಮೇಲರಿಮೆಯವ ಮುಂತಾದ ರೀತಿಯಲ್ಲಿ ಸಂಬೋಧಿಸಿ, ಅವರ ವರ್ತನೆ ಆಧರಿಸಿ ವ್ಯಕ್ತಿತ್ವ ನಿರ್ಧಾರದ ಪ್ರಯತ್ನ ಮಾಡುತ್ತೇವೆ. ಅನೇಕ ಸಲ ವ್ಯಕ್ತಿಯ ಅಂಗಸೌಷ್ಠವ ಅಥವಾ ಮಾತಿನ ಕುಶಲತೆ ಅಥವಾ ಆ ಸನ್ನಿವೇಶದಲ್ಲಿ ಇತರರನ್ನು ಆಕರ್ಷಿಸುವ ಅವರ ಚತುರತೆ ಕಂಡು ಎಂತಹ ವ್ಯಕ್ತಿತ್ವ ! ಎಂದು ಉದ್ಗರಿಸುತ್ತೇವೆ. ಕೆಲವೊಮ್ಮೆ ವಿಶ್ವದ ಯಾವುದೇ ದಾರ್ಶನಿಕ ಅಥವಾ ಅಸಾಧಾರಣ ಪ್ರತಿಭೆ ಹೊಂದಿದ ವ್ಯಕ್ತಿ ಕುರಿತು ಮಾತನಾಡುವಾಗ **'Great Personality'** ಎಂದು ಪ್ರಶಂಸಿಸುತ್ತೇವೆ. ಆ ವ್ಯಕ್ತಿಯ ಸ್ವಭಾವ, ವರ್ತನೆ, ಅವನ ಮಹತ್ಸಾಧನೆ  ಹಾಗೂ ಅವನ ಗುಣ ಸ್ವಭಾವ ಕುರಿತಂತೆ ಚರ್ಚಿಸುತ್ತೇವೆ. ಪ್ರತಿಯೊಬ್ಬ ವ್ಯಕ್ತಿಯ ಮಾತಿನ ವೈಖರಿ, ನಡೆನುಡಿ, ಜೀವನ ಶೈಲಿ, ಯೋಚನಾ ಲಹರಿ, ಇತರರೊಡನೆ ಅವನ ಒಡನಾಟ ಹಾಗೂ ವರ್ತನೆ, ಮತ್ತೊಬ್ಬರ ಭಾವನೆಗಳಿಗೆ ಅವನು ಸ್ಪಂಧಿಸುವ ರೀತಿ ಹಾಗೂ ಸನ್ನಿವೇಶ ಹಾಗೂ ಸಂದರ್ಭಗಳಿಗೆ ಅವನ ಪ್ರತಿಕ್ರಿಯೆಗಳು– ಎಲ್ಲವೂ ವಿಶಿಷ್ಠ ಹಾಗೂ ವೈಯಕ್ತಿಕವಾಗಿರುತ್ತವೆ. ವ್ಯಕ್ತಿಯ ಈ ಎಲ್ಲ ಗುಣ ವಿಶೇಷಗಳ ಸುಸಂಘಟಿತ ಅಂಶವೇ ವ್ಯಕ್ತಿತ್ವ.

### 3.1.1 ವ್ಯಕ್ತಿತ್ವದ ಪರಿಕಲ್ಪನೆ ಮತ್ತು ಆಯಾಮಗಳು (Concept and dimensions of Personality)

'ವ್ಯಕ್ತಿತ್ವ' ಪದಕ್ಕೆ ಸಾರ್ವತ್ರಿಕವಾಗಿ ಎಲ್ಲರೂ ಒಪ್ಪುವಂತಹ ಅರ್ಥಕೊಡುವುದು ಕಷ್ಟ ಸಾಧ್ಯ. ಇದೊಂದು ಅಮೂರ್ತ ಪರಿಕಲ್ಪನೆ. 'ವ್ಯಕ್ತಿತ್ವ' ಪದವು ಆಂಗ್ಲಭಾಷೆಯ 'Personality' ಪದಕ್ಕೆ ತತ್ಸಮಾನ ಪದವಾಗಿದೆ. 'Personality' ಎನ್ನುವ ಪದ ಲ್ಯಾಟಿನ ಭಾಷೆಯ **'Persona'** ಎನ್ನುವ ಪದದಿಂದ ನಿಷ್ಪತ್ತಿ ಹೊಂದಿದೆ. ಹಿಂದೆ ಗ್ರೀಕ್ ನಾಟಕಗಳಲ್ಲಿ ನಟರು ವಿವಿಧ ಪಾತ್ರಗಳನ್ನು ನಿರ್ವಹಿಸುವ ಸಂದರ್ಭಗಳಲ್ಲಿ ಧರಿಸುತ್ತಿದ್ದ **ಮುಖವಾಡಕ್ಕೆ** ಈ ಪದ ಬಳಕೆಯಾಗುತ್ತಿತ್ತು. ತಮ್ಮ ವಾಸ್ತವಿಕ ರೂಪ ಬದಲಿಸಿ ಪಾತ್ರಕ್ಕೆ ತಕ್ಕಂತೆ ಮುಖವಾಡ ಧರಿಸುತ್ತಿದ್ದು ಅದು ಆ ಪಾತ್ರದ ವ್ಯಕ್ತಿತ್ವ ಪ್ರತಿಬಿಂಬಿಸುತ್ತಿತ್ತು. ನಂತರ ಅದು ನಟರಿಗೆ ಅನ್ವಯವಾಗಿ ಅವರ ಬಾಹ್ಯನೋಟ ಅಥವಾ ಬಾಹ್ಯ ವರ್ತನೆಗೆ ಸಂಬಂಧಿಸಿದಂತೆ ಬಳಸಲಾರಂಭವಾಯಿತು. ಇಂದು ಸಹ ಅನೇಕ ಸಲ ಒಬ್ಬ ವ್ಯಕ್ತಿಯ ಬಾಹ್ಯಆಕರ್ಷಣೆ, ನಿಲುವು, ಮೈಕಟ್ಟು, ಧ್ವನಿ ಹಾಗೂ ಹಾವಭಾವ ಮತ್ತು ಮಾತಿನ ಶೈಲಿ ಆಧರಿಸಿ **'ವ್ಯಕ್ತಿತ್ವ'** ಪದ ಬಳಸುವುದುಂಟು. ಆದರೆ ಮನೋವೈಜ್ಞಾನಿಕ ದೃಷ್ಠಿಯಿಂದ ವ್ಯಕ್ತಿತ್ವ ಪದ ಕೇವಲ ಬಾಹ್ಯ ರೀತಿಯ ಆಕರ್ಷಣೆಗೆ ಸೀಮಿತವಾಗದೆ ವ್ಯಕ್ತಿಯ ಬಾಹ್ಯ ಹಾಗೂ ಆಂತರಿಕ ಗುಣವಿಶೇಷಗಳ ಸಮಗ್ರತೆ ಸೂಚಿಸುವ ಪದವಾಗಿದೆ.

**ವ್ಯಕ್ತಿತ್ವ** ಅಥವಾ **'Personality'** ಪದವನ್ನು ಮನೋವೈಜ್ಞಾನಿಕ ದೃಷ್ಠಿಯಿಂದ ಅಧ್ಯಯನ ಮಾಡಿ ಅದಕ್ಕೆ ವೈಜ್ಞಾನಿಕ ತಳಹದಿ ಒದಗಿಸಿದ ಕೀರ್ತಿ ಆಸ್ಟ್ರಿಯಾದೇಶದ ಮನಶ್ಶಾಸ್ತ್ರಜ್ಞ **ಸಿಗ್ಮಂಡ್ ಫ್ರಾಯ್ಡ್‌ನಿಗೆ** ಸಲ್ಲುತ್ತದೆ. ವ್ಯಕ್ತಿಯ ಮನಸ್ಸಿನ ಮೂರು ಪದರುಗಳಾದ **'ಇದ್, 'ಈಗೋ'** ಮತ್ತು **'ಸೂಪರ್ ಈಗೋ'** ಇವುಗಳ ನಡುವಿನ ಅಂತರ್_ಕ್ರಿಯೆಯಿಂದ ವ್ಯಕ್ತಿತ್ವ ರೂಪಗೊಳ್ಳುವುದರಿಂದ ಒಬ್ಬೊಬ್ಬರು ಒಂದೊಂದು ರೀತಿಯ ವ್ಯಕ್ತಿತ್ವ ಹೊಂದಿರುತ್ತಾರೆ ಎನ್ನುತ್ತಾರೆ **ಫ್ರಾಯ್ಡ್.**

ವ್ಯಾಖ್ಯೆಗಳು

**'ವ್ಯಕ್ತಿತ್ವ ವಿಶಿಷ್ಟವಾದ ವ್ಯಕ್ತಿಗತ ಚಾರಿತ್ರ್ಯವಾಗಿದೆ'** . – ದಿ ಲಿಟ್ಲ ಆಕ್ಸ್‌ಫರ್ಡ್ ನಿಘಂಟು.

**'ನಿನ್ನ ವ್ಯಕ್ತಿತ್ವವು ನೀನು ಎಂತಹ ವ್ಯಕ್ತಿ ಎನ್ನುವುದನ್ನು ತಿಳಿಸುತ್ತದೆ. ಇದು ವ್ಯಕ್ತಿಯ ವರ್ತನೆ, ಭಾವನೆ ಹಾಗೂ ಚಿಂತನೆ ಮೂಲಕ ವ್ಯಕ್ತವಾಗುತ್ತದೆ.** – ಕ್ರೇಂಬ್ರಿಡ್ಜ್ ಅಂತರಾಷ್ಟ್ರೀಯ ಆಂಗ್ಲ ನಿಘಂಟು.

'ವ್ಯಕ್ತಿಯನ್ನು ಅವನ ಪರಿಸರದೊಡನೆ ವಿಶಿಷ್ಟ ರೀತಿಯಲ್ಲಿ ಸಮಾಯೋಜನೆಗೊಳ್ಳುವಂತೆ ಮಾಡುವ ಅವನಲ್ಲಿರುವ ಮನೋದೈಹಿಕ ವ್ಯವಸ್ಥೆಗಳ ಚಲನಶೀಲ ಸಂಘಟನೆಯೇ ವ್ಯಕ್ತಿತ್ವ'.

– ಜಿ. ಡಬ್ಲೂ ಆಲ್‌ಪೋರ್ಟ್

'ವ್ಯಕ್ತಿಯು ಜೈವಿಕವಾಗಿ ಪಡೆದ ಸಹಜ ಮನೋಧರ್ಮಗಳು, ಪ್ರೇರಣೆಗಳು, ಒಲವುಗಳು, ಆಕಾಂಕ್ಷೆಗಳು ಹಾಗೂ ಹುಟ್ಟುಗುಣಗಳ ಮತ್ತು ಅನುಭವದಿಂದ ಗಳಿಸಿದ ಪ್ರವೃತ್ತಿಗಳ ಹಾಗೂ ಒಲವುಗಳ ಸಮಗ್ರತೆಯೇ ವ್ಯಕ್ತಿತ್ವ."

–ಮಾರ್ಟಿನ್ ಪ್ರಿನ್ಸ್

'ಒಬ್ಬ ವ್ಯಕ್ತಿಯ ಮನೋಗತ ಮತ್ತು ಸಾಮಾಜಿಕ ವರ್ತನೆಗಳ ಸಮಗ್ರತೆ; ವ್ಯಕ್ತಿಯ ಒಟ್ಟು ಮನೋಗತ ಮತ್ತು ಸಾಮಾಜಿಕ ಪ್ರತಿಕ್ರಿಯೆಗಳು; ವ್ಯಕ್ತಿಯ ವೈಯಕ್ತಿಕ, ಭಾವಾತ್ಮಕ ಹಾಗೂ ಸಾಮಾಜಿಕ ಜೀವನ ; ಅವನ ವರ್ತನೆ ಮತ್ತು ಪರಿಸ್ಥಿತಿಗೆ ಅವನ ಪ್ರತಿಕ್ರಿಯೆಗಳು– ಇವೆಲ್ಲದರ ಸಂಯೋಜನೆಯೇ ವ್ಯಕ್ತಿತ್ವ'


– ಶಿಕ್ಷಣಶಾಸ್ತ್ರದ ಪಾರಿಭಾಷಿಕ ನಿಘಂಟು.

ಒಟ್ಟಾರೆ 'ವ್ಯಕ್ತಿತ್ವ' ಪದ ವ್ಯಕ್ತಿಯ ಸಮಗ್ರ ವರ್ತನೆ ಕುರಿತದ್ದಾಗಿದೆ. ಇದು ವ್ಯಕ್ತಿಯ ಮಾತಿನ ಶೈಲಿ, ಆಲಿಸುವ ಮನೋಭಾವ, ಕುಶಲತೆ, ಅವನ ವಿಚಾರ ದೃಷ್ಟಿಕೋನ, ಇತರರೊಂದಿಗೆ ಪ್ರತಿಕ್ರಿಯಿಸುವ ರೀತಿ, ಮನೋಭಾವ –ಮುಂತಾದ ಅನೇಕ ಅಂಶಗಳನ್ನು ಒಳಗೊಂಡಿದ್ದು ಪ್ರತಿಯೊಬ್ಬ ವ್ಯಕ್ತಿಯನ್ನು ವಿಶಿಷ್ಟನಾಗುವಂತೆ ಮಾಡಿದೆ. ಒಬ್ಬ ವ್ಯಕ್ತಿ ಎಂಥಹವನು ಎನ್ನುವುದನ್ನು ಸೂಚಿಸುವ ಮೂಲಕ ವ್ಯಕ್ತಿಯ ವೈಯಕ್ತಿಕತೆಯ ಸುಂದರ ಪ್ರತಿರೂಪವೇ ವ್ಯಕ್ತಿತ್ವ ಎನಿಸಿದೆ.

## ವ್ಯಕ್ತಿತ್ವದ ಆಯಾಮಗಳು (Dimensions of Personality)

ಶಿಕ್ಷಣದಲ್ಲಿ ವ್ಯಕ್ತಿತ್ವ ಮತ್ತು ಅದರ ವಿಕಸನ ಕುರಿತಾದ ಅಧ್ಯಯನ ಅತ್ಯಂತ ಮಹತ್ವದ್ದು, ಶಿಕ್ಷಣದ ಪ್ರಮುಖ ಉದ್ದೇಶ ಮಗುವಿನ ಸರ್ವಾಂಗೀಣ ವ್ಯಕ್ತಿತ್ವ ವಿಕಾಸವಾಗಿದೆ. ಹೀಗಾಗಿ ಸದೃಢ ದೇಹ, ಸ್ಥಿತಪ್ರಜ್ಞ ಮನಸ್ಸು, ಬೌದ್ಧಿಕ ಸದೃಡತೆ, ಸಾಮಾಜಿಕ ಹೊಂದಾಣಿಕೆ ಮತ್ತು ಆಧ್ಯಾತ್ಮಿಕ ಚಿಂತನೆಯಿಂದ ಕೂಡಿದ ವ್ಯಕ್ತಿತ್ವ ರೂಪಿಸುವುದು ಅಗತ್ಯ. ಈ ಕೆಳಕಂಡ ಐದು ಆಯಾಮಗಳ ಸಮಗ್ರ ಬೆಳವಣಿಗೆ ಹಾಗೂ ಸಮತೋಲನ ರೀತಿಯ ವಿಕಾಸ ಇಂದಿನ ಅಗತ್ಯವಾಗಿದೆ.

1. ದೈಹಿಕ 2. ಮಾನಸಿಕ 3. ಬೌದ್ಧಿಕ 4. ಸಾಮಾಜಿಕ 5. ಆಧ್ಯಾತ್ಮಿಕ




## ದೈಹಿಕ ಆಯಾಮ (Physical dimension)

ವ್ಯಕ್ತಿತ್ವ ವಿಕಾಸದಲ್ಲಿ ದೈಹಿಕ ಆಯಾಮ ಅತ್ಯಂತ ಮಹತ್ವದ್ದು. ದೈಹಿಕ ಆಯಾಮವು ವ್ಯಕ್ತಿಯ ಆರೋಗ್ಯ, ದೈಹಿಕ ಸದೃಢತೆ, ಇಂದ್ರಿಯಗಳ ಸ್ವಾಸ್ಥತೆ ಒಳಗೊಂಡಿದೆ. ಆರೋಗ್ಯಕರ ಗುಣಮಟ್ಟದ ಬದುಕಿಗೆ ಪೂರಕವಾದ ಅಂಶಗಳನ್ನು ಒಳಗೊಂಡಿದ್ದು ವ್ಯಕ್ತಿಯನ್ನು ಚಟುವಟಿಕೆಯಿಂದ ಇರುವಂತೆ ಸಹಾಯ ಮಾಡುವ ಆಯಾಮವಾಗಿದೆ. ಸಮಾಜ ಒಪ್ಪುವ ರೀತಿಯಲ್ಲಿ ಆರೋಗ್ಯ ರಕ್ಷಣೆ ಮಾಡಿಕೊಂಡು ಬದುಕುವುದು ಒಂದು ಕಲೆ. ಚಲನಶೀಲ ವ್ಯಕ್ತಿತ್ವಕ್ಕೆ ಇಂತಹ ಕಲೆ ರೂಢಿಸಿಕೊಳ್ಳುವುದು ಅತ್ಯಗತ್ಯ. ವ್ಯಕ್ತಿಯ ಸಂತೃಪ್ತಿಯ ಹಾಗೂ ಯಶಸ್ವಿ ಬದುಕಿಗೆ ಆರೋಗ್ಯವೇ ಮೂಲಾಧಾರ. ದೈಹಿಕ ಅನಾರೋಗ್ಯವು ಮಾನಸಿಕ ಚಿಂತೆ ಹಾಗೂ ಖಿನ್ನತೆಗೆ ಕಾರಣ. ಇದು ನಮ್ಮ ವರ್ತನೆಯ ಮೇಲೆ ಪ್ರಭಾವ ಬೀರುವುದರ ಮೂಲಕ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತದೆ.

ದೈಹಿಕವಾಗಿ ಸದೃಢನಾಗಿರುವ ವ್ಯಕ್ತಿ ಮಾನಸಿಕವಾಗಿ ಪ್ರಫುಲ್ಲನಾಗಿದ್ದು, ಸಾಮಾಜಿಕ ಹೊಂದಾಣಿಕೆ ಹೊಂದಿದ್ದು, ಭಾವನಾತ್ಮಕ ಸ್ಥಿರತೆ ತಂದುಕೊಂಡು ತನ್ನ ದಿನನಿತ್ಯದ ಕಾರ್ಯಚಟುವಟಿಕೆಗಳನ್ನು ಸಮರ್ಥವಾಗಿ, ಸುಲಭವಾಗಿ ಹಾಗೂ ಯಶಸ್ವಿಯಾಗಿ ನಿರ್ವಹಿಸಬಲ್ಲ. ದೈಹಿಕ ಸದೃಢತೆ ಹೊಂದಿರದ ವ್ಯಕ್ತಿ ತಾನೂ ಆರೋಗ್ಯವಾಗಿರದೆ, ಇಡೀ ಕುಟುಂಬ ಹಾಗೂ ಸಮಾಜಕ್ಕೆ ಹೊರೆಯಾಗಿ ಅನಾರೋಗ್ಯಕರ ವಾತಾವರಣಕ್ಕೆ ಕಾರಣನಾಗುತ್ತಾನೆ. ದೈಹಿಕ ಸದೃಢತೆ ಮನಸ್ಸಿನ ಇಚ್ಛಾಶಕ್ತಿ ಹೆಚ್ಚಿಸುತ್ತದೆ. **'ಕಬ್ಬಿಣದಂತಹ ಮಾಂಸಖಂಡಗಳು, ಉಕ್ಕಿನಂತಹ ನರಗಳು ಹಾಗೂ ಯಾವುದಕ್ಕೂ ಜಗ್ಗದ ಪ್ರಚಂಡ ಇಚ್ಛಾಶಕ್ತಿ ಹೊಂದಿರುವ ವ್ಯಕ್ತಿಗಳ ನಿರ್ಮಾಣವೇ ಶಿಕ್ಷಣದ ಗುರಿ'** ಎನ್ನುವ ಸ್ವಾಮಿ ವಿವೇಕಾನಂದರ ಹೇಳಿಕೆ ಸ್ತುತ್ಯಾರ್ಹ. ಇಂತಹ ವ್ಯಕ್ತಿತ್ವ ಹೊಂದಿದ ವ್ಯಕ್ತಿಗಳು ಮಾತ್ರ ತಾವೂ ವಿಕಾಸ ಹೊಂದಿ ಸಮಾಜದ ಕ್ಷೇಮಾಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸಬಲ್ಲರು.

### ಮಾನಸಿಕ ಆಯಾಮ (Mental dimension)

ಇದು ವ್ಯಕ್ತಿಯ ಮಾನಸಿಕ ಅಂಶಗಳನ್ನು ಪ್ರತಿಬಿಂಬಿಸುವ ಆಯಾಮ. ದೇಹದಂತೆ ಮನಸ್ಸುಕೂಡಾ ಅಷ್ಟೇ ಮುಖ್ಯ. ದೇಹಕ್ಕಿಂತಲೂ ಮನಸ್ಸು ಶ್ರೇಷ್ಠ ಎನ್ನುವುದು ತಜ್ಞರ ಅಭಿಮತ. **'ವ್ಯಕ್ತಿಯ ಎಲ್ಲ ರೀತಿಯ ವರ್ತನೆಗಳು ಮನೋವೈಜ್ಞಾನಿಕ'** ಎನ್ನುವ ವಿಚಾರ ಗಮನಾರ್ಹ. ವರ್ತನೆಗಳಿಂದಲೇ ವ್ಯಕ್ತಿತ್ವ. ಹೀಗಾಗಿ ವ್ಯಕ್ತಿಯ ಮನಸ್ಸು ಸದೃಢತೆಯಿಂದ ಕೂಡಿರುವುದು ಚಲನಶೀಲ ವ್ಯಕ್ತಿತ್ವಕ್ಕೆ ಮೂಲಧಾರ. ಮನಸ್ಸು ವಿಚಾರಗಳ ಆಗರ. ಆದರ್ಶ ವ್ಯಕ್ತಿತ್ವಕ್ಕೆ ಸದೃಢ, ನಿಯಂತ್ರಿತ ಹಾಗೂ ಶಿಸ್ತಿನಿಂದ ಕೂಡಿದ ಮನಸ್ಸೇ ಕಾರಣ. ಶಕ್ತ ಹಾಗೂ ಶಿಸ್ತಿನಿಂದ ಕೂಡಿದ ಮನಸ್ಸು ಆದರ್ಶ ಸ್ನೇಹಿತನಂತೆ. ಅಶಕ್ತ ಹಾಗೂ ಅಶಿಸ್ತಿನ ಮನಸ್ಸು ವೈರಿಯಂತೆ. ವ್ಯಕ್ತಿಯ ಮನಸ್ಸಿನಲ್ಲಿ ಉಂಟಾಗುವ ವಿಚಾರಗಳಿಂದಲೇ ಆ ವ್ಯಕ್ತಿಯ ಒಳ್ಳೆಯತನ ಹಾಗೂ ಕೆಟ್ಟತನ ಸೃಷ್ಟಿಯಾಗುವುದು. ನಕಾರಾತ್ಮಕ ಹಾಗೂ ಕೆಟ್ಟ ವಿಚಾರಗಳು ಮನಸ್ಸನ್ನು ದುರ್ಬಲಗೊಳಿಸುತ್ತವೆ. ಅಶಕ್ತ ಹಾಗೂ ಅಶಿಸ್ತಿನ ಮನಸ್ಸು ವ್ಯಕ್ತಿತ್ವ ವಿನಾಶಕ್ಕೆ ಕಾರಣವಾಗುತ್ತದೆ. ಹಾಗೆಯೇ ಶಿಸ್ತಿನಿಂದ ಕೂಡಿದ ಮನಸ್ಸು ಯಾವುದೇ ದ್ವೇಷ, ಅಸೂಯೆ, ಅಸಹನೆ, ಅನುಮಾನ ಹಾಗೂ ಸಂಕುಚಿತ ಭಾವಗಳಿಂದ ದೂರವಿರುತ್ತದೆ. ಇಂತಹ ಮನಸ್ಸುಳ್ಳ ವ್ಯಕ್ತಿ ಮಾತ್ರ ಸೂಕ್ತ ನಿರ್ಧಾರ ಹಾಗೂ ಸರಿಯಾದ ತೀರ್ಮಾನ ಕೈಗೊಳ್ಳಬಲ್ಲ. ಸಕಾರಾತ್ಮಕ ಚಿಂತನೆ, ಏಕಾಗ್ರತೆ, ನಿರ್ಭಯತೆ ಆತ್ಮವಿಶ್ವಾಸ, ವಿಶಾಲಭಾವ ಮುಂತಾದವು ಶಿಸ್ತಿನಿಂದ ಕೂಡಿದ ಮನಸ್ಸಿನ ಲಕ್ಷಣಗಳು. ಇವು ವ್ಯಕ್ತಿಯ ಸ್ಥಿತಪ್ರಜ್ಞತೆಗೆ ದಾರಿಯಾಗಿ ಆದರ್ಶ ವ್ಯಕ್ತಿತ್ವಕ್ಕೆ ಆಧಾರವಾಗುತ್ತವೆ.

### ಬೌದ್ಧಿಕ ಆಯಾಮ (Intellectual dimension)

ವ್ಯಕ್ತಿತ್ವದ ಬಹುಮುಖ್ಯ ಆಯಾಮಗಳಲ್ಲಿ ಬೌದ್ಧಿಕ ಆಯಾಮವೂ ಒಂದು. ಇದು ವ್ಯಕ್ತಿಯ ಬುದ್ಧಿವಂತಿಕೆ ಮೇಧಾವಿತನ, ಕ್ರಿಯಾಶೀಲತೆ, ತರ್ಕಬದ್ಧ ಚಿಂತನೆ ಮುಂತಾದ ಸಾಮರ್ಥ್ಯಗಳನ್ನು ಒಳಗೊಂಡಿರುವ ಆಯಾಮವಾಗಿದೆ. ವ್ಯಕ್ತಿ ತನ್ನಲ್ಲಿರುವ ಸುಪ್ತವಾದ ಸೃಜನಶೀಲ ಸಾಮರ್ಥ್ಯಗಳನ್ನು ಅರಿತು ತನ್ನ ಜ್ಞಾನ, ಸಾಮರ್ಥ್ಯ ಹಾಗೂ ಕೌಶಲಗಳನ್ನು ವೃದ್ಧಿಸಿಕೊಂಡಾಗ ಮಾತ್ರ ಅವನ ವ್ಯಕ್ತಿತ್ವಕ್ಕೆ ಬೆಲೆ. ಬೌದ್ಧಿಕ ಆಯಾಮವು ವ್ಯಕ್ತಿಯ ಜೀವನ ಪರ್ಯಂತ ಕಲಿಕೆ, ಕಲಿತ ವಿಷಯಗಳ ಅನುಷ್ಠಾನ ಹಾಗೂ ಬೌದ್ಧಿಕ ಸಾಮರ್ಥ್ಯಗಳ ಸಂವರ್ಧನೆ ಒಳಗೊಂಡಿದೆ. ಬೌದ್ಧಿಕ ಪ್ರೌಢಿಮೆ ಹೊಂದಿದ ವ್ಯಕ್ತಿಗೆ ಎಲ್ಲರಿಂದಲೂ ಮನ್ನಣೆ. **'ಸ್ವದೇಶೀ ಪೂಜ್ಯತೇ ರಾಜಾ, ವಿದ್ವಾನ ಸರ್ವತ್ರ ಪೂಜ್ಯತೇ'** ಎನ್ನುವಂತೆ ಮೇಧಾವಿಗಳಿಗೆ ಇಡೀ ಜಗತ್ತೇ ಗೌರವಿಸುತ್ತದೆ. ಬುದ್ಧಿವಂತ ಯಾವುದೇ ಸಮಸ್ಯೆಗೆ ಸರಳ ಹಾಗೂ ಸುಲಭ ಪರಿಹಾರ ಕಂಡುಕೊಳ್ಳಬಲ್ಲ. ಆ ಮೂಲಕ ಬಹುಜನ ಮೆಚ್ಚುವಂತಹ ಚತುರತೆ ತೋರಬಲ್ಲ. ಇದು ಅವನ ವ್ಯಕ್ತಿತ್ವಕ್ಕೆ ಮೆರುಗು ನೀಡುತ್ತದೆ. ಬೌದ್ಧಿಕ ಪ್ರೌಢಿಮೆ ಇರುವವನು 'ಸರಿ' 'ತಪ್ಪು' ಗಳ ಪರಿಕಲ್ಪನೆಗಳನ್ನು ಚೆನ್ನಾಗಿ ಅರಿಯಬಲ್ಲ. ಅದು ಅವನ ವರ್ತನೆ ಬದಲಿಸುತ್ತದೆ. ಇಂದು ದೂರದರ್ಶನ, ಗಣಕಯಂತ್ರ, ಅಂತರ್‌ಜಾಲ, ವೆಬ್‌ಸೈಟ್ ಮುಂತಾದ ತಂತ್ರಜ್ಞಾನ ಹಾಗೂ ಸಂವಹನ ಮಾಧ್ಯಮಗಳು ಸಾಕಷ್ಟು ಮಾಹಿತಿ ನೀಡುತ್ತವೆ. ಬುದ್ಧಿವಂತ ಮಾತ್ರ ತನ್ನ ಚಿಂತನಾ ಸಾಮರ್ಥ್ಯದಿಂದ ಸರಿಯಾದದ್ದನ್ನು ಹಾಗೂ ಉಪಯುಕ್ತವಾದದ್ದನ್ನು ಆಯ್ಕೆಮಾಡಿಕೊಂಡು ವ್ಯಕ್ತಿತ್ವ ರೂಪಿಸಿಕೊಳ್ಳಬಲ್ಲ. 'ಜ್ಞಾನವೇ ಶಕ್ತಿ'. ಅದನ್ನು ರಚನಾತ್ಮಕ ಕಾರ್ಯಗಳಿಗೆ ಉಪಯೋಗಿಸುವವನೇ ಬುದ್ಧಿವಂತ. ಇಂದು ಬುದ್ಧಿವಂತಿಕೆಯನ್ನೇ ಬಂಡವಾಳವನ್ನಾಗಿಸಿಕೊಂಡು ಹಲವರು ಮೋಸ ಹಾಗೂ ವಂಚನೆ ಮಾಡುತ್ತಿರುವುದು ವಿಷಾದನೀಯ. ಬೌದ್ಧಿಕ ಆಯಾಮ ವ್ಯಕ್ತಿಯ ಬೌದ್ಧಿಕ ಪ್ರೌಢಿಮೆ ಹಾಗೂ ಆ ಪ್ರೌಢಿಮೆಯಿಂದ ತನ್ನ ಇಂದ್ರಿಯ ಹಾಗೂ ಮಾನಸಿಕ ಸಾಮರ್ಥ್ಯಗಳನ್ನು ನಿಯಂತ್ರಣದಲ್ಲಿರಿಸಿಕೊಳ್ಳುವ ಅಂಶಗಳನ್ನು ಒಳಗೊಂಡಿರುತ್ತದೆ. ವ್ಯಕ್ತಿ ತನ್ನ ಬೌದ್ಧಿಕ ಪ್ರೌಢಿಮೆಯನ್ನು ತನ್ನ ಹಾಗೂ ಸಮಾಜ ಅಂದರೆ ಮನುಕುಲದ ಶ್ರೇಯಸ್ಸಿಗೆ ಬಳಸಿದಾಗ ಅವನ ವ್ಯಕ್ತಿತ್ವ ಶ್ರೇಷ್ಠ ವ್ಯಕ್ತಿತ್ವ ಎನಿಸುತ್ತದೆ.

## ಸಾಮಾಜಿಕ ಆಯಾಮ(Social dimension)

ಈ ಆಯಾಮವು ಸಾಮಾಜಿಕ ಸ್ವಾಸ್ಥ್ಯದ ಪರಿಕಲ್ಪನೆ ತಿಳಿಸುವ ಆಯಾಮವಾಗಿದೆ. ಈ ಆಯಾಮವು ಸಮಾಜದ ಇತರರೊಡನೆ ವ್ಯಕ್ತಿ ಹೊಂದಿರುವ ಸಂಬಂಧ ಕುರಿತದ್ದಾಗಿದೆ. ಮಾನವ ಸಮಾಜ ಜೀವಿ. ಶೂನ್ಯದಲ್ಲಿ ಇವನು ಬದುಕಲಾರ. ವ್ಯಕ್ತಿ ಬೆಳೆದು ವಿಕಾಸಗೊಂಡು ತನ್ನ ಸಾಮರ್ಥ್ಯಗಳನ್ನು ಬಳಸಿಕೊಂಡು ಅಭಿವೃದ್ಧಿ ಹೊಂದುವುದು ಸಾಮಾಜಿಕ ಪರಿಸರದಿಂದ. ಸಾಮಾಜಿಕ ಪರಿಸರದಿಂದ ದೂರವಾದ ವ್ಯಕ್ತಿಗೆ ಬೆಲೆ ಇಲ್ಲ. ಆದರ್ಶ ವ್ಯಕ್ತಿತ್ವ ಹೊಂದಿದ ವ್ಯಕ್ತಿ ಸಾಮಾಜಿಕ ಮೌಲ್ಯಗಳಾದ ಸಮಾನತೆ, ನ್ಯಾಯ ಏಕತೆ, 'ನಾವು' ಎನ್ನುವ ಭಾವನೆ ಮುಂತಾದವುಗಳನ್ನು ರೂಢಿಸಿಕೊಳ್ಳುತ್ತಾನೆ. ಯಾವ ವ್ಯಕ್ತಿ ಇತರರನ್ನು ಪ್ರೀತಿಸುತ್ತಾನೆ ಮತ್ತು ಇತರರಿಗಾಗಿ ಬದುಕುತ್ತಾನೆ ಅವನೇ ಸರ್ವಶ್ರೇಷ್ಠ ವ್ಯಕ್ತಿತ್ವ ಹೊಂದಿದ ವ್ಯಕ್ತಿ. ಇಂತಹ ವ್ಯಕ್ತಿತ್ವ ಯಾರಿಂದಲೂ ಎಂದಿಗೂ ಮರೆಯಲಾಗದು. ಇತರರನ್ನು ನಾವು ಪ್ರೀತಿಸಿದರೆ ಅವರು ನಮ್ಮನ್ನು ಪ್ರೀತಿಸುತ್ತಾರೆ. ಅವರ ಸಹಾಯಕ್ಕೆ ನಾವು ನಿಂತರೆ ನಮ್ಮ ಬೆಂಗಾವಲಿಗೆ ಅವರಿರುತ್ತಾರೆ. ನಗು ನಗುತ್ತಾ ಎಲ್ಲರೊಡನೆ ಹೊಂದಿಕೊಂಡು ಬೆರೆತು ಬಾಳಿದಾಗ ಎಲ್ಲರೂ ಸೌಖ್ಯದಿಂದಿರಲು ಸಾಧ್ಯ. ಯಾವುದೇ ಜಾತಿ, ಮತ, ಪಂಥ, ಬಣ್ಣ, ವರ್ಗ, ಬಡವ, ಬಲ್ಲಿದ ಭೇದ ಭಾವ ತೋರದೆ ಎಲ್ಲರೊಡನೆ ಸಾಮಾಜಿಕ ಹೊಂದಾಣಿಕೆ ಮಾಡಿಕೊಳ್ಳುವ ವ್ಯಕ್ತಿ ಎಲ್ಲರ ಮನದಲ್ಲಿ ಎಂದೆಂದಿಗೂ ಮರೆಯದೆ ಉಳಿಯುತ್ತಾನೆ. ವಿಶ್ವ ಮಾನವನಾಗುತ್ತಾನೆ. ಅದೇ ಶ್ರೇಷ್ಠ ವ್ಯಕ್ತಿತ್ವ.

## ಆಧ್ಯಾತ್ಮಿಕ ಆಯಾಮ(Spiritual dimension)

ವ್ಯಕ್ತಿತ್ವದ ಆಯಾಮಗಳಲ್ಲಿ ಆಧ್ಯಾತ್ಮಿಕ ಆಯಾಮ ಮಹತ್ವದ್ದು. ವ್ಯಕ್ತಿಯ ವ್ಯಕ್ತಿತ್ವ ಶ್ರೇಷ್ಠತೆ ಪಡೆಯುವುದೇ ಈ ಆಯಾಮದಿಂದ ಬದುಕಿನ ಶ್ರೇಷ್ಠ ಮೌಲ್ಯ ಹಾಗೂ ತತ್ವಗಳನ್ನು ಎತ್ತಿಹಿಡಿದು ದೈವತ್ವದೊಂದಿಗೆ ಸಂಬಂಧ ಕಲ್ಪನೆ ಮಾಡಿಕೊಳ್ಳುವ ಅಂಶಗಳನ್ನು ಒಳಗೊಂಡಿರುವ ಆಯಾಮ ಇದಾಗಿದೆ. ಹೀಗಾಗಿ ವ್ಯಕ್ತಿತ್ವದ ಉಳಿದೆಲ್ಲ ಆಯಾಮಗಳಿಗೆ ಇದೇ ಆಧಾರ. ಇದರಿಂದ ದೈವತ್ವದ ಗುಣಗಳಾದ ಪ್ರೀತಿ, ಸೇವೆ, ಪರಿಶುದ್ಧತೆ, ಸತ್ಯಸಂಧತೆ ಆತ್ಮದ ಅರಿವು– ಮುಂತಾದವು ಮೂಡಿ ಬರುತ್ತವೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿ ಅಗೋಚರ ಶಕ್ತಿ ಅಡಗಿದ್ದು ಅದೇ ಅವನ ವರ್ತನೆಗೆ ದಾರಿತೋರುವ ಹಾಗೂ ಮಾರ್ಗದರ್ಶಿಸುವ ಕಾರ್ಯ ನಿರ್ವಹಿಸುತ್ತದೆ. ಈ ಆತ್ಮಜ್ಞಾನದ ಅರಿವಾದ ಕ್ಷಣವೇ ನಮ್ಮ ವ್ಯಕ್ತಿತ್ವದ ಎಲ್ಲ ಉದಾತ್ತ ಗುಣಗಳು ಹೊರಬರುತ್ತವೆ ಅಥವಾ ಪ್ರಕಟಗೊಳ್ಳುತ್ತವೆ. ಈ ಆಧ್ಯಾತ್ಮಿಕ ಅರಿವಿನಿಂದ ಜ್ಞಾನ, ಶಕ್ತಿ, ಉತ್ತಮತೆ, ಪರಿಶುದ್ಧ ಭಾವನೆ ಮುಂತಾದ ಎಲ್ಲ ಮೌಲ್ಯಿಕ ವಿಚಾರಗಳು ವ್ಯಕ್ತಿಯಲ್ಲಿ ಹೊರಹೊಮ್ಮುತ್ತವೆ. ಇದರಿಂದ ವ್ಯಕ್ತಿಯಲ್ಲಿ ಆತ್ಮವಿಶ್ವಾಸ, ಆತ್ಮಜ್ಞಾನ, ನಾಯಕತ್ವ, ಮನಸ್ಥೈರ್ಯ, ಸ್ವಯಂಶಿಸ್ತು, ಸ್ವಯಂ–ಪರಿಕಲ್ಪನೆ ಮೂಡಿ ಬರುತ್ತವೆ. ಇವೆಲ್ಲ ಶ್ರೇಷ್ಠ ವ್ಯಕ್ತಿತ್ವಕ್ಕೆ ದಾರಿ. ಆದ್ಯಾತ್ಮಿಕ ಆಯಾಮವು ವ್ಯಕ್ತಿಯ ವಿಧೇಯತೆ, ಪ್ರಾಮಾಣಿಕತೆ, ಸತ್ಯಸಂಧತೆ, ಕರುಣೆ, ಸೌಜನ್ಯತೆ, ನಿಸ್ವಾರ್ಥತೆ ಹಾಗೂ ಮಾನವೀಯತೆ ಮೂಲಕ ವ್ಯಕ್ತವಾಗುತ್ತದೆ. ಇಂತಹ ಗುಣ ಮೌಲ್ಯಗಳು ವ್ಯಕ್ತಿಗೆ ಆದರ್ಶ ವ್ಯಕ್ತಿತ್ವ ತಂದುಕೊಡುತ್ತವೆ. ನಿಯಮಿತ ಯೋಗ, ಪ್ರಾಣಾಯಾಮ, ಪ್ರಾರ್ಥನೆ ಹಾಗೂ ಆತ್ಮ ನಂಬಿಕೆಯಿಂದ ಆಧ್ಯಾತ್ಮಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಸಾಧ್ಯ.

ವ್ಯಕ್ತಿತ್ವದ ಎಲ್ಲ ಆಯಾಮಗಳ ಸಮರಸ ಹಾಗೂ ಸಮತೋಲನ ಅಭಿವೃದ್ಧಿಯಿಂದ ಮಾತ್ರ ಶ್ರೇಷ್ಠ ವ್ಯಕ್ತಿತ್ವ ರೂಪುಗೊಳ್ಳಲು ಸಾಧ್ಯ. ಈ ಎಲ್ಲ ಆಯಾಮಗಳನ್ನರಿತು ಅವುಗಳಲ್ಲಿ ಪರಿಪೂರ್ಣತೆ ಸಾಧಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದಾಗ ಮಾತ್ರ ವ್ಯಕ್ತಿ ಆದರ್ಶ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಾಧ್ಯ. ಈ ದೃಷ್ಟಿಯಲ್ಲಿ ಕೆಳಕಂಡ ಅಂಶಗಳು ಗಮನಾರ್ಹ.

- ದೈಹಿಕ ಆರೋಗ್ಯದ ಬಗ್ಗೆ ವಿಶೇಷ ಜವಾಬ್ದಾರಿ.
- ಸಮಯಕ್ಕೆ ಸರಿಯಾಗಿ ಪೌಷ್ಠಿಕಾಂಶಯುಕ್ತ ಆಹಾರ ಸೇವನೆ.
- ಉತ್ತಮ ಗ್ರಂಥಗಳನ್ನು ಓದುವ ಹವ್ಯಾಸ.
- ಬೌದ್ಧಿಕ ಪ್ರೌಢಿಮೆ ಇರುವವರೊಡನೆ ಒಡನಾಟ.
- ವಿಚಾರಬದ್ಧ ಚರ್ಚೆಗಳಲ್ಲಿ ಪಾಲ್ಗೊಳ್ಳುವಿಕೆ.
- ಸಮಾಜದಲ್ಲಿ ಎಲ್ಲರೊಡನೆ ಹೊಂದಾಣಿಕೆ.
- ಎಲ್ಲರನ್ನೂ ಪ್ರೀತಿಸುವ ಗುಣಸ್ವಭಾವ.
- ಸದಾ ಸಕಾರಾತ್ಮಕ ಚಿಂತನೆ.
- ಭಾವಾತ್ಮಕ ಸ್ಥಿರತೆ ಕಾಪಾಡಿಕೊಳ್ಳುವುದು.

- ಒತ್ತಡ, ಉದ್ವೇಗ, ಆಶಾಭಂಗ ಹಾಗೂ ಘರ್ಷಣೆಗಳಿಂದ ದೂರವಿರುವುದು.
- ಆದರ್ಶ ಮೌಲ್ಯಗಳ ಬಗ್ಗೆ ಗೌರವ ಭಾವನೆ
- ಯೋಗ, ಪ್ರಾಣಾಯಾಮ, ಹಾಗೂ ಪ್ರಾರ್ಥನೆಯ ಅಭ್ಯಾಸ ರೂಢಿಸಿಕೊಂಡಿರುವುದು.

### 3.1.2 ವ್ಯಕ್ತಿತ್ವ ನಿರ್ಧಾರಕಗಳು (Determinants of Personality)

'ವ್ಯಕ್ತಿತ್ವ' ಪದವು ಒಬ್ಬ ವ್ಯಕ್ತಿಯ ಎಲ್ಲ ಗುಣಧರ್ಮಗಳ ಒಟ್ಟು ಸಮಗ್ರತೆಯನ್ನು ಪ್ರತಿಬಿಂಬಿಸುತ್ತದೆ. ಅವನ ಆಂತರಿಕ ಹಾಗೂ ಬಾಹ್ಯ ವರ್ತನೆಗಳೆರಡನ್ನೂ ಒಳಗೊಂಡಿರುವ ಪರಿಕಲ್ಪನೆಯಾಗಿದೆ. ವ್ಯಕ್ತಿಯ ಈ ವ್ಯಕ್ತಿತ್ವವನ್ನು ನಿರ್ಧರಿಸುವ ಅಂಶಗಳು ಯಾವುವು ಎನ್ನುವುದನ್ನು ತಿಳಿಯುವುದು ಅತ್ಯಗತ್ಯ. ವ್ಯಕ್ತಿತ್ವವು ವ್ಯಕ್ತಿಯ ಅನುವಂಶೀಯತೆ ಹಾಗೂ ಅವನ ಪರಿಸರ ಇವೆರಡರ ಅಂತರ್‌ಕ್ರಿಯೆಯಿಂದ ರೂಪುಗೊಳ್ಳುತ್ತದೆ. ವ್ಯಕ್ತಿತ್ವದ ಜೈವಿಕ ನಿರ್ಧಾರಕಗಳಾದ ವಂಶವಾಹಿನಿಗಳು ವ್ಯಕ್ತಿಯ ದೈಹಿಕ ಹಾಗೂ ಇತರೆ ವಿಶಿಷ್ಠ ಗುಣಸ್ವಭಾವಗಳಿಗೆ ಮೂಲಕಾರಣವಾಗಿವೆ. ಹಲವಾರು ಸಂಶೋಧನೆಗಳು ಹಾಗೂ ಅಧ್ಯಯನಗಳು ಇದಕ್ಕೆ ಪುಷ್ಠಿ ನೀಡಿವೆ. ಗೊಡ್ಡಾರ್ಡ್, ಡಗ್ಡೆಲ್, ಗಾಲ್ಟನ್ ಮೊದಲಾದವರ ಅಧ್ಯಯನಗಳು ಇದನ್ನು ಸಮರ್ಥಿಸುತ್ತವೆ. ಜೈವಿಕ ನಿರ್ಧಾರಕಗಳಲ್ಲಿ ಅನುವಂಶೀಯತೆ, ಶರೀರ ರಚನೆ, ನರಮಂಡಲ ವ್ಯವಸ್ಥೆ ಹಾಗೂ ನಿರ್ನಾಳ ಗ್ರಂಥಿಗಳ ಪ್ರಭಾವ ಅತ್ಯಂತ ಪ್ರಭಾವಶಾಲಿಯಾದದ್ದು. ವ್ಯಕ್ತಿಯ ಆಂತರಿಕ ಸಾಮರ್ಥ್ಯಗಳ ವಿಕಾಸಕ್ಕೆ ಉತ್ತಮ ಪರಿಸರ ಅಗತ್ಯ. ಪರಿಸರದ ನಿರ್ಧಾರಕಗಳಲ್ಲಿ ಕುಟುಂಬ, ಶಾಲೆ, ಸಮಾಜ, ಮತ್ತು ಸಮೂಹ ಮಾಧ್ಯಮಗಳ ಪ್ರಭಾವ ಅತ್ಯಂತ ಗಣನೀಯ. ಹೀಗೆ ಅನುವಂಶೀಯತೆ ಹಾಗೂ ಪರಿಸರಾತ್ಮಕ ನಿರ್ಧಾರಕಗಳು ವ್ಯಕ್ತಿಯ ವ್ಯಕ್ತಿತ್ವ ನಿರ್ಧರಿಸುವಲ್ಲಿ ಮಹತ್ವದ ಪಾತ್ರವಹಿಸಿವೆ. ಒಬ್ಬ ವ್ಯಕ್ತಿ ಅಂತರ್‌ಮುಖಿ/ ಬಹಿರ್ಮುಖಿ: ಬುದ್ಧಿವಂತ/ ದಡ್ಡ; ಸ್ವಾವಲಂಬಿ/ಪರಾವಲಂಬಿ; ಸಾಮಾನ್ಯ/ ಅಸಾಮಾನ್ಯ ಮುಂತಾದ ವ್ಯಕ್ತಿತ್ವದ ಗುಣಧರ್ಮಗಳನ್ನು ನಿರ್ಧರಿಸುವ ಅಂಶಗಳು ಇವಾಗಿವೆ.

ವ್ಯಕ್ತಿತ್ವ ನಿರ್ಧಾರಕಗಳು

| ಜೈವಿಕ | ಪರಿಸರಾತ್ಮಕ |
|---|---|
| 1. ಅನುವಂಶೀಯತೆ | 1. ಕುಟುಂಬ |
| 2. ಶರೀರ ರಚನೆ | 2. ಶಾಲೆ |
| 3. ನರಮಂಡಲ ವ್ಯವಸ್ಥೆ | 3. ಸಮಾಜ |
| 4. ನಿರ್ನಾಳ ಗ್ರಂಥಿಗಳು | 4. ಸಮೂಹ ಮಾಧ್ಯಮ |

### 1. ಜೈವಿಕ ನಿರ್ಧಾರಕಗಳು (Biological determinants)

ಜೈವಿಕ ನಿರ್ಧಾರಕಗಳಲ್ಲಿ ಅನುವಂಶೀಯತೆ, ಶರೀರ ರಚನೆ, ನರಮಂಡಲ ವ್ಯವಸ್ಥೆ ಹಾಗೂ ನಿರ್ನಾಳ ಗ್ರಂಥಿಗಳ ಪ್ರಭಾವ ಅತ್ಯಂತ ಮಹತ್ವದ್ದು.

### ಅನುವಂಶೀಯತೆ (Heredity)

**'ಅನುವಂಶೀಯತೆ'** ಒಂದು ಜೈವಿಕ ಪ್ರಕ್ರಿಯೆಯಾಗಿದ್ದು, ವ್ಯಕ್ತಿಯ ವಿಕಾಸದಲ್ಲಿ ಮಹತ್ವದ ಪಾತ್ರವಹಿಸಿದೆ. **ಕೆಲವು ಶಾರೀರಿಕ ಹಾಗೂ ಮಾನಸಿಕ ಗುಣಲಕ್ಷಣಗಳು ತಂದೆತಾಯಿಗಳಿಂದ ಅವರ ಮಕ್ಕಳಿಗೆ ಗುಣಾಣುಗಳ ಮೂಲಕ ಹರಿದು ಬರುವ ಜೈವಿಕ ಪ್ರಕ್ರಿಯೆಯೇ 'ಅನುವಂಶೀಯತೆ'.**

ವ್ಯಕ್ತಿಯ ಸಹಜ ಗುಣಧರ್ಮಗಳ ಒಟ್ಟು ಮೊತ್ತವೇ **'ಅನುವಂಶೀಯತೆ'**. ಜೈವಿಕ ಅರ್ಥದಲ್ಲಿ ಇದು 'ಗರ್ಭಧರಿಸಿದ ಅಂಡಾಣುವಿನಲ್ಲಿರುವ ಒಟ್ಟು ಗುಣಲಕ್ಷಣಗಳ ಮೊತ್ತವಾಗಿದೆ.' ಮಾನವ ಯುಗ್ಮಕೋಶದಲ್ಲಿನ ವರ್ಣತಂತುಗಳಲ್ಲಿ ವಂಶವಾಹಿನಿ

(**Genes**) ಗಳಿಂದ ಕೂಡಿದ ಸೂಕ್ಷ್ಮ ರಾಸಾಯನಿಕ ದ್ರವ್ಯವಿರುತ್ತದೆ. ಈ ವಂಶವಾಹಿನಿಗಳೇ ಅನುವಂಶೀಯತೆಯ ಮೂಲಘಟಕಗಳು. ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ದೈಹಿಕ ಹಾಗೂ ಮಾನಸಿಕ ಗುಣಗಳನ್ನು ವಂಶಪಾರಂಪರ್ಯವಾಗಿ ವರ್ಗಾವಣೆ ಮಾಡುವಲ್ಲಿ ಇವುಗಳ ಪಾತ್ರ ಮುಖ್ಯ. ವಂಶವಾಹಿನಿಯಲ್ಲಿರುವ **ಡಿ.ಎನ್.ಎ.** ಮತ್ತು **ಆರ್.ಎನ್.ಎ.** ಗಳು ಗುಣಲಕ್ಷಣಗಳ ವರ್ಗಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಅನುವಂಶೀಯವಾದಿಗಳ ಪ್ರಕಾರ ವ್ಯಕ್ತಿಯ ಬೆಳವಣಿಗೆ ಹಾಗೂ ವಿಕಾಸ ಪರಂಪರಾಗತವಾಗಿ ಬಂದದ್ದಾಗಿದೆ. ಹೀಗಾಗಿ ವ್ಯಕ್ತಿಯ ವ್ಯಕ್ತಿತ್ವ ನಿರ್ಧಾರದಲ್ಲಿ ಅನುವಂಶೀಯತೆಯೇ ಮಹತ್ವದ ಪಾತ್ರ ವಹಿಸುತ್ತದೆ. ಗರ್ಭಧಾರಣೆಯ ಸಂದರ್ಭದಲ್ಲೇ ವಂಶವಾಹಿನಿಗಳ ಪ್ರಭಾವ ಪ್ರಾರಂಭವಾಗುವುದರಿಂದ ವ್ಯಕ್ತಿತ್ವದ ಗುಣಧರ್ಮಗಳನ್ನು ನಿರ್ಧರಿಸುವಲ್ಲಿ ಅನುವಂಶೀಯತೆಯೇ ಪ್ರಮುಖ ಪಾತ್ರವಹಿಸಿದೆ. ವ್ಯಕ್ತಿಯ ಲಿಂಗ, ದೈಹಿಕ ರಚನೆ. ಮುಖಲಕ್ಷಣ, ಶಕ್ತಿಸಾಮರ್ಥ್ಯ– ಮುಂತಾದವುಗಳಲ್ಲಿ ಅನುವಂಶೀಯತೆಯ ಪ್ರಭಾವ ಪ್ರಮುಖ. ಇವೆಲ್ಲ ವ್ಯಕ್ತಿಯ ವರ್ತನೆಯ ಮೇಲೆ ಪ್ರಭಾವ ಬೀರಿ ಅವನ ವ್ಯಕ್ತಿತ್ವ ನಿರ್ಧರಿಸುತ್ತವೆ. ಅನುವಂಶೀಯತೆಯ ಪ್ರಭಾವದ ಮೇಲೆ ನಡೆಸಿದ ಅನೇಕ ಪ್ರಯೋಗಗಳು ಹಾಗೂ ಮನೆತನದ ಅಧ್ಯಯನಗಳು ಇದಕ್ಕೆ ಸಾಕ್ಷಿಯಾಗಿವೆ.

### ಶರೀರ ರಚನೆ (**Physique**) (ದೇಹದಾರ್ಢ್ಯ)

ಶರೀರ ರಚನೆ/ ದೇಹದಾರ್ಢ್ಯ ಪದವು ವ್ಯಕ್ತಿಯ ದೇಹದ ಎತ್ತರ, ಗಾತ್ರ, ಆಕಾರ, ಮುಖ ಲಕ್ಷಣ ಮುಂತಾದವುಗಳಿಗೆ ಸಂಬಂಧಿಸಿದ್ದಾಗಿದೆ. ಇವೆಲ್ಲವೂ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತವೆ. ಎತ್ತರದ ನಿಲುವು, ಆಕರ್ಷಕ ಮೈಕಟ್ಟು, ಸುಂದರ ಮುಖಲಕ್ಷಣ ಹೊಂದಿರುವ ವ್ಯಕ್ತಿ ಸಹಜವಾಗಿ ಬಹು ಜನರಿಂದ ಆಕರ್ಷಣೆಗೆ ಒಳಗಾಗುತ್ತಾನೆ. ಇದು ಅವನ ಜೀವನ ರೀತಿ, ವರ್ತನೆ ಹಾಗೂ ಕಾರ್ಯಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತದೆ. ಇದರಿಂದ ಸಮಾಜದಲ್ಲಿ ವಿಶೇಷ ಅವಕಾಶಗಳು ದೊರಕಿ ವ್ಯಕ್ತಿತ್ವ ವಿಕಾಸಕ್ಕೆ ಸುಲಭವಾಗಿ ದಾರಿಯಾಗಬಹುದು. ಈ ಅವಕಾಶಗಳನ್ನು ವ್ಯಕ್ತಿ ಸಮರ್ಥವಾಗಿ ಬಳಸಿಕೊಂಡಿದ್ದಾದರೆ ಉತ್ತಮ ಸಾಧಕ ಆಗಬಲ್ಲನು. ವ್ಯಕ್ತಿಯ ಆಕರ್ಷಕ ಮೈಕಟ್ಟು, ಆಕರ್ಷಣೆ, ಬಣ್ಣ, ಎತ್ತರದ ನಿಲುವು –ಇವು ಅವನು ಇತರರೊಡನೆ ವರ್ತಿಸುವ ರೀತಿಯ ಮೇಲೂ ಮತ್ತು ಇತರರು ಇವನೊಂದಿಗೆ ಪ್ರತಿಕ್ರಿಯಿಸುವುದರ ಮೇಲೂ ಪ್ರಭಾವ ಬೀರುತ್ತವೆ. ಇದು ಪರೋಕ್ಷವಾಗಿ ವ್ಯಕ್ತಿತ್ವದ ಮೇಲೆ ಅಪಾರ ಪ್ರಭಾವ ಬೀರುತ್ತದೆ. ದೈಹಿಕ ಆಕರ್ಷಣೆಯಿಂದ ವ್ಯಕ್ತಿ ಬಹುಬೇಗನೆ ತನ್ನ ಸುತ್ತಲಿನವರಿಂದ ಗುರುತಿಸಲ್ಪಡುತ್ತಾನೆ. ಆ ಮೂಲಕ ಸ್ಥಾನಮಾನವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುತ್ತಾನೆ. ನಾಯಕನ ಪಟ್ಟ ಅಲಂಕರಿಸುವ ಮಟ್ಟಕ್ಕೂ ಬೆಳೆಯಬಲ್ಲನು. ಅಂತೆಯೇ ಇದಕ್ಕೆ ವ್ಯತಿರಿಕ್ತವಾಗಿ ದೈಹಿಕವಾಗಿ ಕುಬ್ಜರು, ಅಂಗವಿಕಲರು, ತೀರಾ ಕುರೂಪಿಗಳು ಸಹಜವಾಗಿ ಇತರರ ತಿರಸ್ಕಾರದಿಂದಾಗಿ ಅವರ ಜೀವನ ರೀತಿ, ವರ್ತನೆ ಹಾಗೂ ಚಟುವಟಿಕೆಗಳು ಸಹಜ ವರ್ತನೆಗಿಂತ ಭಿನ್ನವಾಗಿರುತ್ತವೆ. ಹೀಗಾಗಿ ಇತರರ ಬಗ್ಗೆ ದ್ವೇಷ, ಅಸೂಯೆ, ಕೋಪ ಮುಂತಾದ ಭಾವನೆಗಳನ್ನು ರೂಢಿಸಿಕೊಳ್ಳುವ ಸಂದರ್ಭಗಳು ಹೆಚ್ಚಾಗಿ ಇದು ಅವರ ವ್ಯಕ್ತಿತ್ವ ವಿಕಾಸಕ್ಕೆ ದಕ್ಕೆ ತರುವ ಸಾಧ್ಯತೆಗಳು ಇರುತ್ತವೆ. ಕೀಳರಿಮೆ ಭಾವನೆ ಬೆಳೆಸಿಕೊಂಡರಂತೂ ವ್ಯಕ್ತಿತ್ವ ವಿನಾಶಕ್ಕೆ ದಾರಿಯಾಗುತ್ತದೆ. ಹಲವೊಮ್ಮೆ ಅಂಗವಿಕಲತೆ ಅಥವಾ ಕುಬ್ಜತನ ಇರುವ ವ್ಯಕ್ತಿಗಳು ಬದುಕನ್ನು ಸವಾಲಾಗಿ ಸ್ವೀಕರಿಸಿದಾಗ ಅವರ ವ್ಯಕ್ತಿತ್ವ ವಿಕಾಸ ಖಂಡಿತ ಸಾಧ್ಯ. ಬಹುದೊಡ್ಡ ಸಾಧಕರಾಗುವ ಅವಕಾಶಗಳು ಸೃಷ್ಟಿಯಾಗುತ್ತವೆ. ಒಟ್ಟಾರೆ ವ್ಯಕ್ತಿಯ ದೈಹಿಕ ಗುಣಲಕ್ಷಣಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅವರ ವ್ಯಕ್ತಿತ್ವ ನಿರ್ಧಾರಕ ಅಂಶಗಳಾಗಿ ಕಾರ್ಯ ಮಾಡುತ್ತವೆ.

### ನರಮಂಡಲ ವ್ಯವಸ್ಥೆ (**Nervous System**)

ನರಮಂಡಲ ವ್ಯವಸ್ಥೆಯು ದೇಹದಲ್ಲಿ ಸಾಗುವ ಅನೇಕ ಕಾರ್ಯಚಟುವಟಿಕೆಗಳಿಗೆ ಮಧ್ಯವರ್ತಿಯಾಗಿ ಕಾರ್ಯಮಾಡುತ್ತದೆ. ಹೀಗಾಗಿ ವ್ಯಕ್ತಿಯ ಬೆಳವಣಿಗೆ ಹಾಗೂ ವಿಕಾಸದ ಮೇಲೆ ನರಮಂಡಲ ವ್ಯೂಹ ತನ್ನದೇ ಆದ ಪ್ರಭಾವ ಬೀರುತ್ತದೆ. ವ್ಯಕ್ತಿಯ ದೈಹಿಕ ಸಾಮರ್ಥ್ಯ, ಬೌದ್ಧಿಕ ಚಟುವಟಿಕೆ, ಕಲಿಕೆಯ ಸಾಧನೆ, ಸಂವೇಗಾತ್ಮಕ ವರ್ತನೆ–ಎಲ್ಲವೂ ನರವ್ಯೂಹ ವ್ಯವಸ್ಥೆ ಅವಲಂಬಿಸಿರುವುದು ವೈಜ್ಞಾನಿಕ ಸತ್ಯ. ಸನ್ನಿವೇಶ ಅಥವಾ ಸಂದರ್ಭಕ್ಕಾನುಸಾರ ಪ್ರತಿಕ್ರಿಯಿಸುವ ವ್ಯಕ್ತಿಯ ಮಾನಸಿಕ ಸಾಮರ್ಥ್ಯವನ್ನು ನರಮಂಡಲ ವ್ಯವಸ್ಥೆ ನಿರ್ಧರಿಸುತ್ತದೆ. ಪ್ರಮುಖವಾಗಿ ಮೆದುಳು ಈ ಕಾರ್ಯ ನಿಯಂತ್ರಿಸುತ್ತದೆ. ನರಮಂಡಲದ ಸರಿಯಾದ ಬೆಳವಣಿಗೆಯಿಂದ ಮಾತ್ರ ವ್ಯಕ್ತಿಯ ಮಾನಸಿಕ ಸಾಮರ್ಥ್ಯಗಳು ವೃದ್ಧಿಸಲು ಸಾಧ್ಯ. ಮೆದುಳಿನ ಯಾವುದೇ ರೀತಿಯ ಲೋಪದೋಷ ಮಾನಸಿಕ ವಿಕಾಸಕ್ಕೆ ಅಡ್ಡಿಯಾಗುತ್ತದೆ. ಅದರಂತೆ ದೈಹಿಕ ಬೆಳವಣಿಗೆ ಹಾಗೂ ಭಾವಾತ್ಮಕ ವಿಕಾಸ ನರಮಂಡಲದ ಪ್ರಭಾವಕ್ಕೆ ಒಳಗಾಗಿರುತ್ತದೆ. ಇದೆಲ್ಲವೂ ವ್ಯಕ್ತಿಯ ವರ್ತನೆ ಮೇಲೆ ಪ್ರಭಾವ ಬೀರುವ ಮೂಲಕ ವ್ಯಕ್ತಿತ್ವ ನಿರ್ಧಾರಕ ಅಂಶಗಳಾಗಿವೆ. ನರವ್ಯೂಹ ವ್ಯವಸ್ಥೆಯು ಉಸಿರಾಟ, ಜೀರ್ಣ ವ್ಯವಸ್ಥೆ, ರಕ್ತ ಪರಿಚಲನೆ

ಹಾಗೂ ಗ್ರಂಥಿಗಳ ಕಾರ್ಯಗಳ ಮೇಲೂ ಪ್ರಭಾವ ಬೀರುವ ಮೂಲಕ ವ್ಯಕ್ತಿಯ ವ್ಯಕ್ತಿತ್ವ ನಿರ್ಧರಿಸುತ್ತದೆ.

### ನಿರ್ನಾಳ ಗ್ರಂಥಿಗಳು (Endocrine glands)

ನಿರ್ನಾಳ ಗ್ರಂಥಿಗಳ ರಸಸ್ರಾವ ದೈಹಿಕ ಬೆಳವಣಿಗೆ, ಭಾವಾತ್ಮಕ ಹಾಗೂ ಮಾನಸಿಕ ವಿಕಾಸದ ಮೇಲೆ ಪ್ರಭಾವ ಬೀರು ತ್ತದೆ. ನಿರ್ನಾಳ ಗ್ರಂಥಿಗಳ ಸಮರ್ಪಕ ಕಾರ್ಯ ವ್ಯಕ್ತಿತ್ವದಲ್ಲಿ ಸಮತೋಲನ ತರುತ್ತದೆ. ಈ ಗ್ರಂಥಿಗಳ ಅತಿ ರಸಸ್ರಾವ ಅಥವಾ ಕಡಿಮೆ ರಸಸ್ರಾವ ವ್ಯಕ್ತಿಯ ವರ್ತನೆಯನ್ನು ಪ್ರಭಾವಗೊಳಿಸಿ ವ್ಯಕ್ತಿತ್ವ ವಿಕಾಸದಲ್ಲಿ ತೀವ್ರ ಬದಲಾವಣೆ ತರುತ್ತದೆ.

### ಪಿಟ್ಯೂಟರಿ ಗ್ರಂಥಿಗಳು (Pituitary Glands)

ಮೆದುಳಿನ ಕೆಳಭಾಗದಲ್ಲಿ ಬಟಾಣಿ ಕಾಳಿನ ಗಾತ್ರದಷ್ಟಿರುವ ಪಿಟ್ಯೂಟರಿ ಗ್ರಂಥಿ ಸ್ರವಿಸುವ ಹಾರ್ಮೋನ್ ದೇಹದ ವಿವಿಧ ಕಾರ್ಯಚಟುವಟಿಕೆಗಳ ಮೇಲೆ ಪ್ರಭಾವ ಬೀರುವುದರ ಜೊತೆಗೆ ಇತರ ಗ್ರಂಥಿಗಳ ಕಾರ್ಯಚಟುವಟಿಕೆಗಳನ್ನು ನಿಯಂತ್ರಿಸುತ್ತದೆ. ಇದನ್ನು ನಾಯಕ ಗ್ರಂಥಿ (**Master Gland**) ಎನ್ನುವರು. ಕಾರಣವೇನೆಂದರೆ ಇದರ ಕಾರ್ಯ ಇತರ ಗ್ರಂಥಿಗಳ ಮೇಲೂ ಪ್ರಭಾವ ಬೀರುತ್ತದೆ. ನಿರ್ನಾಳ ಗ್ರಂಥಿಯ ಮುಂದಿನ ಭಾಗ **(anterior lobe)** ಎಲುಬುಗಳ ಮೇಲೆ ಪ್ರಭಾವ ಬೀರುತ್ತದೆ. ಇದರ ಅತಿಸ್ರಾವ ಬೆಳವಣಿಗೆಯನ್ನು ಪ್ರಚೋದಿಸುವ ಮೂಲಕ ದೈತ್ಯಾಕಾರದ ದೈಹಿಕ ರಚನೆಗೆ ಕಾರಣವಾಗುತ್ತದೆ. ವ್ಯಕ್ತಿ 7 ಅಥವಾ 8 ಅಡಿ ಎತ್ತರ ಹಾಗೂ ಅಜಾನುಬಾಹು ದೇಹ ಹೊಂದುವ ಸ್ಥಿತಿ ತಲುಪುತ್ತಾನೆ. ತದ್ವಿರುದ್ಧವಾಗಿ ಈ ಗ್ರಂಥಿಗಳ ಕಡಿಮೆ ರಸಸ್ರಾವ ವ್ಯಕ್ತಿಯನ್ನು ಕುಬ್ಜನನ್ನಾಗಿಸುವ ಸಾಧ್ಯತೆಗಳಿವೆ. ಈ ರೀತಿಯ ಪರಿಣಾಮ ವ್ಯಕ್ತಿಯ ವರ್ತನೆ ಮೇಲೆ ಪರಿಣಾಮ ಬೀರುವ ಮೂಲಕ ಅವನ ವ್ಯಕ್ತಿತ್ವ ನಿರ್ಧರಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ. ನಿರ್ನಾಳ ಗ್ರಂಥಿಗಳ ಹಿಂದಿನ (**Posterior lobe**) ಭಾಗದಿಂದಾದ ರಸಸ್ರಾವ ರಕ್ತದೊತ್ತಡ ಸಮಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುತ್ತದೆ. ಇದರಲ್ಲಾದ ವ್ಯತ್ಯಾಸ ಸಹ ವ್ಯಕ್ತಿಯ ವರ್ತನೆ ಮೇಲೆ ಪ್ರಭಾವ ಬೀರುತ್ತದೆ.

### ಥೈರಾಯ್ಡ್ ಗ್ರಂಥಿಗಳು (Thyroid glands)

ಕುತ್ತಿಗೆಯ ಕೆಳಭಾಗದಲ್ಲಿರುವ ಥೈರಾಯ್ಡ್ ಗ್ರಂಥಿ **ಥೈರಾಕ್ಸಿನ್** ಎಂಬ ಹಾರ್ಮೋನನ್ನು ಸ್ರವಿಸುತ್ತದೆ. ಈ ಗ್ರಂಥಿಯ ರಸಸ್ರಾವ ವ್ಯಕ್ತಿಯ ದೈಹಿಕ ಬೆಳವಣಿಗೆ (ರಚನೆ) ಮತ್ತು ಮಾನಸಿಕ ವಿಕಾಸದ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತದೆ. ಈ ಗ್ರಂಥಿಯಿಂದಾದ ಅತಿಸ್ರಾವ ಅಸಹಜ ಉದ್ವೇಗ, ಅಸ್ಥಿರತೆ ಮತ್ತು ಕೆರಳಿಸುವ ಭಾವನೆ ಮೂಡಿಸುವ ಮೂಲಕ ವರ್ತನೆ ಮೇಲೆ ಪ್ರಭಾವ ಬೀರುತ್ತದೆ. ಇದರ ಕಡಿಮೆ ರಸಸ್ರಾವದಿಂದಾಗಿ ಸೋಮಾರಿತನ ಉಂಟಾಗುವ ಸಾಧ್ಯತೆ ಇದ್ದು ಇದು ವರ್ತನೆ ಮೇಲೆ ಪರಿಣಾಮ ಬೀರುತ್ತದೆ. ಎರಡೂ ವ್ಯಕ್ತಿಯ ವ್ಯಕ್ತಿತ್ವದ ಮೇಲೆ ಪರಿಣಾಮ ಬೀರುತ್ತದೆ.

### ಅಡ್ರಿನಲ್ ಗ್ರಂಥಿಗಳು (Adrenal glands)

ಪ್ರತಿಯೊಂದು ಮೂತ್ರಪಿಂಡದಲ್ಲಿ ಇರುವ ಈ ಚಿಕ್ಕ ಗ್ರಂಥಿ **ಅಡ್ರಿನಲಿನ್** ಎಂಬ ರಸ ಸ್ರವಿಸುತ್ತದೆ. ಇದು ಹೃದಯವನ್ನು ಪ್ರಚೋದಿಸಿ, ದೇಹದ ಎಲ್ಲಾ ಭಾಗಕ್ಕೆ ರಕ್ತದ ಸರಬರಾಜು ತೀವ್ರವಾಗಿ ಆಗುವಂತೆ ಮಾಡಿ ವ್ಯಕ್ತಿಯಲ್ಲಿ ಸಹಜಕ್ಕಿಂತ ಹೆಚ್ಚಿನ ಶಕ್ತಿ ಒದಗಿಸುತ್ತದೆ. ಇದು ವ್ಯಕ್ತಿಯನ್ನು ಹೆಚ್ಚು ಕ್ರಿಯಾಶೀಲನನ್ನಾಗಿಸುತ್ತದೆ. ಇದರ ರಸಸ್ರಾವ ಕಡಿಮೆ ಆದಾಗ ದೇಹ ಕೃಶವಾಗುತ್ತದೆ. ಅಲ್ಲದೆ ಲಿಂಗ ಅಪಕ್ವತೆ ಉಂಟಾಗಬಹುದು. ಇದೆಲ್ಲವೂ ವ್ಯಕ್ತಿಯ ವರ್ತನೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ.

### ಲಿಂಗ ಗ್ರಂಥಿಗಳು (Sex glands)

ಇವು ಲೈಂಗಿಕ ಅಣುಕೋಶಗಳ ಉತ್ಪತ್ತಿ ಮಾಡುತ್ತವೆ. ಇವು ದೇಹದ ಬೆಳವಣಿಗೆ ಹಾಗೂ ವ್ಯಕ್ತಿತ್ವ ವಿಕಾಸದಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಸ್ತ್ರೀ ಮತ್ತು ಪುರುಷ ಲಿಂಗ ಗ್ರಂಥಿಗಳು ಸ್ತ್ರೀ ಪುರುಷ ಲಕ್ಷಣಗಳನ್ನು ಮೂಡಿಸುವ ಮೂಲಕ ಸ್ತ್ರೀ ಪುರುಷ ಲಿಂಗಕ್ಕೆ ಕಾರಣವಾಗಿವೆ.

ನಿರ್ನಾಳ ಗ್ರಂಥಿಗಳ ಸಮರ್ಪಕ ರಸಸ್ರಾವ ಸಮತೋಲನ ವ್ಯಕ್ತಿತ್ವಕ್ಕೆ ದಾರಿ. ಆದರೆ ಇವುಗಳ ತೀವ್ರ ಚಟುವಟಿಕೆ ಅಥವಾ ನಿಷ್ಕ್ರಿಯತೆ ದೇಹದ ಬೆಳವಣಿಗೆ ಹಾಗೂ ವಿಕಾಸದ ಮೇಲೆ ತೀವ್ರ ಪ್ರಭಾವ ಬೀರಿ ವರ್ತನೆಯಲ್ಲಿ ಮಹತ್ವದ ಬದಲಾವಣೆ ತರುತ್ತದೆ. ವ್ಯಕ್ತಿಯ ದೈಹಿಕ ಸದೃಢತೆ, ಚಿಂತನಾ ಸಾಮರ್ಥ್ಯ, ವಿವೇಕ ಹಾಗೂ ನಿರ್ಧಾರ ಸಾಮರ್ಥ್ಯ ಎಲ್ಲವೂ ಈ ಗ್ರಂಥಿಗಳ ಆರೋಗ್ಯಕರ ಬೆಳವಣಿಗೆ ಹಾಗೂ ಕಾರ್ಯಚಟುವಟಿಕೆ ಆಧರಿಸಿದೆ. ಒಟ್ಟಾರೆ ನಿರ್ನಾಳ ಗ್ರಂಥಿಗಳ ಸರಿಯಾದ ಬೆಳವಣಿಗೆ ಹಾಗೂ ರಸಸ್ರಾವದ ಗತಿ ವ್ಯಕ್ತಿಯ ಬೆಳವಣಿಗೆ ಹಾಗೂ ವಿಕಾಸದ ಮೇಲೆ ಪ್ರಭಾವ ಬೀರಿ ಅವನ ವರ್ತನೆಯಲ್ಲಿ ಬದಲಾವಣೆ ತರುವ ಮೂಲಕ ವ್ಯಕ್ತಿತ್ವ ನಿರ್ಧರಿಸುವಲ್ಲಿ ಗಣನೀಯ ಪಾತ್ರವಹಿಸಿದೆ.

## ಪರಿಸರಾತ್ಮಕ ನಿರ್ಧಾರಕಗಳು (Environmental determinants)

ಒಬ್ಬ ವ್ಯಕ್ತಿಯ ವ್ಯಕ್ತಿತ್ವ ನಿರ್ಧರಿಸುವಲ್ಲಿ ವಂಶವಾಹಿನಿಗಳ ಪ್ರಭಾವ ಹೊರತುಪಡಿಸಿ ಉಳಿದೆಲ್ಲ ಪ್ರಭಾವವು ಪರಿಸರಾತ್ಮಕವಾದದ್ದು. ವ್ಯಕ್ತಿಯ ಸುತ್ತಮುತ್ತಲಿನ ಪರಿಸರವು ಅವನ ವ್ಯಕ್ತಿತ್ವ ನಿರ್ಧರಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಪರಿಸರವು ಜನನಪೂರ್ವ ಹಾಗೂ ಜನನೋತ್ತರ ಎರಡೂ ರೀತಿಯದ್ದಾಗಿದ್ದು ತಾಯಿ ಗರ್ಭಧರಿಸಿದಂದಿನಿಂದಲೇ ಇದರ ಪ್ರಭಾವ ಪ್ರಾರಂಭವಾಗಿ ಮಗು ಜನಿಸಿ ಬೆಳೆದು ದೊಡ್ಡವನಾದ ಮೇಲೂ ಮತ್ತು ಅವನ ಜೀವನ ಪರ್ಯಂತರವೂ ನಿರಂತರವಾಗಿ ಪ್ರಭಾವ ಬೀರುತ್ತಲೇ ಇರುತ್ತದೆ. ಹೀಗಾಗಿ ವ್ಯಕ್ತಿ ಪರಿಸರದ ಪ್ರಭಾವದಿಂದ ತನ್ನ ವರ್ತನೆಯಲ್ಲಿ ಬದಲಾವಣೆ ಕಂಡುಕೊಳ್ಳುತ್ತಲೇ ಹೋಗುತ್ತಾನೆ. ಪರಿಸರಾತ್ಮಕ ನಿರ್ಧಾರಕಗಳಲ್ಲಿ ಪ್ರಮುಖವಾಗಿ ಕುಟುಂಬ, ಶಾಲೆ, ಸಮಾಜ ಹಾಗೂ ಸಮೂಹ ಮಾಧ್ಯಮಗಳು ವ್ಯಕ್ತಿಯ ವ್ಯಕ್ತಿತ್ವ ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

### ಕುಟುಂಬ(Family)

ಕುಟುಂಬವು ಸಾಮಾಜಿಕ ಸಂಘಟನೆಯ ಮೂಲ ಘಟಕವಾಗಿದ್ದು ಮಗು ಹಾಗೂ ವ್ಯಕ್ತಿಯ ಸಾಮಾಜೀಕರಣದಲ್ಲಿ ಮಹತ್ವದ ಪಾತ್ರವಹಿಸಿದೆ. ಪ್ರಾಚೀನ ಕಾಲದಲ್ಲಿ ಕುಟುಂಬವು ಶಿಕ್ಷಣದ ಪ್ರಮುಖ ನಿಯೋಗವಾಗಿ ಕಾರ್ಯನಿರ್ವಹಿಸುತ್ತಿತ್ತು. ಕುಟುಂಬ ಎನ್ನುವುದು ತಂದೆ ತಾಯಿಗಳ ಮತ್ತು ಮಕ್ಕಳ ನಿರಂತರ ಸಹಯೋಗವುಳ್ಳ ಒಂದು ಘಟಕ. ಇದು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಭದ್ರ ತಳಹದಿ ಹಾಕುತ್ತದೆ. ಇತಿಹಾಸದ ಪುಟಗಳನ್ನೊಮ್ಮೆ ತಿರುಗಿಸಿ ನೋಡಿದಾಗ ಸಮಾಜದಲ್ಲಿ ಆದರ್ಶ ವ್ಯಕ್ತಿಗಳಾಗಿ ಮೆರೆದ ವ್ಯಕ್ತಿಗಳ ಶಿಕ್ಷಣ ಬಹುಪಾಲು ಕುಟುಂಬದಿಂದಲೇ ಆಗಿರುವುದು ತಿಳಿದು ಬರುತ್ತದೆ. **'ಮೂರು ವರ್ಷದ ಬುದ್ಧಿ ನೂರು ವರ್ಷದವರೆಗೆ'** ಎನ್ನುವಂತೆ ಕುಟುಂಬದಲ್ಲಿ ಮಗು ಆ ವಯಸ್ಸಿನಲ್ಲಿ ಪಡೆಯುವ ತಿಳಿವಳಿಕೆ ಹಾಗೂ ಅನುಭವ ಅವನ ಮುಂದಿನ ಭವಿಷ್ಯಕ್ಕೆ ಆಧಾರವಾಗುತ್ತದೆ.

ಕುಟುಂಬದ ಹಿರಿಯರ ಅನುಕರಣೆ ಮೂಲಕ ಬೆಳೆಯುವ ಮಗು ಅವರ ಆದರ್ಶಗಳನ್ನು ರೂಢಿಸಿಕೊಂಡು ವ್ಯಕ್ತಿತ್ವ ವಿಕಾಸ ಮಾಡಿಕೊಳ್ಳುತ್ತಾನೆ. ಮಗುವಿನ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿ ಅವನ ದೈಹಿಕ ಸದೃಢತೆ ಮಾಡುವ ಮೂಲಕ ಮಾನಸಿಕ ಸದೃಢತೆಗೆ ಅವನನ್ನು ಸಿದ್ಧಗೊಳಿಸುತ್ತದೆ. ಮಗುವಿನ ಸಾಮಾಜೀಕರಣದಲ್ಲಿ ಕುಟುಂಬದ ಪಾತ್ರ ಅತ್ಯಂತ ಪ್ರಮುಖವಾದದ್ದು. ಜೈವಿಕ ಮಗುವನ್ನು ಸಾಮಾಜಿಕ ಮಗುವನ್ನಾಗಿ ಪರಿವರ್ತಿಸುವ ಕಾರ್ಯ ಕುಟುಂಬದ್ದು. ಮಗು ಅಳುವುದು, ನಗುವುದು, ಮಾತನಾಡುವುದು, ಆಡುವುದು, ಓದು, ಬರಹ, ಉಚ್ಚಾರಣೆ ಮುಂತಾದ ಮೂಲಭೂತ ಜ್ಞಾನವನ್ನು ಕುಟುಂಬದಲ್ಲಿಯೇ ಕಲಿಯುತ್ತಾನೆ. ಈ ಜ್ಞಾನ ಅವನ ಮುಂದಿನ ಶಿಕ್ಷಣಕ್ಕೆ ಆಧಾರವಾಗುತ್ತದೆ. ಶೈಶವ ಹಂತದಲ್ಲಿನ ಮಗು ತನ್ನ ಮೂಲಪ್ರವೃತ್ತಿಯಿಂದ ಮಾನವ ಪ್ರವೃತ್ತಿಗೆ ಬದಲಾವಣೆ ಹೊಂದುತ್ತಾನೆ. **"ಮಗುವನ್ನು ಬೆಳೆಸುವಲ್ಲಿ, ಅವನಿಗೆ ಸಮಾಜದ ಸಂಸ್ಕೃತಿಯ ಪರಿಚಯ ಮಾಡಿಸುವಲ್ಲಿ ಹಾಗೂ ಅವನ ಸಾಮಾಜೀಕರಣ ಕಾರ್ಯದಲ್ಲಿ ಸಹಾಯಕವಾಗುವ ಹಾಗೂ ಅವನ ಚಾರಿತ್ರ್ಯ ಸಂವರ್ಧನೆ ಮಾಡಿ ಅವನ ಪರಿಪೂರ್ಣ ವ್ಯಕ್ತಿತ್ವ ವಿಕಾಸಕ್ಕೆ ಕಾರಣವಾಗುವ ಏಕೈಕ ಸಂಸ್ಥೆಯೇ ಕುಟುಂಬ" ಎಂದು ಫ್ರ್ಯಾಂಕ್ ಅಭಿಪ್ರಾಯಪಡುತ್ತಾರೆ.**

ವ್ಯಕ್ತಿಯ ಆಕರ್ಷಕ ನಿಲುವು, ಸದೃಢದೇಹ, ಅಂಗಾಂಗಳ ಸರಿಯಾದ ಬೆಳವಣಿಗೆ ಮುಂತಾದವು ಅವನ ವ್ಯಕ್ತಿತ್ವಕ್ಕೆ ಮೆರುಗು ಕೊಡುತ್ತವೆ. ಕುಟುಂಬ ಮಗುವಿನ ದೈಹಿಕ ಸದೃಢತೆ ತರುವ ಎಲ್ಲ ರೀತಿಯ ಸೌಲಭ್ಯಗಳನ್ನು ಕಲಿಸಿ ಅವನ ವ್ಯಕ್ತಿತ್ವ ವಿಕಾಸಕ್ಕೆ ಕಾರಣವಾಗಬೇಕು. ಸಮಯಕ್ಕೆ ಸರಿಯಾದ ಪೌಷ್ಟಿಕಾಂಶಗಳಿಂದ ಕೂಡಿದ ಆಹಾರ, ಶುಚಿತ್ವ, ವ್ಯಾಯಾಮ, ಪ್ರಶಾಂತ ನಿದ್ರೆ, ಮನೋರಂಜನಾ ಚಟುವಟಿಕೆಗಳು, ಉತ್ತಮ ಆರೋಗ್ಯದ ಹವ್ಯಾಸಗಳು– ಮುಂತಾದ ಸೌಲಭ್ಯಗಳಿಂದ ಕೂಡಿದ ಕುಟುಂಬ ಮಗುವಿನ ದೈಹಿಕ ಸದೃಢತೆ ವರ್ಧಿಸಿ ಅವನ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತದೆ.

ಮಕ್ಕಳ ಮಾನಸಿಕ ವಿಕಾಸದ ದೃಷ್ಟಿಯಿಂದ ಕುಟುಂಬ ಭದ್ರತಳಹದಿಯಂತೆ, **'ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರು'** ಎಂಬಂತೆ ಬುದ್ಧಿವಂತ ಪೋಷಕರಿಂದ ಕೂಡಿದ ಮನೆ ಮಕ್ಕಳ ಮಾನಸಿಕ ವಿಕಾಸ ಮಾಡಿ ಅವರ ವ್ಯಕ್ತಿತ್ವ ರೂಪಿಸುತ್ತದೆ. ವಿಚಾರವಂತ, ವಿವೇಕಶೀಲ ಹಾಗೂ ವಿವೇಚನೆಯುಳ್ಳ ಹಿರಿಯರು ಮಕ್ಕಳ ವ್ಯಕ್ತಿತ್ವದ ಮೇಲೆ ತಮ್ಮ ಪ್ರತಿಭಾವಂತಿಕೆಯ ಪ್ರಭಾವ ಬೀರುವರು.

ಸಾಮಾಜಿಕ ಹೊಂದಾಣಿಕೆ ಹಾಗೂ ಸಮರಸ ಜೀವನದಿಂದ ಕೂಡಿದ ಕುಟುಂಬಗಳು ಸಾಮಾಜಿಕ ಸಾಮರ್ಥ್ಯತೆಯುಳ್ಳ ವ್ಯಕ್ತಿತ್ವ ಹೊಂದಿದ ಮಕ್ಕಳನ್ನು ರೂಪಿಸುತ್ತದೆ.

**ಹಿರಿಯರ ಪಾತ್ರ :** ಕುಟುಂಬದಲ್ಲಿ ಹಿರಿಯರ ಪ್ರೀತಿ, ವಿಶ್ವಾಸ, ರೀತಿ ನೀತಿ, ಕ್ರಿಯಾಶೀಲತೆ, ಮಾರ್ಗದರ್ಶನ ಎಲ್ಲವೂ ಸಕಾರಾತ್ಮಕ ಪ್ರಭಾವ ಬೀರಿದರೆ, ಬೇಜವಾಬ್ದಾರಿ, ನಿರ್ಲಕ್ಷ, ಸ್ವಾರ್ಥ. ಸಂಕುಚಿತ ಭಾವನೆಗಳು ನಕಾರಾತ್ಮಕ ಪ್ರಭಾವ ಬೀರುತ್ತವೆ. ಕುಟುಂಬದ ಸದಸ್ಯರ ಭಾವಾತ್ಮಕ ವಿಚಾರಗಳಾದ ಪ್ರೀತಿ, ಪ್ರೇಮ, ಸಹನೆ, ಕರುಣೆ, ಸಹಾನುಭೂತಿ, ತಾಳ್ಮೆ–

ಮುಂತಾದ ಮನೋಭಾವಗಳು ಮಕ್ಕಳ ವ್ಯಕ್ತಿತ್ವದ ಮೇಲೆ ಪರಿಣಾಮ ಬೀರುತ್ತವೆ. ಅನುಕರಣೆಯಿಂದ ಕಲಿಯುವ ಮಗು ಹಿರಿಯರ ಭಾವಾತ್ಮಕ ಮನೋಭಾವನೆಗಳಿಗೆ ತಕ್ಕಂತೆ ವರ್ತನೆ ವ್ಯಕ್ತಿಪಡಿಸುತ್ತಾನೆ ಹಾಗೂ ಅದೇ ವರ್ತನೆಗಳನ್ನು ರೂಡಿಸಿಕೊಳ್ಳುತ್ತಾನೆ.

**ಕೊಲಂಬಿಯಾ ವಿಶ್ವವಿದ್ಯಾಲಯದ ಸೈಮಂಡ್ಸ್ ಅಧ್ಯಯನದ ಪ್ರಮುಖ ಅಂಶಗಳು ಹೀಗಿವೆ.**

ಹಿರಿಯರ ಪ್ರೀತಿ ವಾತ್ಸಲ್ಯದಲ್ಲಿ ಬೆಳೆದು ಅವರಿಂದ ಸ್ವೀಕರಿಸಲ್ಪಟ್ಟ ಮಕ್ಕಳು ಭಾವಾತ್ಮಕ ಸ್ಥಿರತೆ ಹೊಂದಿದ ವ್ಯಕ್ತಿತ್ವ ರೂಪಿಸಿಕೊಂಡಿರುವುದು ತಿಳಿದು ಬಂದಿದೆ. ಅಂತೆಯೇ ತಂದೆ ತಾಯಿಗಳಿಂದ ತಿರಸ್ಕರಿಸಲ್ಪಟ್ಟ ಹಾಗೂ ಪ್ರೀತಿ ವಿಶ್ವಾಸಗಳಿಂದ ವಂಚಿತರಾದ ಮಕ್ಕಳು ಭಾವಾತ್ಮಕ ಅಸ್ಥಿರತೆ ಹೊಂದಿದ್ದು ವಿರೋಧಿ ಪ್ರವೃತ್ತಿ, ಬಳಲಿಕೆ, ಆತಂಕ ಮುಂತಾದ ಗುಣ ಹೊಂದಿದ ವ್ಯಕ್ತಿತ್ವ ರೂಪಿಸಿಕೊಂಡಿರುವುದು ತಿಳಿದುಬಂದಿದೆ. **ಬರ್ಟ್** ಅವರ ಅಧ್ಯಯನದ ಪ್ರಕಾರ ಶೇಕಡ 58ರಷ್ಟು ಬಾಲಾಪರಾಧಿ ಮನೋಭಾವಗಳಿಗೆ ಕೌಟುಂಬಿಕ ಪರಿಸರವೇ ಕಾರಣವಾಗಿದೆ. **ಸಿಗ್‌ಮಂಡ್ ಪ್ರಾಯ್ಡ್** ಹೇಳುವಂತೆ ಪೋಷಕರ ಅತಿಯಾದ ಪ್ರೀತಿ ಮಕ್ಕಳ ವ್ಯಕ್ತಿತ್ವ ನಾಶಪಡಿಸುತ್ತದೆ.

**ತಾಯಿಯ ಪಾತ್ರ :** ಮಗುವಿನ ಬೆಳವಣಿಗೆಯ ಪ್ರಾರಂಭಿಕ ಹಂತಗಳಲ್ಲಿ ತಾಯಿಯ ಪಾತ್ರ ಮಹತ್ವದ್ದು. ಉತ್ತಮ ತಾಯಿಯೇ ಮಗುವಿನ ಉತ್ತಮ ಶಿಕ್ಷಕಿ. ಅವಳ ಮಡಿಲೇ ಮಗುವಿನ ಶಾಲೆ. ತಾಯಿಯ ಪ್ರೀತಿ, ವಿಶ್ವಾಸ, ಅನಕಂಪ, ರಕ್ಷಣೆ, ಪೋಷಣೆ ,ವರ್ತನೆ ಹಾಗೂ ಮಾರ್ಗದರ್ಶನ ಎಲ್ಲವೂ ಮಗುವಿನ ಆ ಕ್ಷಣದಲ್ಲಿ ಪ್ರಭಾವ ಬೀರುವುದಷ್ಟೇ ಅಲ್ಲದೇ ಅವನ ಭಾವಿ ಜೀವನಕ್ಕೆ ಅಡಿಪಾಯ ಎಂಬುದು ಸತ್ಯ. **ಎರಿಕ್‌ಸನ್** ಸಿದ್ಧಾಂತದ ಪ್ರಕಾರ ತಾಯಿ ಮಗುವಿನ ಪ್ರಾರಂಭದ ಅಂತರ್‌ಕ್ರಿಯೆಗಳು ಮಗುವಿನ ಬೆಳವಣಿಗೆ ಹಾಗೂ ವಿಕಾಸದ ಭದ್ರ ತಳಹದಿಯಾಗಿ ಮಗುವಿನ ಭಾವೀ ಜೀವನದಲ್ಲಿ ಬದುಕಿನ ಬಗ್ಗೆ ಅವನ ವಿಶ್ವಾಸ ಅಥವಾ ಅವಿಶ್ವಾಸಗಳ ಬೆಳವಣಿಗೆಗೆ ದಾರಿಯಾಗುತ್ತದೆ. **'ನೂರು ಶಾಲಾ ಶಿಕ್ಷಕರಿಗಿಂತ ಒಬ್ಬ ಉತ್ತಮ ತಾಯಿ ಲೇಸು'** ಎನ್ನುವ ವಿಚಾರವಂತರ ಮಾತು ಸತ್ಯ.

ಶ್ರೇಷ್ಠ ವ್ಯಕ್ತಿತ್ವ ಹೊಂದಿದ ಅನೇಕಾನೇಕ ವ್ಯಕ್ತಿಗಳ ಸಾಧನೆ ಹಾಗೂ ಖ್ಯಾತಿಗೆ ಅವರ ತಾಯಿಯ ಪ್ರೇರಣೆ ಹಾಗೂ ಮಾರ್ಗದರ್ಶನವೇ ಕಾರಣವಾಗಿರುವುದಕ್ಕೆ ಇತಿಹಾಸವೇ ಸಾಕ್ಷಿ. ಕುಟುಂಬದಲ್ಲಿ ಇತರರಿಗಿಂತ ತಾಯಿಯ ವರ್ತನೆ ಹಾಗೂ ಮಾರ್ಗದರ್ಶನ ಮಗುವಿನ ಭಾವೀ ಜೀವನದ ವ್ಯಕ್ತಿತ್ವಕ್ಕೆ ತಳಹದಿ ಎಂಬ ಮಾತನ್ನು ಯಾರೂ ತಳ್ಳಿ ಹಾಕುವಂತಿಲ್ಲ.

**ಕುಟುಂಬದ ಗಾತ್ರ:** ಕುಟುಂಬದ ಗಾತ್ರ ಮಕ್ಕಳ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತದೆ. ಅತಿ ದೊಡ್ಡ ಮಕ್ಕಳಿರುವ ಕುಟುಂಬದಲ್ಲಿ ಎಲ್ಲ ಮಕ್ಕಳಿಗೂ ಮೂಲಭೂತ ಅವಶ್ಯಕತೆ ಹಾಗೂ ಶಿಕ್ಷಣದ ಎಲ್ಲ ಸೌಲಭ್ಯಗಳನ್ನು ಕಲ್ಪಿಸುವುದು ಕಷ್ಟಸಾಧ್ಯ. ಮಿತ ಕುಟುಂಬಗಳಲ್ಲಿ ಮಕ್ಕಳಿಗೆ ಆರೋಗ್ಯ ಹಾಗೂ ಶಿಕ್ಷಣ ಕುರಿತಂತೆ ಉತ್ತಮ ಸೌಲಭ್ಯ ಕಲ್ಪಿಸಿಕೊಡಲು ಸಾಧ್ಯವಾಗಿ ಅವರ ಬೆಳವಣಿಗೆ ಹಾಗೂ ವಿಕಾಸ ಉತ್ತಮವಾಗುವಂತೆ ನೋಡುವ ಸಾಧ್ಯತೆಗಳು ಹೆಚ್ಚು.

**ಮಗುವಿನ ಜನನ ಅನುಕ್ರಮ ಸ್ಥಾನ:** ಕುಟುಂಬದಲ್ಲಿ ಮಕ್ಕಳ ಜನನ ಅನುಕ್ರಮ ಸ್ಥಾನ ಕೂಡ ಅವರ ವ್ಯಕ್ತಿತ್ವ ವಿಕಾಸದ ಮೇಲೆ ಪ್ರಭಾವ ಬೀರುತ್ತದೆ. ಹಿರಿಯ ಮಗುವಿನ ಸ್ಥಾನ ಹಾಗೂ ಜವಾಬ್ದಾರಿ ಉಳಿದ ಮಕ್ಕಳಿಗಿಂತ ಭಿನ್ನ. ಹಿರಿಯ ಮಗುವಿಗೆ ಉತ್ತಮ ಸೌಲಭ್ಯಗಳು ದೊರೆತು ಸಂತೃಪ್ತಿ ವಾತಾವರಣ ಸಿಗುವ ಸಾಧ್ಯತೆಗಳು ಹೆಚ್ಚು. ಅವನು ಎಲ್ಲರ ಪ್ರೀತಿಗೆ ಪಾತ್ರನಾಗಬಹುದು. ಜವಾಬ್ದಾರಿಯ ವ್ಯಕ್ತಿಯಾಗಿಯೂ ಬೆಳೆದು ಬರುವ ಸದಾವಕಾಶ ಹೊಂದಿರುತ್ತಾನೆ. ಆದರೆ ಆ ಕುಟುಂಬದಲ್ಲಿ ಮತ್ತೊಂದು ಮಗುವಿನ ಜನನದ ನಂತರ ಇವನು ನಿರ್ಲಕ್ಷಿಸಲ್ಪಟ್ಟಲ್ಲಿ ಅದು ಅವನ ವ್ಯಕ್ತಿತ್ವದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು. ಅವನಲ್ಲಿದ್ದ ಶಾಂತ ಸ್ವಭಾವ, ದ್ವೇಷ, ಅಸೂಯೆಗೆ ತಿರುಗಬಹುದು. ಚಿಕ್ಕವನು ಹಿರಿಯನೊಂದಿಗೆ ಪೈಪೋಟಿ ನಡೆಸಿ ವಿಫಲನಾಗಿ ದ್ವೇಷ, ಹಠ, ಅಸೂಯೆಯ ಭಾವನೆಗಳನ್ನು ಮೂಡಿಸಿಕೊಳ್ಳಬಹುದು. ಇವೆಲ್ಲವೂ ವ್ಯಕ್ತಿತ್ವ ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಜನನ ಅನುಕ್ರಮ ಸ್ಥಾನವೊಂದೇ ಹೆಚ್ಚಿನ ಮಹತ್ವ ಹೊಂದಿದೆ ಎಂದು ಹೇಳಲಾಗದು. ಕುಟುಂಬದ ಪರಿಸರ, ವಾತಾವರಣ, ಹಿರಿಯರ ಪ್ರೀತಿ ವಿಶ್ವಾಸ, ತಾರತಮ್ಯ ರಹಿತ ಹಾಗೂ ಸಮಯೋಚಿತ ಮಾರ್ಗದರ್ಶನ ಮಗುವಿನ ವ್ಯಕ್ತಿತ್ವ ನಿರ್ಧರಿಸುವಲ್ಲಿ ಮಹತ್ವದ ಪ್ರಭಾವ ಬೀರುತ್ತದೆ. **ಮರ್ಫಿ ಮತ್ತು ನಿವ್‌ಕುಂಬ್** ಅವರ 50 ಅಧ್ಯಯನಗಳ ಆಧಾರದ ಮೇಲೆ ಹೇಳುವುದಾದರೆ ಮಕ್ಕಳ ವ್ಯಕ್ತಿತ್ವ ನಿರ್ಧರಿಸುವಲ್ಲಿ ಅವನ ಜನನ ಅನುಕ್ರಮ ಸ್ಥಾನಕ್ಕಿಂತ ಪೋಷಕರ ಮನೋಭಾವನೆ ಕಾರಣವಾಗುತ್ತದೆ.

**ಆರ್ಥಿಕ ಪರಿಸ್ಥಿತಿ:** ಕುಟುಂಬದ ಆರ್ಥಿಕ ಪರಿಸ್ಥಿತಿ ಸಹ ಮಕ್ಕಳ ವಿಕಾಸದಲ್ಲಿ ಪ್ರಭಾವ ಬೀರುತ್ತದೆ. ಆರ್ಥಿಕ ಸೌಲಭ್ಯ ಹೆಚ್ಚು ಹೊಂದಿರುವ ಮಕ್ಕಳು ಉನ್ನತ ಶಿಕ್ಷಣ ಪಡೆಯುವ ಅವಕಾಶ ಹೊಂದಿ ವ್ಯಕ್ತಿತ್ವ ರೂಪಿಸಿಕೊಳ್ಳಲೂ ಸಾಧ್ಯವಿದೆ ಅಥವಾ

ಹಣದ ದುರುಪಯೋಗಕ್ಕೆ ಅವಕಾಶವಾಗಬಹುದು. ಹಾಗೆಯೇ ಬಡಕುಟುಂಬದಲ್ಲಿ ಬೆಳೆಯುವ ಮಕ್ಕಳು ಜೀವನದಲ್ಲಿ ಏನಾದರೂ ಸಾಧಿಸಬೇಕೆಂಬ ಛಲದಿಂದ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬಹುದು ಅಥವಾ ಯಾವ ಅವಕಾಶವೂ ಸಿಗದೆ ನಿರಾಶಾವಾದಿಗಳಾಗಿ ವ್ಯಕ್ತಿತ್ವ ಹಾಳು ಮಾಡಿಕೊಳ್ಳಲೂಬಹುದು.

**ನೈತಿಕ ಹಾಗೂ ಸಾಂಸ್ಕೃತಿಕ ವಾತಾವರಣ:** ಕುಟುಂಬದ ನೈತಿಕ ಹಾಗೂ ಸಾಂಸ್ಕೃತಿಕ ವಾತಾವರಣ ಮಕ್ಕಳನ್ನು ನೈತಿಕ ಹಾಗೂ ಸುಸಂಸ್ಕೃತ ಮಕ್ಕಳನ್ನಾಗಿ ರೂಪಿಸುವಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಇದು ಅವನ ವ್ಯಕ್ತಿತ್ವ ವಿಕಾಸದ ಮೇಲೆ ಮಹತ್ವದ ಪ್ರಭಾವ ಬೀರುತ್ತದೆ. ಮಗು ಜನಿಸಿ ದೊಡ್ಡವನಾಗುವುದು ಕುಟುಂಬದ ಪರಿಸರದಲ್ಲಿ. ಕುಟುಂಬದಲ್ಲಿರುವ ಸದಸ್ಯರ ಆಚಾರ, ವಿಚಾರ, ನಡೆನುಡಿ, ಸಾಂಪ್ರದಾಯಿಕ ಆಚರಣೆಗಳು, ಆಸಕ್ತಿ, ಸಾಮರ್ಥ್ಯ, ಅಭಿವ್ಯಕ್ತಿಗಳು, ಬುದ್ಧಿವಂತಿಕೆ ಕೌಶಲ ಮತ್ತು ಹವ್ಯಾಸ– ಇವೆಲ್ಲವೂ ಬೆಳೆಯುವ ಮಗುವಿನ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತವೆ.

ಪ್ರಾಚೀನ ಕಾಲದ ಕುಟುಂಬಗಳಲ್ಲಿ ನೀತಿವಂತ ಸುಸಂಸ್ಕೃತ ವ್ಯಕ್ತಿಗಳೇ ಹೆಚ್ಚಿದ್ದು ಆ ವಾತಾವರಣದಲ್ಲಿ ಬೆಳೆದ ಮಕ್ಕಳು ಸದ್ಗುಣ ಸಂಪನ್ನರಾಗಿ ಸುಸಂಸ್ಕೃತ ವ್ಯಕ್ತಿಗಳಾಗಿ ವ್ಯಕ್ತಿತ್ವ ರೂಪಿಸಿಕೊಂಡಿರುವುದು ಇತಿಹಾಸದಿಂದ ತಿಳಿದುಬರುತ್ತದೆ. ಶಿವಾಜಿ, ಗಾಂಧೀಜಿ, ಅರವಿಂದರು ಮುಂತಾದ ಆದರ್ಶ ವ್ಯಕ್ತಿಗಳ ವ್ಯಕ್ತಿತ್ವಕ್ಕೆ ಕಾರಣವೇ ಕುಟುಂಬ ಎಂದ ಮೇಲೆ ಒಬ್ಬ ವ್ಯಕ್ತಿಯ ವ್ಯಕ್ತಿತ್ವದ ಮೇಲೆ ಕುಟುಂಬ ಯಾವ ರೀತಿ ಪ್ರಭಾವ ಬೀರಬಲ್ಲದು ಎಂದು ಊಹಿಸಬಹುದು. 'ಮನೆಯಂತೆ ಮಕ್ಕಳು' ಎನ್ನುವ ಹಾಗೆ ಮನೆಯ ಸುಸಂಸ್ಕೃತ ಹಾಗೂ ಆರೋಗ್ಯಕರ ವಾತಾವರಣ ಸುಸಂಸ್ಕೃತ ಹಾಗೂ ಉತ್ತಮ ವ್ಯಕ್ತಿತ್ವವುಳ್ಳ ವ್ಯಕ್ತಿಗಳ ನಿರ್ಮಾಣದ ತಳಹದಿಯಾಗಿದೆ.

## ಶಾಲೆ (School)

ಶಾಲೆಯೊಂದು ಶಿಕ್ಷಣದ ಔಪಚಾರಿಕ ಸಂಸ್ಥೆ ನೇರವಾಗಿ ಮುಖಾಮುಖಿಯಾಗಿ ಕ್ರಮಬದ್ಧವಾದ ರೀತಿಯಲ್ಲಿ ಹಲವು ಸಾಂಪ್ರದಾಯಿಕ ವಿಷಯ ಬೋಧನೆಯ ಕಾರ್ಯಕ್ಷೇತ್ರವೇ ಶಾಲೆ. ಮಗುವಿನ ಸರ್ವಾಂಗೀಣ ವ್ಯಕ್ತಿತ್ವ ವಿಕಾಸದ ಗುರಿ ಶಾಲೆಯದು. ಮಕ್ಕಳ ಶಾರೀರಿಕ, ಬೌದ್ಧಿಕ, ಸಾಮಾಜಿಕ, ನೈತಿಕ ಹಾಗೂ ಸಾಂಸ್ಕೃತಿಕ ವಿಕಾಸ ಕಾರ್ಯದಲ್ಲಿ ಶಾಲೆಯಂತಹ ಪ್ರತ್ಯಕ್ಷ ಸಂಸ್ಥೆ ಮತ್ತೊಂದಿಲ್ಲ. ಮಕ್ಕಳ ವ್ಯಕ್ತಿತ್ವ ವಿಕಾಸದಲ್ಲಿ ಮನೆ ಹಾಕಿದ ಭದ್ರ ತಳಹದಿಯನ್ನು ಶಾಲೆ ಉಳಿಸಿ ಮಗುವಿನ ಭಾವೀ ಜೀವನ ಸುಂದರ, ಸುಖಮಯ ಹಾಗೂ ಯಶಸ್ವಿಯಾಗುವಂತೆ ಮಾಡುತ್ತದೆ.

ಮಕ್ಕಳ ವ್ಯಕ್ತಿತ್ವದ ಬಹುಮುಖ್ಯ ಅಂಶಗಳಲ್ಲಿ ಒಂದಾದ ದೈಹಿಕ ಸದೃಢತೆ ಉಂಟುಮಾಡುವಲ್ಲಿ ಶಾಲೆಯು ಅತ್ಯಂತ ಉತ್ತಮ ಪರಿಸರವಾಗಬಲ್ಲದು. ವಿವಿಧ ಆಟ ಮೇಲಾಟಗಳ ವ್ಯಾಯಾಮ ಮತ್ತಿತರ ದೈಹಿಕ ಸದೃಢತೆ ತರುವಂತಹ ಕಾರ್ಯಚಟುವಟಿಕೆಗಳಲ್ಲಿ ವ್ಯವಸ್ಥಿತವಾಗಿ ಸಂಘಟಿಸುವುದರ ಮೂಲಕ ಮಕ್ಕಳಲ್ಲಿ ದೈಹಿಕ ಸದೃಢತೆ ತಂದು ಮಕ್ಕಳ ವ್ಯಕ್ತಿತ್ವ ರೂಪಿಸುತ್ತದೆ. ಉತ್ತಮ ಶಾಲೆಯು ಮಾತ್ರ ಈ ಕಾರ್ಯ ಸಾಧಿಸಬಲ್ಲದು. ಸುಸಂಘಟಿಸಿದ ವಿವಿಧ ದೈಹಿಕ ಚಟುವಟಿಕೆಗಳು ಮಗುವಿನ ದೇಹದ ಆಕಾರ, ನಿಲುವು, ಗಾತ್ರ ಅಂಗಾಂಗಳಿಗೆ ಸರಿಯಾದ ರೂಪ ತಂದುಕೊಟ್ಟು ಅವನ ವ್ಯಕ್ತಿತ್ವಕ್ಕೆ ಮೆರುಗು ತರುತ್ತದೆ. ಈ ದೈಹಿಕ ಸದೃಢತೆ ಅವನ ಮಾನಸಿಕ ಸದೃಢತೆಗೆ ದಾರಿ ಮಾಡಿಕೊಡುತ್ತದೆ.

ಶಾಲೆಯ ಅತ್ಯಂತ ಪ್ರಮುಖ ಕಾರ್ಯಗಳಲ್ಲೊಂದಾದ ಜ್ಞಾನಾರ್ಜನೆ ಶಾಲಾ ಮಕ್ಕಳ ವ್ಯಕ್ತಿತ್ವ ವಿಕಾಸದಲ್ಲಿ ಮಹತ್ವದ ಪಾತ್ರ ವಹಿಸಿದೆ. ಬುದ್ಧಿವಂತ, ಮೇಧಾವಿ ಶಿಕ್ಷಕರ ಆಸಕ್ತಿಯುತ ಹಾಗೂ ಅರ್ಥಪೂರ್ಣ ಬೋಧನೆ ಮಕ್ಕಳನ್ನು ಬುದ್ಧವಂತರನ್ನಾಗಿ ಮಾಡುವುದರಲ್ಲಿ ಸಂಶಯವಿಲ್ಲ. ಚರ್ಚೆ, ತರ್ಕ, ರಸಪ್ರಶ್ನೆ, ವಿಚಾರಗೋಷ್ಠಿ, ಪ್ರವಾಸ, ಪ್ರಯೋಗ ಮುಂತಾದ ಕ್ರಿಯಾತ್ಮಕ ಕಾರ್ಯ ಚಟುವಟಿಕೆಗಳ ಮೂಲಕ ಶಿಕ್ಷಕನು ಮಕ್ಕಳ ಬುದ್ಧಿವಿಕಾಸ ಮಾಡಿ ಅವರ ವ್ಯಕ್ತಿತ್ವ ವಿಕಾಸ ಮಾಡಬಹುದು. ಶಾಲಾ ಗ್ರಂಥಾಲಯ ವಾಚನಾಲಯ, ಸಾಹಿತ್ಯಕ್ಕೆ ಸಂಬಂಧಿಸಿದ ಚರ್ಚಾಗೋಷ್ಠಿಗಳು ವಿಷಯಕ್ಕೆ ಸಂಬಂಧಿಸಿದ ವಿಚಾರಸಂಕಿರಣಗಳು– ಇವೆಲ್ಲಾ ಮಕ್ಕಳ ಬೌದ್ಧಿಕ ಸಾಮರ್ಥ್ಯ ಹೆಚ್ಚಿಸಿ ಅವರ ವ್ಯಕ್ತಿತ್ವ ವಿಕಾಸಕ್ಕೆ ದಾರಿಯಾಗುತ್ತದೆ.

ಶಾಲೆಯಲ್ಲಿ ನಡೆಯುವ ಸಾಮೂಹಿಕ ಚಟುವಟಿಕೆಗಳಾದ ಶ್ರಮದಾನ , ರಾಷ್ಟ್ರೀಯ ಹಾಗೂ ಮಹಾತ್ಮರ ದಿನಾಚರಣೆಗಳು, ಸಾಮೂಹಿಕ ನೃತ್ಯ ಮನೋರಂಜನಾ ಕಾರ್ಯಕ್ರಮಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಮುಂತಾದ ಸಹಪಠ್ಯ ಚಟುವಟಿಕೆಗಳ ವ್ಯವಸ್ಥಿತ ಸಂಘಟನೆ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೈದು ಅವರ ವ್ಯಕ್ತಿತ್ವ ವಿಕಾಸದಲ್ಲಿ ಸಹಾಯ ಮಾಡಬಲ್ಲದು. ಶಾಲೆಯ ಇತರ ಸಹ–ಪಠ್ಯ ಚಟುವಟಿಕೆಗಳಾದ ಭಾಷಣ, ಚರ್ಚೆ, ಪ್ರಬಂಧ, ಆಶುಭಾಷಣ, ಕವಿತೆ ರಚನೆ, ಸ್ವರಚಿತ ಕಾವ್ಯವಾಚನ ಸ್ಪರ್ಧೆ, ಏಕಪಾತ್ರಾಭಿನಯ, ನಾಟಕ, ನೃತ್ಯ ಹಾಡು– ಮುಂತಾದವುಗಳ ಸುಸಂಘಟಿತ ಕಾರ್ಯಕ್ರಮಗಳು ಮಕ್ಕಳ ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗುತ್ತದೆ.

ಹೀಗೆ ಶಾಲಾ ವಾತಾವರಣ ಶಾಲಾ ಆಡಳಿತ, ಮುಖ್ಯಸ್ಥರು, ಶಿಕ್ಷಕರು, ಶಿಕ್ಷಕೇತರರು, ಪಠ್ಯ ಹಾಗೂ ಸಹ–ಪಠ್ಯ ಚಟುವಟಿಕೆಗಳು, ಶಾಲಾ ಗ್ರಂಥಾಲಯ, ಆಟದ ಮೈದಾನ ಎಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಮಕ್ಕಳ ವ್ಯಕ್ತಿತ್ವ ವಿಕಾಸಗೈಯುವಲ್ಲಿ ತಮ್ಮದೇ ಆದ ವಿಶಿಷ್ಠ ಪಾತ್ರ ಹೊಂದಿವೆ.

## ಸಮಾಜ (Society)

ಮಾನವ ಸಮಾಜಜೀವಿ. ಸಮಾಜವಿಲ್ಲದೆ ಇವನು ಬದುಕಲಾರ, ಸಮಾಜವೆಂಬ ಚೌಕಟ್ಟಿನಲ್ಲಿ ಮಾತ್ರ ಇವನ ವ್ಯಕ್ತಿತ್ವ ರೂಪಗೊಳ್ಳಲು ಸಾಧ್ಯ. ಸಮಾಜ ಕೇವಲ ಹಲವು ವ್ಯಕ್ತಿಗಳ ಸಮೂಹವಾಗಿರದೆ ವ್ಯಕ್ತಿ ವ್ಯಕ್ತಿಗಳ ನಡುವಿನ ಪರಸ್ಪರ ಸಂಬಂಧ, ವಿಚಾರಗಳ ವಿನಿಮಯ ಹಾಗೂ ಹಲವು ನಿಯಮಗಳಿಂದ ಇದು ರೂಪಿತವಾಗಿದೆ. ಇದು ವ್ಯಕ್ತಿಯ ಬದುಕಿಗೆ ಅರ್ಥ ನೀಡಿ ಅವನಿಗೆ ವ್ಯಕ್ತಿತ್ವ ತಂದುಕೊಡುತ್ತದೆ. ವ್ಯಕ್ತಿಗೆ ಶಿಕ್ಷಣದ ವ್ಯವಸ್ಥೆ ಮಾಡಿ ಔಪಚಾರಿಕ, ಅನೌಪಚಾರಿಕ ಹಾಗೂ ಸಮೂಹ ಮಾಧ್ಯಮಗಳ ಮೂಲಕ ಅವನನ್ನು ಸುಸಂಸ್ಕೃತ ಹಾಗೂ ನಾಗರಿಕನನ್ನಾಗಿ ಮಾಡುವ ವಾತಾವರಣ ಸೃಷ್ಟಿಸಿ, ಅವನ ವ್ಯಕ್ತಿತ್ವ ವಿಕಾಸಕ್ಕೆ ಕಾರಣವಾಗಿದೆ.

ಸಮಾಜವು ಸಾಮಾಜಿಕ ಸಂಬಂಧಗಳ ಒಂದು ಬಲೆ. ಇಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವೆ ಪರಸ್ಪರ ಕ್ರಿಯೆ ಪ್ರತಿಕ್ರಿಯೆಗಳ ಕಾರ್ಯ ಸಾಗುತ್ತದೆ. ಒಬ್ಬರಿಗೊಬ್ಬರ ಪರಸ್ಪರ ಅವಲಂಬನದಿಂದ ಮಾನವ ಸಮಾಜಜೀವಿ ಎನಿಸಿಕೊಳ್ಳುತ್ತಾನೆ. ಇದು ಅವನ ವ್ಯಕ್ತಿತ್ವ ವಿಕಾಸಕ್ಕೆ ಭದ್ರತಳಹದಿ ಹಾಕುತ್ತದೆ. ಮಗುವಿನ ವ್ಯಕ್ತಿತ್ವ ವಿಕಾಸದಲ್ಲಿ ಸಹಾಯಕವಾಗುವ ಕುಟುಂಬ, ಶಾಲೆ ಸಮೂಹ ಮಾಧ್ಯಮಗಳು– ಎಲ್ಲವೂ ಸಮಾಜದ ವ್ಯಾಪ್ತಿಯಲ್ಲಿಯೇ ಬರುತ್ತವೆ. ಹೀಗಾಗಿ ವ್ಯಕ್ತಿಯ ವ್ಯಕ್ತಿತ್ವದ ಮೇಲೆ ಇವೆಲ್ಲವುಗಳಿಂದಾಗುವ ಪ್ರಭಾವ ಸಮಾಜದ್ದೇ ಆಗಿದೆ. ಸಮಾಜದ ಆಚಾರ ವಿಚಾರಗಳು, ನೀತಿ ನಿಯಮಗಳು, ಕಾಯಿದೆ ಕಾನೂನುಗಳು, ಸಾಂಪ್ರದಾಯಿಕ ವಿಚಾರಗಳು, ರೂಢಿಗಳು, ನಂಬಿಕೆಗಳು, ಸಂಸ್ಕೃತಿ, ನಾಗರಿಕತೆ, ಸಮೂಹ ಮನೋಭಾವಗಳು– ಎಲ್ಲವೂ ಆ ಸಮಾಜದಲ್ಲಿ ಬೆಳೆದು ಬರುವ ವ್ಯಕ್ತಿಯ ವ್ಯಕ್ತಿತ್ವ ವಿಕಾಸದ ಮೇಲೆ ತಮ್ಮದೇ ಆದ ಪ್ರಭಾವ ಬೀರುತ್ತವೆ. ಆಯಾ ಸಮಾಜದ ಸಾಮಾಜಿಕ ಮೌಲ್ಯಗಳು, ವಿಚಾರಗಳು ವ್ಯಕ್ತಿಯ ವ್ಯಕ್ತಿತ್ವದ ಮೌಲ್ಯ ಹೆಚ್ಚಿಸುವಲ್ಲಿ ಸಹಾಯಕವಾಗುತ್ತದೆ. ಸಮಾಜದ ಹಿರಿಯರು, ಗಣ್ಯವ್ಯಕ್ತಿಗಳು. ಸುಸಂಸ್ಕೃತ ನಾಗರಿಕರಾಗಿದ್ದಲ್ಲಿ ಅವರ ವರ್ತನೆಗಳು ಆ ಸಮಾಜದಲ್ಲಿ ಬೆಳೆಯುವ ಮಕ್ಕಳ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತವೆ. ಅನುಕರಣೀಯ ಹಿರಿಯರು ಮಾತ್ರ ಮಕ್ಕಳ ವ್ಯಕ್ತಿತ್ವ ಸುಧಾರಿಸಬಲ್ಲರು.

## ಸಮೂಹ ಮಾಧ್ಯಮ (Mass Media)

ಸಮೂಹ ಮಾಧ್ಯಮಗಳೆಂಬ ನವೀನ ತಾಂತ್ರಿಕ ಸಾಧನಗಳು ಸಾಮೂಹಿಕ ಶಿಕ್ಷಣ ನೀಡುವಲ್ಲಿ ಇಂದು ಮಹತ್ವದ ಪಾತ್ರ ನಿರ್ವಹಿಸುತ್ತಿವೆ. ಒಂದು ಸಂದೇಶವನ್ನು ಅಸಂಖ್ಯಾತ ಜನರಿಗೆ ಅಂದರೆ ಇಡೀ ವಿಶ್ವಕ್ಕೆ ಏಕಕಾಲದಲ್ಲಿಯೇ ತಲುಪಿಸುವಂತಹ ತಾಂತ್ರಿಕೆ ಮಾಧ್ಯಮಗಳನ್ನೇ **'ಸಮೂಹ ಮಾಧ್ಯಮಗಳು'** ಎನ್ನಲಾಗುತ್ತದೆ. ಜನ ಸಮುದಾಯವನ್ನು ಗುರಿಯಾಗಿಟ್ಟುಕೊಂಡು ಸಾಮೂಹಿಕವಾಗಿ ಶಿಕ್ಷಣ ಪ್ರಸಾರ ಮಾಡುವ ಮಾಧ್ಯಮಗಳು ಇವಾಗಿವೆ. ಉದಾಹರಣೆಗೆ ಪತ್ರಿಕೆ, ರೇಡಿಯೋ, ದೂರದರ್ಶನ ಮತ್ತು ಅಂತರ್‌ಜಾಲ ಇತ್ಯಾದಿಗಳು. ಸಮೂಹ ಮಾಧ್ಯಮಗಳ ಪ್ರಭಾವ ಪ್ರಸಕ್ತ ಪರಿಸ್ಥಿತಿಯಲ್ಲಿ ಜನರ ಮೇಲೆ ಅತ್ಯಂತ ಹೆಚ್ಚು ಪರಿಣಾಮಕಾರಿಯಾದ ರೀತಿಯಲ್ಲಿ ಶಿಕ್ಷಣ ಪ್ರಸಾರ ಮಾಡುತ್ತಿವೆ. ಎಲ್ಲ ವರ್ಗದ ಜನರನ್ನೂ ಆಕರ್ಷಿಸಿ ಅವರ ಜ್ಞಾನ ವಿಕಾಸದ ಜೊತೆಗೆ ಮನೋರಂಜನೆಯ ಸಾಧನಗಳೂ ಆಗಿವೆ. ವಿವಿಧ ಆಸಕ್ತಿ , ಅಭಿರುಚಿ, ಮನೋಭಾವ ಹೊಂದಿರುವ ಯಾವುದೇ ವರ್ಗದ ಜನರಿಗೆ ಆಯ್ಕೆ ಮಾಡಿದ ವಿಷಯಗಳು ಕುರಿತಂತೆ ಜ್ಞಾನ ನೀಡುವಲ್ಲಿ ಇವುಗಳ ಪಾತ್ರ ಮಹತ್ವದ್ದು.

ವ್ಯಕ್ತಿಯ ವ್ಯಕ್ತಿತ್ವ ವಿಕಾಸ ಕಾರ್ಯದಲ್ಲಿ ಸಮೂಹ ಮಾಧ್ಯಮಗಳ ಕೆಳಕಂಡ ಕಾರ್ಯಕ್ರಮಗಳು ಸಹಾಯಕಾರಿ.

- ವ್ಯಕ್ತಿಗೆ ವಿಶ್ವದ ದಿನನಿತ್ಯದ ವಿದ್ಯಮಾನಗಳ ಮಾಹಿತಿ ನೀಡಿ ಅವನ ಜ್ಞಾನಾರ್ಜನೆಯಲ್ಲಿ ಸಹಾಯಕ.
- ದೈಹಿಕ ಹಾಗು ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳ ಪ್ರಭಾವ.
- ಪತ್ರಿಕೆ ಹಾಗೂ ದೂರದರ್ಶನದ ಮೂಲಕ ಆಯೋಜಿಸಿರುವ ವಿವಿಧ ಲೇಖನಗಳು, ಸಂವಾದಗಳು, ಚರ್ಚೆಗಳು ವಿಚಾರ ಸಂಕಿರಣಗಳು, ರಸಪ್ರಶ್ನೆ ಕಾರ್ಯಕ್ರಮಗಳು
- ಸಮಾಜದಲ್ಲಿ ನಡೆಯುತ್ತಿರುವ ಸಾಮಾಜಿಕ ಹಾಗೂ ಆರ್ಥಿಕ ಶೋಷಣೆ ಕುರಿತಾದ ವೈಚಾರಿಕತೆಯಿಂದ ಕೂಡಿದ ಕಾರ್ಯಕ್ರಮಗಳು.

- ಸಾಮಾಜದ ಜನರಲ್ಲಿರುವ ಅಂಧಶ್ರದ್ಧೆ,ಮೂಢನಂಬಿಕೆ,ಅಮಾನವೀಯ ರೂಢಿಗಳ ಬಗ್ಗೆ ವೈಜ್ಞಾನಿಕ ಪ್ರಜ್ಞೆ ಮೂಡಿಸುವ ಕಾರ್ಯಕ್ರಮಗಳು.
- ಆಧ್ಯಾತ್ಮಿಕ ವೈಚಾರಿಕೆಯಿಂದ ಕೂಡಿದ ಕಾರ್ಯಕ್ರಮಗಳು ಇತ್ಯಾದಿ.

ಇಂದು ಸಮೂಹ ಮಾಧ್ಯಮಗಳು ಅತ್ಯಂತ ಪ್ರಭಾವಶಾಲಿ ಮಾಧ್ಯಮಗಳಾಗಿರುವ ದೂರದರ್ಶನ, ಸಿನಿಮಾ ಹಾಗೂ ಅಂತರ್‌ಜಾಲ ಇವು ವಿನಾಶಕ್ಕೆ ಕಾರಣೀಭೂತವಾದ ಮಾಧ್ಯಮಗಳಾಗಿವೆ ಎನ್ನುವುದು ಶೋಚನೀಯ. ಮಕ್ಕಳು ಇವುಗಳನ್ನು ಉಪಯೋಗ ಮಾಡಿಕೊಳ್ಳುವುದಕ್ಕಿಂತ ಹೆಚ್ಚಾಗಿ ದುರುಗಪಯೋಗಪಡಿಸಿಕೊಂಡು ವ್ಯಕ್ತಿತ್ವವನ್ನೇ ಸರ್ವನಾಶ ಮಾಡಿಕೊಳ್ಳುತ್ತಿರುವುದು ವಿಷಾದನೀಯ.

### 3.1.3 ವ್ಯಕ್ತಿತ್ವದ ಮೌಲ್ಯ ನಿರ್ಧಾರ – ವ್ಯಕ್ತಿತ್ವ ಪರೀಕ್ಷೆಯ ಪ್ರಕಾರಗಳು – ವ್ಯಕ್ತಿನಿಷ್ಠ ಹಾಗೂ ವಸ್ತುನಿಷ್ಠ ಪದ್ಧತಿಗಳು , ಪ್ರಕ್ಷೇಪಣಾ ತಂತ್ರಗಳು

## (Assessment of Personality – Types of personality tests - subjective and objective methods, Projective techniques.

ವ್ಯಕ್ತಿತ್ವ ಪದವು ಅತ್ಯಂತ ಸಂಕೀರ್ಣ ಹಾಗೂ ಅಮೂರ್ತ ಪರಿಕಲ್ಪನೆಯಾಗಿದೆ. ಪ್ರತಿಯೊಬ್ಬ ವ್ಯಕ್ತಿ ತನ್ನದೇ ಆದ ವ್ಯಕ್ತಿತ್ವದ ಗುಣಸ್ವಭಾವಗಳನ್ನು ಹೊಂದಿರುತ್ತಾನೆ. ವ್ಯಕ್ತಿ ತನ್ನ ಸ್ವಭಾವಗಳನ್ನು ತಾನು ಅರಿಯಲು ಮತ್ತು ಇತರರ ವ್ಯಕ್ತಿತ್ವದ ಗುಣಸ್ವಭಾವಗಳನ್ನು ಅರಿಯುವ ಮೂಲಕ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಈ ದೃಷ್ಠಿಯಲ್ಲಿ ವ್ಯಕ್ತಿತ್ವ ಮಾಪನ ಅಗತ್ಯ. ಈ ಮಾಪನದಿಂದ ವ್ಯಕ್ತಿಗಳ ಗುಣಸ್ವಭಾವ ಅರಿಯುವ ಮೂಲಕ ಅವರನ್ನು ವರ್ಗೀಕರಿಸುವಲ್ಲಿ, ಅವರೊಡನೆ ವ್ಯವಹರಿಸುವ ತಂತ್ರ ಬಳಸುವಲ್ಲಿ ಸಹಾಯಕವಾಗುತ್ತದೆ.

ವ್ಯಕ್ತಿಯ ವರ್ತನೆ, ಗುಣ ಸ್ವಭಾವ ಹಾಗೂ ದೈಹಿಕ ಸದೃಢತೆ ಕೂಡ ಪರಿಸ್ಥಿತಿಗೆ ತಕ್ಕಂತೆ ಬದಲಾಗುವುದು ಸಹಜ. ಹೀಗಾಗಿ ವ್ಯಕ್ತಿತ್ವ ಮಾಪನ ಕಷ್ಟಸಾಧ್ಯ. ಆದರೂ ಮನೋವಿಜ್ಞಾನಿಗಳು ವ್ಯಕ್ತಿತ್ವ ಪರೀಕ್ಷಣಗಳನ್ನು ಪ್ರಮುಖವಾಗಿ 3 ರೀತಿಯಲ್ಲಿ ವರ್ಗೀಕರಿಸಿ ಉದಾಹರಿಸಿದ್ದಾರೆ. ಆ ಉದಾಹರಣೆಗಳಲ್ಲಿ ಒಂದೊಂದನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ

**ವ್ಯಕ್ತಿತ್ವ ಪರೀಕ್ಷೆಗಳು**

| ವ್ಯಕ್ತಿನಿಷ್ಠ ಪದ್ಧತಿಗಳು | ವಸ್ತುನಿಷ್ಠ ಪದ್ಧತಿಗಳು | ಪ್ರಕ್ಷೇಪಣ ತಂತ್ರಗಳು. |
|---|---|---|
| 1. ಸಂದರ್ಶನ | 1. ದರ್ಜಾಮಾಪನಗಳು | 1. ಕಥಾ ಸಂಪ್ರತ್ಯಕ್ಷಣಾ ಪರೀಕ್ಷೆ |
| 2. ವ್ಯಕ್ತಿ ಅಧ್ಯಯನ | 2. ವೀಕ್ಷಣೆ | 2. ರೋರ್‌ಷಾಕ್ ಮಸಿ ಗುರುತು ಪರೀಕ್ಷೆ |
| 3. ಆತ್ಮಚರಿತ್ರೆ | 3. ತಾಳೆಪಟ್ಟಿಗಳು | 3. ಪದ ಸಂಯೋಜನೆ ಪರೀಕ್ಷೆ. |
| | 4. ಪ್ರಶ್ನಾವಳಿಗಳು | 4. ವಾಕ್ಯಪೂರ್ಣಗೊಳಿಸುವ ಪರೀಕ್ಷೆ |
| | 5. ತಪಶೀಲು ಪಟ್ಟಿಗಳು . | |

### 1. ವ್ಯಕ್ತಿನಿಷ್ಠ ಪರೀಕ್ಷೆಗಳು (Subjective methods)

ಇವು ಒಬ್ಬ ವ್ಯಕ್ತಿಗೆ ಪೂರ್ವ ನಿರ್ಧಾರಿತ ಪರೀಕ್ಷಾಂಶಗಳಿಗೆ ಉತ್ತರ ನೀಡುವಂತೆ ಪ್ರಚೋದಿಸಿ ಅವನ ವ್ಯಕ್ತಿತ್ವ ಮಾಪನ ಮಾಡುವ ಪರೀಕ್ಷೆಗಳು. ವ್ಯಕ್ತಿಗೆ ಅವನ ಆಂತರಿಕ ಭಾವನೆ ಹಾಗೂ ವಿಚಾರಗಳನ್ನು ಪ್ರಶ್ನಿಸುವುದರ ಮೂಲಕ ಹೊರಹಾಕುವಂತೆ ಮಾಡುವುದು ಈ ಪರೀಕ್ಷೆಗಳ ಉದ್ದೇಶ. ವ್ಯಕ್ತಿ ಉತ್ತರಿಸುವಾಗ ತನ್ನ ಸ್ವಯಂ ಆಸಕ್ತಿ ಮನೋಭಾವ ಅಗತ್ಯತೆ ಹಾಗೂ ಸ್ವಯಂ ಅನುಭಾವದ ವಿಚಾರಗಳನ್ನು ಹೊರಗೆಡಹುತ್ತಾನೆ ಎಂಬ ನಂಬಿಕೆಯ ಆಧಾರದ ಮೇಲೆ ಈ ವಿಧಾನ ಬಳಸಿ ವ್ಯಕ್ತಿತ್ವ ಮಾಪನ ಮಾಡಲಾಗುತ್ತದೆ.

ಉದಾ : ಸಂದರ್ಶನ, ವ್ಯಕ್ತಿ ಅಧ್ಯಯನ ಹಾಗೂ ಆತ್ಮ –ಚರಿತ್ರೆಗಳ ಮೂಲಕ ವ್ಯಕ್ತಿಮಾಪನ ಸಾಧ್ಯ.

### ಸಂದರ್ಶನ (Interview)

ಒಬ್ಬ ವ್ಯಕ್ತಿಯ ವ್ಯಕ್ತಿತ್ವದ ಮೌಲ್ಯ ನಿರ್ಧಾರದಲ್ಲಿ ಸಂದರ್ಶನ ತಂತ್ರ ಅತ್ಯಂತ ಪ್ರಮುಖ. ಈ ತಂತ್ರದಲ್ಲಿ ವ್ಯಕ್ತಿತ್ವ ನಿರ್ಧರಿಸಬೇಕಾದ ವ್ಯಕ್ತಿಯ ಹಾಗೂ ಸಂದರ್ಶನಕಾರರ ಮುಖಾಮುಖಿ ಭೇಟಿಯ ಮೂಲಕ ಕಾರ್ಯ ನಡೆಯುತ್ತದೆ.

ವ್ಯಕ್ತಿಯನ್ನು ಈ ರೀತಿ ಮುಖಾಮುಖಿಯಾಗಿ ಭೇಟಿ ಮಾಡಿ ಮೊದಲೇ ನಿರ್ಧರಿಸಿ ಸಿದ್ಧಪಡಿಸಿದ ಪ್ರಶ್ನೆಗಳನ್ನು ಕೇಳಿ ಸಂದರ್ಭಕ್ಕೆ ತಕ್ಕಂತೆ ಪ್ರಶ್ನೆಗಳನ್ನು ಕೇಳುವ ಮೂಲಕ ಅವನು ತನ್ನ ಬಗ್ಗೆ ಮಾತನಾಡುವಂತೆ ಪ್ರೋತ್ಸಾಹಿಸಿ ಮಾಹಿತಿ ಸಂಗ್ರಹಿಸುವ ವಿಧಾನವೇ **'ಸಂದರ್ಶನ'**. ಈ ತಂತ್ರದಲ್ಲಿ ಸಂದರ್ಶನಕಾರರು ಸಂದರ್ಶನಾರ್ಥಿಗೆ ನೇರವಾದ ಪ್ರಶ್ನೆಗಳನ್ನು ಕೇಳುವ ಮೂಲಕ ಅವಶ್ಯಕವಿರುವ ಮಾಹಿತಿ ಸಂಗ್ರಹಿಸಿ ಅವನ ವ್ಯಕ್ತಿತ್ವದ ಬಗ್ಗೆ ನಿರ್ಧಾರ ಕೈಗೊಳ್ಳುವರು.

ಸಂದರ್ಶನ ತಂತ್ರವು ಅತ್ಯಂತ ಪುರಾತನ ತಂತ್ರವಾಗಿದ್ದು. ವ್ಯಕ್ತಿಯ ಹಾವಭಾವ, ಧ್ವನಿ, ಉಚ್ಚಾರಣೆ, ಧೈರ್ಯ, ಮಾತುಗಾರಿಕೆ, ಪ್ರಶ್ನೆಗೆ ತಕ್ಕ ಪ್ರತಿಕ್ರಿಯೆಯ ರೀತಿ ಆಧರಿಸಿ ಅವನ ವ್ಯಕ್ತಿತ್ವದ ಮೌಲ್ಯ ನಿರ್ಧಾರ ಮಾಡುವ ಒಂದು ಉತ್ತಮ ಹಾಗೂ ಸುಲಭ ತಂತ್ರವಾಗಿದೆ. ಹೀಗೆ ಸಂದರ್ಶನ ತಂತ್ರ ಇಬ್ಬರು ವ್ಯಕ್ತಿಗಳ (ಸಂದರ್ಶಕ ಹಾಗೂ ಸಂದರ್ಶನಾರ್ಥಿ) ನಡುವೆ ನಡೆಯುವ ಸಂಭಾಷಣೆಯಾಗಿದ್ದು ಒಬ್ಬರಿಗೊಬ್ಬರು ತಮ್ಮ ತಮ್ಮ ವ್ಯಕ್ತಿತ್ವವನ್ನು ಪರಿಚಯಿಸಿಕೊಳ್ಳುವ ಸಾಧನವಾಗಿದೆ. ಸಾಮಾನ್ಯವಾಗಿ ವಕೀಲರು, ವೈದ್ಯರು, ಪತ್ರಕರ್ತರು, ಶಿಕ್ಷಕರು– ಇವರೆಲ್ಲರೂ ಈ ತಂತ್ರವನ್ನು ಉಪಯೋಗಿಸಿ ತಮ್ಮ ಉದ್ದೇಶ ಪೂರೈಸಿಕೊಳ್ಳುವರು. ಇಂತಹ ಸಂದರ್ಭದಲ್ಲಿ ವ್ಯಕ್ತಿಯ ವ್ಯಕ್ತಿತ್ವ ನಿರ್ಧಾರ ಸುಲಭ ಸಾಧ್ಯ. ಪತ್ರಕರ್ತರಂತೂ ಮಾತಿನ ಚಾಕಚಕ್ಯತೆ ಹಾಗೂ ಪ್ರಶ್ನೆಗಳ ತಾಂತ್ರಿಕತೆಯಿಂದ ವ್ಯಕ್ತಿಗಳನ್ನು ಅವರ ವ್ಯಕ್ತಿತ್ವ ಹೊರಚೆಲ್ಲುವಂತೆ ಮಾಡುವರು. ಶಿಕ್ಷಕರು ಮಕ್ಕಳನ್ನು ಸಂದರ್ಶನದ ಮೂಲಕ ಅವರ ವ್ಯಕ್ತಿತ್ವ ಸ್ವರೂಪವನ್ನು ಸುಲಭವಾಗಿ ತಿಳಿಯಬಲ್ಲರು.

### 2. ವಸ್ತುನಿಷ್ಠ ಪದ್ಧತಿಗಳು (Objective methods)

ಇವು ವ್ಯಕ್ತಿತ್ವ ಮಾಪನ ಮಾಡುವಾಗ ವ್ಯಕ್ತಿಯ ವೈಯಕ್ತಿಕ ವಿಚಾರಗಳನ್ನು ಆಧರಿಸಿರದೆ ವ್ಯಕ್ತಿಯ ಬಾಹ್ಯ ವರ್ತನೆ/ ಚಟುವಟಿಕೆಗಳನ್ನಾಧರಿಸಿ ವೀಕ್ಷಣೆ ಮೂಲಕ ವ್ಯಕ್ತಿತ್ವ ಮಾಪನ ಮಾಡುವ ಪರೀಕ್ಷೆಗಳು. ವೀಕ್ಷಣಾಕಾರ ವ್ಯಕ್ತಿತ್ವ ಮಾಪನ ಮಾಡಬೇಕಾದ ವ್ಯಕ್ತಿಯ ಬಾಹ್ಯ ಚಟುವಟಿಕೆಗಳನ್ನು ವೀಕ್ಷಿಸಿ ವೀಕ್ಷಿತಾಂಶಗಳನ್ನು ದಾಖಲು ಮಾಡಿಕೊಂಡು ವ್ಯಕ್ತಿಯ ವ್ಯಕ್ತಿತ್ವದ ನಿರ್ಧಾರ ಮಾಡುತ್ತಾನೆ. ಉದಾ : ದರ್ಜಾಮಾಪನಗಳು, ವೀಕ್ಷಣೆ, ತಾಳೆಪಟ್ಟಿಗಳು, ಪ್ರಶ್ನಾವಳಿಗಳು ಹಾಗೂ ತಪಶೀಲು ಪಟ್ಟಿಗಳು.

### ದರ್ಜಾ ಮಾಪನಗಳು (Rating Scales):

ವ್ಯಕ್ತಿತ್ವ ಮೌಲ್ಯ ನಿರ್ಧಾರ ಮಾಡುವ ತಂತ್ರಗಳಲ್ಲಿ ಮತ್ತೊಂದು ಪ್ರಮುಖ ತಂತ್ರವೆಂದರೆ ದರ್ಜಾಮಾಪನ ಅಥವಾ ಸ್ಥಾನನಿರ್ಣಯ ಮಾಪನ. ವಿವಿಧ ಮಟ್ಟದಲ್ಲಿ ಇರಬಹುದಾದ ಗುಣಗಳು ಇಚ್ಛಿತ ವ್ಯಕ್ತಿಯಲ್ಲಿ ಯಾವ ಮಟ್ಟದಲ್ಲಿವೆ ಎಂಬುದನ್ನು ನಿರ್ಧರಿಸಲು ಬಳಸುವ ತಂತ್ರವೇ **'ದರ್ಜಾನಿರ್ಣಯ ಮಾಪನ'**. ಯಾವುದೇ ಕಾರ್ಯ ಚಟುವಟಿಕೆಯಲ್ಲಿ ವ್ಯಕ್ತಿಗಳೆಲ್ಲರೂ ಒಂದೇ ರೀತಿಯಲ್ಲಿ ಗುಣಮಟ್ಟ ಹೊಂದಿರಲಾರರು. ಅವನ ವರ್ತನಾ ಗುಣಲಕ್ಷಣಗಳು ಯಾವ ಸ್ಥಾನದಲ್ಲಿ ಅಥವಾ ದರ್ಜಾಯಲ್ಲಿವೆ ಎಂಬುದನ್ನು ಪರಿಶೀಲಿಸುವ ಸಾಧನವೇ ದರ್ಜಾಮಾಪನ. ಶಿಕ್ಷಕರ ದಕ್ಷತೆ. ವಿದ್ಯಾರ್ಥಿಗಳ ಸಾಧನೆ. ಮನೋಭಾವ ಹಾಗೂ ಇತರ ಗುಣಲಕ್ಷಣಗಳ ಮೌಲ್ಯ ನಿಷ್ಕರ್ಷಿಸುವ ಮೂಲಕ ಅವರ ವ್ಯಕ್ತಿತ್ವ ಮೌಲ್ಯ ನಿರ್ಧರಿಸುವಲ್ಲಿ ಈ ಸ್ಥಾನ ನಿರ್ಣಯ ಮಾಪನ ಅತ್ಯಂತ ಉಪಯುಕ್ತವಾಗಿದೆ.

ಉದಾ : ಶಿಕ್ಷಕನ ಪಾಠದ ಬಗ್ಗೆ ಮಕ್ಕಳ ಅಭಿಪ್ರಾಯ **(5 Point Scale)**

ಅತ್ಯುತ್ತಮ ಉತ್ತಮ ಸಾಮಾನ್ಯ ಉತ್ತಮವಿಲ್ಲ ಎಳ್ಳಷ್ಟು ಉತ್ತಮವಿಲ್ಲ.

ದರ್ಜಾ ಮಾಪನಗಳು ವ್ಯಕ್ತಿತ್ವದ ಗುಣಮಟ್ಟಗಳ ಮೌಲ್ಯ ಹಾಗೂ ಸ್ಥಾನ ನಿರ್ಧರಿಸುವಲ್ಲಿ ತಪಶೀಲುಪಟ್ಟಿಗಳಿಗಿಂತ ಉತ್ತಮ ಸಾಧನಗಳು. ಇವುಗಳ ಮಹತ್ವದ ಉಪಯೋಗವೆಂದರೆ ವ್ಯಕ್ತಿತ್ವ ಗುಣಗಳ ಮಟ್ಟವನ್ನು ಅಭಿವ್ಯಕ್ತಿಗೊಳಿಸುವುದು. ಒಂದಕ್ಕಿಂತ ಹೆಚ್ಚು ಮಾಪನಗಳನ್ನು ಬಳಸಿ ತೀರ್ಮಾನ ಕೈಗೊಂಡಲ್ಲಿ ವ್ಯಕ್ತಿತ್ವದ ಬಗ್ಗೆ ಅತ್ಯುತ್ತಮ ನಿರ್ಧಾರ ಕೈಗೊಳ್ಳಬಹುದು.

### 3. ಪ್ರಕ್ಷೇಪಣ ತಂತ್ರಗಳು (Projective Techniques)

ಪ್ರಕ್ಷೇಪಣ ತಂತ್ರಗಳು ವ್ಯಕ್ತಿತ್ವ ಮೌಲ್ಯ ನಿರ್ಧರಿಸುವ ಅತ್ಯಂತ ಆಧುನಿಕ ತಂತ್ರಗಳಾಗಿವೆ. ವ್ಯಕ್ತಿಯ ಆಂತರಿಕ ಭಾವನೆಗಳು ಹಾಗೂ ಮನೋಧೋರಣೆಗಳ ಮೌಲ್ಯ ನಿರ್ಧಾರದ ದೃಷ್ಠಿಯಿಂದ ಈ ತಂತ್ರಗಳು ಸಹಾಯಕ. ಪ್ರತಿಯೊಬ್ಬ ವ್ಯಕ್ತಿ ತನ್ನದೇ ಆದ ಆಸೆ, ಬಯಕೆ, ಮನೋಭಾವ, ಆಸಕ್ತಿ ಒಲವುಗಳನ್ನು ಹೊಂದಿರುತ್ತಾರೆ. ಈ ಗುಣಗಳನ್ನು ಅಳೆಯುವುದು ವ್ಯಕ್ತಿತ್ವ ಮೌಲ್ಯ ನಿರ್ಧಾರದ ದೃಷ್ಠಿಯಿಂದ ಅತ್ಯಾವಶ್ಯಕ. ವ್ಯಕ್ತಿಯ ಅಜಾಗೃತ ಸ್ಥಿತಿಯನ್ನು ಹೊರಹಾಕುವ ಮೂಲಕ ವ್ಯಕ್ತಿತ್ವದ ಮೌಲ್ಯ ನಿರ್ಧಾರ ಮಾಡುವಲ್ಲಿ ಈ ನವೀನ ರೀತಿಯ ಪ್ರಕ್ಷೇಪಣಾ ತಂತ್ರಗಳು ಸಹಾಯಕವಾಗಿವೆ.

ಈ ಪ್ರಕ್ಷೇಪಣಾ ತಂತ್ರಗಳು ವ್ಯಕ್ತಿಯ ಅಂತರಂಗದ ಅಂದರೆ ಅವನ ಸುಪ್ತ (ಅಜಾಗೃತ) ಮನಸ್ಸಿನಲ್ಲಿರುವ ಭಾವನೆ ಮತ್ತು ಪ್ರತಿಮೆಗಳನ್ನು ಹೊರೆಹಾಕುವಂತೆ ಮಾಡುವ ಉದ್ದೇಶ ಹೊಂದಿವೆ.

ಮನೋವಿಶ್ಲೇಷಣಾಕಾರರು ಅಭಿಪ್ರಾಯಪಡುವಂತೆ ಪ್ರಕ್ಷೇಪಣೆಯು ಒಂದು ರಕ್ಷಣಾ ತಂತ್ರವಾಗಿದ್ದು, ವ್ಯಕ್ತಿಯು ತನ್ನ ಬಯಕೆ ಹಾಗೂ ಪ್ರವೃತ್ತಿಗಳನ್ನು ಸ್ವಾಭಾವಿಕವಾಗಿ ಬಾಹ್ಯರೂಪದ ಮತ್ತೊಂದು ವಸ್ತು ಅಥವಾ ಅಂಶಕ್ಕೆ ವರ್ಗಾಯಿಸುವ ಮೂಲಕ ಹೊರಹಾಕುತ್ತಾನೆ. ಬಾಹ್ಯ ಪ್ರಪಂಚವನ್ನು ಇಬ್ಬರು ವ್ಯಕ್ತಿಗಳು ಸಮಾನ ರೀತಿಯಲ್ಲಿ ಕಾಣುವುದಿಲ್ಲ ಎಂಬ ವಿಚಾರ ಸುಲಭ ರೀತಿಯಲ್ಲಿ ನಿರ್ಧರಿಸಬಲ್ಲ ತಂತ್ರವಾಗಿದೆ. ಈ ತಂತ್ರದಲ್ಲಿ ವ್ಯಕ್ತಿಯನ್ನು ಕಥೆ ಬರೆಯುವಂತೆ ಅಥವಾ ಮಸಿ ಒತ್ತಿಗೆ ಅರ್ಥ ಸೂಚಿಸುವಂತೆ ಪ್ರಚೋದಿಸಿ ಅವನ ಆಂತರಿಕ ಭಾವನೆ ಅನಿಸಿಕೆ ಹಾಗೂ ಬಯಕೆಗಳನ್ನರಿಯಬಹುದಾಗಿದೆ.

ಈ ಪ್ರಕ್ಷೇಪಣಾ ತಂತ್ರಗಳಲ್ಲಿ ಮುಖ್ಯವಾದವುಗಳೆಂದರೆ, ಕಥಾ ಸಂಪ್ರತ್ಯಕ್ಷಣಾ (ಅಂತಶ್ವೇತಾನಾಭಿ) (Thematic Apperception Test (TAT), ರೋರಕಷಾಕ್ ಮಸಿ ಒತ್ತಿನ ಪರೀಕ್ಷಣ (Rorschack Ink-Blot Test), ಪದ ಸಂಯೋಜನೆ ಪರೀಕ್ಷೆ ಹಾಗೂ ವಾಕ್ಯಪೂರ್ಣಗೊಳಿಸುವ ಪರೀಕ್ಷೆ.

#### ಕಥಾ ಸಂಪ್ರತ್ಯಕ್ಷಣಾ (ಅಂತಶ್ವೇತನಾಭಿ) ಪರೀಕ್ಷೆ (Thematic Apperception Test) (TAT)

ಈ ಪರೀಕ್ಷೆಯನ್ನು ಮುರ್ರೆ ಹಾಗೂ ಮಾರ್ಗನ್ ರೂಪಿಸಿರುವರು. ಇದನ್ನು 'ಪ್ರಸಂಗ' ಅನುಬೋಧ ಪರೀಕ್ಷೆ' ಎಂತಲು ಕರೆಯುವರು. ವ್ಯಕ್ತಿತ್ವ ಪರೀಕ್ಷೆಯಲ್ಲಿ ಬಳಸುವ ಒಂದು ಪ್ರಕ್ಷೇಪಣ ತಂತ್ರ ಇದಾಗಿದೆ.

ಪ್ರಮಾಣೀಕರಿಸಿದ ಒಂದು ಶ್ರೇಣಿ ಚಿತ್ರಗಳನ್ನು ವ್ಯಕ್ತಿಗೆ ಕೊಟ್ಟು ಅವುಗಳ ಬಗ್ಗೆ ಅಭ್ಯರ್ಥಿ ನೀಡುವ ವಿವರಣೆಯನ್ನು ಸಂಗ್ರಹಿಸಿ ವಿಶ್ಲೇಷಿಸಿ, ಆ ಮೂಲಕ ಅವನು ಪ್ರಕ್ಷೇಪಿಸಿರುವ ತನ್ನ ಆಂತರಿಕ ಮೌಲ್ಯಗಳು, ಉದ್ದೇಶಗಳು, ಸಹವರ್ತಿ ಭಾವಗಳು, ಮುಂತಾದ ವ್ಯಕ್ತಿ ಲಕ್ಷಣಗಳನ್ನು ನಿರ್ಧರಿಸುವ ತಂತ್ರ ಇದಾಗಿದೆ.

ಇದರಲ್ಲಿ 30 ಚಿತ್ರಗಳಿದ್ದು ಮಾನವನ ಜೀವನದ ವಿವಿಧ ಸನ್ನಿವೇಶ ಪ್ರತಿಬಿಂಬಿಸುತ್ತವೆ. 10 ಪುರುಷರಿಗೆ, 10 ಮಹಿಳೆಯರಿಗೆ ಹಾಗೂ 10 ಇಬ್ಬರಿಗೂ ಸಂಬಂಧಿಸಿದ ಚಿತ್ರಗಳಿರುತ್ತವೆ. ಈ ಚಿತ್ರಗಳನ್ನು ಒಂದೊಂದಾಗಿ ಮಗು ಅಥವಾ_ವ್ಯಕ್ತಿಗೆ ಕೊಟ್ಟು ಆ ಚಿತ್ರದ ಸನ್ನಿವೇಶ ನೋಡಿ ಕಥೆ ಬರೆಯುವಂತೆ ಸೂಚಿಸಬೇಕು. ಚಿತ್ರದ ಸನ್ನಿವೇಶದಲ್ಲಿ ಏನು ನಡೆಯುತ್ತದೆ? ಹಿ0ದೆ ಏನಾಗಿದೆ? ಮುಂದೆ ಏನಾಗಬಹುದು? ಚಿತ್ರಗಳಲ್ಲಿನ ವ್ಯಕ್ತಿಗಳ ಭಾವನೆಗಳೇನು? ಮುಂತಾದವುಗಳಿಗೆ ಸಂಬಂಧಿಸಿದ ಕಥೆ ಬರೆಯುವಂತೆ ತಿಳಿಸಬೇಕು. ಕಥೆ ಬರೆದ ವ್ಯಕ್ತಿ ತನಗರಿಯದಂತೆಯೇ ತನ್ನ ವ್ಯಕ್ತಿತ್ವ ಗುಣಗಳನ್ನು ಕಥೆಯಲ್ಲಿ ಪ್ರಕ್ಷೇಪಿಸುತ್ತಾನೆ. ಕಥೆ ಬರೆದದ್ದನ್ನು ಸೂಕ್ಷ್ಮವಾಗಿ ಓದಿದ ತರುವಾಯ ಕಥೆ ಬರೆದವನ ವ್ಯಕ್ತಿತ್ವದ ಮೌಲ್ಯ ನಿರ್ಧಾರ ಮಾಡಬಹುದು.

## 3.2. ಸಮಾಯೋಜನೆ (Adjustment)

ಮಾನವ ಸಮಾಜ ಜೀವಿ. ಸಾಮಾಜಿಕ ಪರಿಸರದೊಡನೆ ಪ್ರತಿಯೊಬ್ಬ ವ್ಯಕ್ತಿ ಹೊಂದಿಕೊಳ್ಳಬೇಕಾಗುತ್ತದೆ. ಆಗ ಮಾತ್ರ ಅವನು ಶಾಂತಿ ಹಾಗೂ ನೆಮ್ಮದಿಯಿಂದ ಬದುಕಲು ಸಾಧ್ಯ. ಸಮಾಜದ ಬೇಡಿಕೆ ಹಾಗೂ ಒತ್ತಡಗಳಿಗೆ ವ್ಯಕ್ತಿ ತನ್ನನ್ನು ತಾನು ಹೊಂದಿಸಿಕೊಳ್ಳುವಂತೆ ವರ್ತನೆ ತೋರಬೇಕಾಗುತ್ತದೆ. ಬೇಡಿಕೆಗಳು ಆಂತರಿಕವಾಗಿರಬಹುದು ಅಥವಾ ಬಾಹ್ಯ ರೀತಿಯವುಗಳಾಗಿರಬಹುದು. ಎರಡಕ್ಕೂ ವ್ಯಕ್ತಿ ಹೊಂದಿಕೊಳ್ಳಬೇಕು . ಇದನ್ನೇ ಸಮಾಯೋಜನೆ ಎನ್ನುವರು. ಇಂತಹ ಸಮಾಯೋಜನೆಯ ಪ್ರಕ್ರಿಯೆಯಿಂದಲೇ ವ್ಯಕ್ತಿ ಆರೋಗ್ಯಕರ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಾಧ್ಯ.

### 3.2.1 ಸಮಾಯೋಜನೆ– ಪರಿಕಲ್ಪನೆ –ಸಮಾಯೋಜಿತ ವ್ಯಕ್ತಿತ್ವದ ಲಕ್ಷಣಗಳು

### (Adjustment- Concept- Characteristics of a well adjusted personality)

#### ಪರಿಕಲ್ಪನೆ

**ತನ್ನ ಸುತ್ತಲಿನ ಪರಿಸರದೊಂದಿಗೆ ಆರೋಗ್ಯಕರವಾದ ಅಥವಾ ಸಾಮರಸ್ಯಕರ ಸಂಬಂಧ ಸ್ಥಾಪಿಸಿಕೊಳ್ಳುವ ವ್ಯಕ್ತಿಯ ಪ್ರಯತ್ನಪೂರ್ವಕ ಪ್ರಕ್ರಿಯೆಯೇ 'ಸಮಾಯೋಜನೆ'**. ಯಾವುದೇ ಸನ್ನಿವೇಶಕ್ಕೆ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ಹೊಂದಿಸಿಕೊಳ್ಳುವ